18 March 2026 Wednesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬದುಕಿನಲ್ಲಿ ನಾವು ಸಂಗ್ರಹಿಸ ಬೇಕಾಗಿದ್ದು ಸಂತೋಷದ ಕ್ಷಣಗಳನ್ನೇ ಹೊರತು ದುಬಾರಿ ಮಾತುಗಳನ್ನಲ್ಲ!

-ಸ್ನೇಹಾ ಆನಂದ್

info.varthaman@gmail.com



ಒಳ ಮೀಸಲು ವಿರೋಧಿಸಿ 25ರಂದು ಬೆಂಗಳೂರಲ್ಲಿ ಬೃಹತ್ ಹೋರಾಟ ಪುಟ ಸಂ. 2



ಗ್ಯಾಸ್ ಏಜೆನ್ಸಿ ಮುಂದೆ ಜನಸ್ತೋಮ: ಗ್ರಾಮೀಣ ಭಾಗದಲ್ಲೂ ಗ್ಯಾಸ್ ಟ್ರಬಲ್ ಪುಟ ಸಂ. 3



ಸ್ಥಗಿತಗೊಂಡಿರುವ ರೈಲ್ವೆ ಯೋಜನೆಗಳಿಗೆ ಚಾಲನೆ ನೀಡಿ: ಸಂಸದ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 124 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ರಾಜ್ಯದ ವಿವಿಗಳಿಗೆ ಮೇಜರ್ ಸರ್ಜರಿ


## ಗಂಭೀರ ಸ್ವರೂಪದ ದೀರ್ಘ ಕಾಯಿಲೆಗೆ ಚಿಕಿತ್ಸೆ: ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್

**ಬೆಂಗಳೂರು:** ರಾಜ್ಯದ ವಿಶ್ವವಿದ್ಯಾಲಯಗಳು ವೈದ್ಯಕೀಯ ಭಾಷೆಯಲ್ಲಿ ಹೇಳುವಂತೆ ಗಂಭೀರ ಸ್ವರೂಪದ ದೀರ್ಘ ಕಾಲದ ಕಾಯಿಲೆಗಳಿಂದ ಬಳಲುತ್ತಿವೆ. ಅವುಗಳಿಗೆ ತಾತ್ಕಾಲಿಕ ಮುಲಾಮು ಕೆಲಸ ಮಾಡಲ್ಲ. ಒಳ್ಳೆಯ ಚಿಕಿತ್ಸೆಯನ್ನೇ ಕೊಡಬೇಕು. ಅಂತಹ ಚಿಕಿತ್ಸೆಯನ್ನು ಹಂತ–ಹಂತವಾಗಿ ಕೊಡುವ ಕೆಲಸ ನಮ್ಮ ಸರ್ಕಾರ ಮಾಡುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು.

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮೋದನೆ ನೀಡಿದೆ. ಈ ವರ್ಷ 1,000 ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಪಿಂಚಣಿ ಸಮಸ್ಯೆಯನ್ನು ಪರಿಹರಿಸಲು ಆದಾಯದ ಶೇ.30ನ್ನು ಪಿಂಚಣಿ ಪಾವತಿಗೆ ಮೀಸಲಿಡಲಾಗುವುದು. ಉಳಿದ ಶೇ.70 ಅನ್ನು ಸರ್ಕಾರ ಭರಿಸಲಿದೆ ಎಂದು ಸಚಿವ ಸುಧಾಕರ್ ತಿಳಿಸಿದರು.

ನಿಯಮ 330ರಡಿ ಬಿಜೆಪಿಯ ಡಾ.ತಳವಾರ ಸಾಬಣ್ಣ, ರಾಜ್ಯ ಸರ್ಕಾರದ ವಿಶ್ವವಿದ್ಯಾಲಯಗಳು ಸಮಸ್ಯೆಗಳ ಆಗರ, ಜಾತಿ ಮತ್ತು ಭ್ರಷ್ಟಾಚಾರದ ಕೇಂದ್ರಗಳಾಗಿವೆ. ವಿವಿಗಳ ಸ್ಥಿತಿ ಅಧೋಗತಿಗೆ ತಲುಪಿದೆ ಎಂದು ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಪೂರಕವಾಗಿ ಕಾಂಗ್ರೆಸ್ ಸದಸ್ಯ ಪುಟ್ಟಣ್ಣ ಮಾತನಾಡಿ, ಎಲ್ಲ ವಿವಿಗಳು ಅಧೋಗತಿಗೆ ತಲುಪಿವೆ. ಮುಳುಗುತ್ತಿರುವ ಹಡಗುಗಳಾಂತಾಗಿವೆ. ಸರ್ಕಾರದ ಪಾಲಿಗೆ ಬಿಳಿ ಆನೆಗಳಂತಾಗಿವೆ. ಕಳೆದ 20 ವರ್ಷಗಳಿಂದ ಈ ಸ್ಥಿತಿ ಇದೆ. ಇದರ ಬಗ್ಗೆ ಎರಡ್ಮೂರು ದಿನ ಚರ್ಚೆಗೆ ಅವಕಾಶ ಕೊಡಬೇಕು ಎಂದು ಮನವಿ ಮಾಡಿದರು.

ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಶಿಕ್ಷಣ ಮತ್ತು ಆರೋಗ್ಯಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ಕೊಡಬೇಕು. ವಿವಿಗಳಲ್ಲಿರುವ 14 ಸಾವಿರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಉತ್ತರಿಸಿದ ಸಚಿವರು, ಈ ವಿಷಯಗಳನ್ನು ಸದಸ್ಯರು ಆಗಾಗ ಸರ್ಕಾರಗಳ ಗಮನಕ್ಕೆ ತಂದಿದ್ದರೆ ಇಂದು ಈ ವಿಚಾರ ನನ್ನ ತಲೆಗೆ ಬರುತ್ತಿರಲಿಲ್ಲ. ರಾಜ್ಯದಲ್ಲಿ ವಿವಿಗಳ ಸಂಖ್ಯೆ ಹೆಚ್ಚಾದಂತೆ ಆದಾಯದ ಮೂಲಗಳು ಕಡಿತವಾಗಿದೆ ಎಂದು ತಿಳಿಸಿದರು. ವಿವಿಗಳ ಸಮಸ್ಯೆಗಳನ್ನು ಬಗೆಹರಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸದನದಲ್ಲಿ ಪಕ್ಷ ಮತ್ತು ಸಿದ್ಧಾಂತ ಬಿಟ್ಟು ವಿಶೇಷ ಚರ್ಚೆಗೂ ಸಿದ್ಧ. ಆದರೆ, ಚರ್ಚೆ ಬಳಿಕ ಸರ್ಕಾರ ಕೈಗೊಳ್ಳುವ ತೀರ್ಮಾನಗಳನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳಬೇಕು ಎಂದು ಸಚಿವರು ಹೇಳಿದರು.




### ಮೂಲ ಕಾರಣವನ್ನು ಪರಿಹರಿಸಬೇಕಾಗಿದೆ

**ಕಳೆದ 20 ವರ್ಷಗಳಲ್ಲಿ ವಿಶ್ವವಿದ್ಯಾಲಯಗಳ ಸಮಸ್ಯೆಗಳನ್ನು ಎತ್ತಿಕೊಂಡು ಪರಿಹರಿಸಿದ್ದರೆ ಎಲ್ಲವನ್ನೂ ಪರಿಹರಿಸುವ ಹೊರೆ ಸಂಪೂರ್ಣವಾಗಿ ಪ್ರಸ್ತುತ ಸರ್ಕಾರದ ಮೇಲೆ ಬೀಳುತ್ತಿರಲಿಲ್ಲ. ಸಾರ್ವಜನಿಕ ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಸಮಸ್ಯೆಗಳು ತೀವ್ರವಾಗಿಲ್ಲ. ಬದಲಾಗಿ ದೀರ್ಘಕಾಲೀನವಾಗಿವೆ. ಅವುಗಳನ್ನು ಸುಧಾರಿಸಲು ಮೂಲ ಕಾರಣವನ್ನು ಪರಿಹರಿಸಬೇಕಾಗಿದೆ ಎಂದು ಹೇಳಿದರು.**

### ಸಂಪುಟ ಉಪಸಮಿತಿ ರಚನೆ

**ರಾಜ್ಯದಲ್ಲಿ 32 ವಿಶ್ವವಿದ್ಯಾಲಯಗಳಿವೆ. ಅವುಗಳನ್ನು ಸರಿಯಾದ ಪರಿಗಣನೆಯಿಲ್ಲದೆ ಸ್ಥಾಪಿಸಲಾಗಿದೆ. ಹೀಗಾಗಿ ಆದಾಯ, ಪಿಂಚಣಿ ಮತ್ತು ಸಿಬ್ಬಂದಿ ಕೊರತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿವೆ. ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಲು ಸಂಪುಟ ಉಪಸಮಿತಿ ರಚಿಸಲಾಗಿದೆ ಮತ್ತು ವರದಿ ನಂತರ ಕ್ರಮ ಕೈಗೊಳ್ಳಲಾಗುವುದು ಎಂದು ಸುಧಾಕರ್ ತಿಳಿಸಿದರು.**

# ಅಕ್ರಮ ಮದ್ಯ ಮಾರಾಟ ತಡೆಗೆ: ಹೊಸ ಕಾಯ್ದೆ ಜಾರಿಗೆ ಚಿಂತನೆ

**ಬೆಂಗಳೂರು:** ರಾಜ್ಯದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಹಾಗೂ ಅಕ್ರಮವಾಗಿ ಮದ್ಯ ತಯಾರಿಕೆ ದಂಧೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಕ್ರಮ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಸಚಿವ ಆರ್.ಬಿ.ತಿಮ್ಮಾಪುರ ತಿಳಿಸಿದರು.

ಈ ಬಗ್ಗೆ ಚರ್ಚಿಸಿ ಕ್ರಮ ವಹಿಸಲಾಗುವುದು ಅಲ್ಲದೆ, ಅಕ್ರಮ ಮದ್ಯ ಮಾರಾಟವನ್ನು ಮಾದಕ ವಸ್ತು ನಿಯಂತ್ರಣ ಕಾಯ್ದೆಯಡಿ ಸೇರಿಸಲು ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಅವರು ಹೇಳಿದರು.

ವಿಧಾನಸಭೆಯ ಪ್ರಶ್ನೋತ್ತರ ಕಲಾಪದ ವೇಳೆ ಮಂಗಳವಾರ ಶಾಸಕ ಬಸನಗೌಡ ದದ್ದಲ್ ಅವರು ರಾಯಚೂರು ಜಿಲ್ಲೆಯಲ್ಲಿ ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳಲ್ಲಿ, ಕಿರಾಣಿ ಅಂಗಡಿಗಳಲ್ಲೂ ಸಹ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕ ಅಬಕಾರಿ ಕಾಯ್ದೆಗಳ 1965ರ ಕಾಯ್ದೆಗಳ ರೀತ್ಯಾ ಯಾವುದೇ ಕ್ರಮ ಆಗುತ್ತಿಲ್ಲ ಏಕೆ ಎಂದು ಪ್ರಶ್ನಿಸಿದರು.

ಶಾಸಕರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಬಕಾರಿ ಅಕ್ರಮಗಳನ್ನು ನಿಯಂತ್ರಿಸಲು ಅಬಕಾರಿ ಇಲಾಖೆಯಿಂದ ವಲಯ ವ್ಯಾಪ್ತಿಯ ರೂಟ್ ಗಳಲ್ಲಿ ನಿರಂತರವಾಗಿ ಗಸ್ತು ನಡೆಸಲಾಗುತ್ತಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ರಸ್ತೆಕಾವಲು ನಡೆಸಿ ಸಂಶಯಾಸ್ಪದ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆಯನ್ನು ಏರ್ಪಡಿಸಿ ಅಕ್ರಮ ಹತ್ತಿಕ್ಕಲು ಕ್ರಮವಹಿಸಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 50ರಂತೆ ಕಾರ್ಯವ್ಯಾಪ್ತಿಯಲ್ಲಿ ನಡೆಯುವ ಅಬಕಾರಿ ಅಕ್ರಮಗಳ ಕುರಿತು ನಿಯಮಗಳನುಸಾರ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ತಿಳಿಸಿದರು.




# ಮುಸ್ಲಿಮರಿಂದಲೇ ವಕ್ಫ್ ಆಸ್ತಿ ಒತ್ತುವರಿ ಹೆಚ್ಚು: ಜಮೀರ್

**ಬೆಂಗಳೂರು:** ರಾಜ್ಯದಲ್ಲಿ 17,969 ಎಕರೆ ವಕ್ಫ್ ಆಸ್ತಿಯನ್ನು ಅತಿಕ್ರಮಣ ಮಾಡಲಾಗಿದೆ. ಈ ಪೈಕಿ ಹೆಚ್ಚಿನವರು ಮುಸ್ಲಿಮರೇ ಆಗಿದ್ದಾರೆ ಎಂದು ರಾಜ್ಯ ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಎಂ.ವೈ. ಪಾಟೀಲ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯಾದ್ಯಂತ ಒಟ್ಟು 1,12,860 ಎಕರೆ ವಕ್ಫ್ ಆಸ್ತಿ ಇದೆ. ಅದರಲ್ಲಿ 20,054 ಎಕರೆ ನಮ್ಮ ಕೈಯಲ್ಲಿವೆ. 17, 969 ಎಕರೆ ಅತಿಕ್ರಮಣ ಮಾಡಲಾಗಿದೆ. 47,263 ಎಕರೆ ಇನಾಂ ರದ್ದತಿ ಕಾಯ್ದೆಯಡಿ ಮತ್ತು 23,627 ಎಕರೆ ಭೂಸುಧಾರಣಾ ಕಾಯ್ದೆಯಡಿ ಒತ್ತುವರಿ ಮಾಡಲಾಗಿದೆ ಎಂದು ಖಾನ್ ತಿಳಿಸಿದರು.



# ಮೈಸೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಗೆ 39204 ವಿದ್ಯಾರ್ಥಿಗಳು ಸಜ್ಜು

**ಮೈಸೂರು:** 2025–26ನೇ ಸಾಲಿನ ಎಸ್ಎಸ್ಎಲ್‌ಸಿ ಪರೀಕ್ಷೆ ಬುಧವಾರ (ಇಂದಿನಿಂದ) ಆರಂಭವಾಗಲಿದೆ. ರಾಜ್ಯಾದ್ಯಂತ 9.02 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಯ ಬರೆಯಲಿದ್ದಾರೆ. ಮೈಸೂರಿನಲ್ಲೂ 136 ಕೇಂದ್ರಗಳಲ್ಲಿ 39204 ಮಂದಿ ಪರೀಕ್ಷೆ ಬರೆಯಲು ಸಕಲ ರೀತಿಯಲ್ಲೂ ಸಜ್ಜಾಗಿದೆ.

ಫೆ.28ರಂದು ಆರಂಭವಾಗಿದ್ದ ಪಿಯುಸಿ ಪರೀಕ್ಷೆ ಯಶಸ್ವಿಯಾಗಿ ನಿನ್ನೆ ಮುಕ್ತಾಯವಾಗಿದ್ದು, ಈಗ ಎಸ್ ಎಸ್ ಎಲ್‌ಸಿ ವಿದ್ಯಾರ್ಥಿಗಳ ಭವಿಷ್ಯ ಬರೆಯುವ ಪರೀಕ್ಷೆ ಶುರುವಾಗಿದೆ. ಇಂದಿನಿಂದ ಏಪ್ರಿಲ್ 2ರವರಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯಲಿದೆ. ಜಿಲ್ಲೆಯಾದ್ಯಂತ ಒಟ್ಟು 136 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಒಟ್ಟು 39,204 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಇದರಲ್ಲಿ ಹೊಸಬರು 36090, ಪುನರಾವರ್ತಿತ 2764 ಮತ್ತು ಖಾಸಗಿ ಅಭ್ಯರ್ಥಿಗಳು 350 ಜನ ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷಾ ಅಕ್ರಮಗಳ ತಡೆಯಲು ಪರೀಕ್ಷೆ ನಡೆಯುವ ಒಟ್ಟು 2080 ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಕೆ ಮಾಡಲಾಗಿದೆ. ಜೊತೆಗೆ ವೆಬ್ ಕಾಸ್ಟಿಂಗ್ ವ್ಯವಸ್ಥೆ ಕೂಡ ಮಾಡಲಾಗಿದೆ. ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ವೆಬ್ ಕಾಸ್ಟಿಂಗ್ ಮಾನಿಟರ್ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಪರೀಕ್ಷೆಗೆ ಎಲ್ಲಾ ರೀತಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಕಳೆದ ಬಾರಿ ಮೈಸೂರು ಜಿಲ್ಲೆಯ ಫಲಿತಾಂಶ 15ನೇ ಸ್ಥಾನಕ್ಕೆ ಕುಸಿತ ಕಂಡಿತ್ತು. ಈ ಬಾರಿ ಫಲಿತಾಂಶ ಉತ್ತಮ ಪಡಿಸುವ ನಿಟ್ಟಿನಲ್ಲಿ ವಿಶೇಷ ತರಗತಿಗಳು, ಶಿಕ್ಷಕರಿಗೆ ವಿಶೇಷ ತರಬೇತಿ, ಸಭೆಗಳನ್ನು ಮಾಡುವ ಕಳೆದ ಬಾರಿ ಏನು ಶೇ.67ರಷ್ಟು ಫಲಿತಾಂಶ ಬಂದಿತ್ತು. ಅದನ್ನು ಶೇ.85ರಿಂದ 90ಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಮೂರು ಬಾರಿ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ಮಾಡಲಾಗಿದೆ. ಜೊತೆಗೆ ಪರೀಕ್ಷಾ ಅಕ್ರಮ ತಡೆಯಲು ಕೂಡ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಾಗಿ ಶಿಕ್ಷಣ ಇಲಾಖೆ ತಿಳಿಸಿದೆ.



# ಪ್ರಿಯಾಂಕ್ ಖರ್ಗೆ ಇನ್ನೂ ಎಳಸು

## ಈ ಸರ್ಕಾರ ಕೇವಲ ಮುಸ್ಲಿಂಗಾಗಿ ಇದೆಯಾ: ಈಶ್ವರಪ್ಪ ವಾಗ್ದಾಳಿ

**ಕಲಬುರಗಿ:** ಪ್ರಿಯಾಂಕ್ ಖರ್ಗೆ ಇನ್ನೂ ಎಳಸು. ಅವರಪ್ಪನ ಕಾರಣಕ್ಕೆ ಮಂತ್ರಿ ಪದವಿ ಸಿಕ್ಕಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ವಾಗ್ದಾಳಿ ನಡೆಸಿದರು.

ನಗರದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಪ್ರಿಯಾಂಕ್ ಖರ್ಗೆ ಆರ್‌ಎಸ್ ಎಸ್ ಬ್ಯಾನ್ ಮಾಡೇ ಬಿಡುತ್ತೇವೆ ಅನ್ನೋ ರೀತಿ ಮಾತನಾಡ್ತಾರೆ. ಇಂದಿರಾ, ನೆಹರೂ ಕೈಯಲ್ಲಿಯೇ ಆರ್‌ಎಸ್‌ಎಸ್ ಬ್ಯಾನ್ ಮಾಡೋಕೆ ಆಗಿಲ್ಲ ಎಂದು ಕಾಂಗ್ರೆಸ್ ವಿರುದ್ಧ ಗುಡುಗಿದರು.

ಈ ಸರ್ಕಾರ ಕೇವಲ ಮುಸ್ಲಿಮರಿಗಾಗಿ ಇದ್ದೀವಿ ಅನ್ನೋ ಥರ ನಡೆಯುತ್ತಿದೆ. ಯಾಕೆ ಈ ಸರ್ಕಾರಕ್ಕೆ ಹಿಂದುಳಿದವರು, ದಲಿತರು ನೆನಪಿಗೆ ಬರಲಿಲ್ವಾ? ಅಲ್ಲದೆ, ರಾಜ್ಯದ ಮುಸ್ಲಿಮರ ಮನಸ್ಥಿತಿ ಬದಲಾಗಬೇಕು. ಇಲ್ಲದಿದ್ದರೆ ಅವರು ಖಂಡಿತ ತೊಂದರೆ ಅನುಭವಿಸಬೇಕಾಗುತ್ತದೆ. ಬಾಗಲಕೋಟೆಯಲ್ಲಿ ಅಲ್ಲಿನ ಎಸ್ಪಿ ಮೇಲೆ ಕಲ್ಲು ತೂರಾಟವಾಗಿದೆ. ಯಾಕಂದರೆ ಸರ್ಕಾರ ಅವರ ಬೆನ್ನಿಗೆ ನಿಂತಿದೆ ಅಂತ. ಇಷ್ಟಾದರೂ ಸರ್ಕಾರ ಬಜೆಟ್‌ನಲ್ಲಿ ಎಲ್ಲವನ್ನೂ ಮೀಸಲಿಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಇರಾನ್–ಇಸ್ರೇಲ್ ಯುದ್ಧದಿಂದ ನಮಗೆ ಸಂಕಷ್ಟದ ಸಮಯ. ಸಂಕಷ್ಟದ ಪುಟ 2ಕ್ಕೆ




### ನನ್ನ ಹೆಸರು ಅಳಿಸಲು ಆಗಲ್ಲ

**ಯಾರ ಕೈಯಿಂದಲೂ ನನ್ನ ಹೆಸರು ಅಳಿಸಿ ಹಾಕೋಕೆ ಆಗಲ್ಲ. ರಾಜ್ಯದಲ್ಲಿ ಸಾಮೂಹಿಕ ನಾಯಕತ್ವ ಇರಬೇಕು ಅನ್ನೋದು ನಮ್ಮ ಬೇಡಿಕೆ. ಬಿಜೆಪಿ ಯಾರೋ ನಾಲ್ಕು ಜನ ಕಟ್ಟಿದ ಪಕ್ಷವಲ್ಲ. ಒಂದು ಸಂದರ್ಭಕ್ಕೋಸ್ಕರ ಕಾಯುತ್ತಿದ್ದೇವೆ. ಆ ಸಂದರ್ಭದಲ್ಲಿ ಬಿಜೆಪಿಗೆ ಮತ್ತೆ ಸೇರ್ಪಡೆಯಾಗುತ್ತೇನೆ ಎಂದು ಈಶ್ವರಪ್ಪ ಹೇಳಿದರು. ಯತ್ನಾಳ್ ಹೊಸ ಪಕ್ಷ ಸ್ಥಾಪಿಸಿದರೂ ನಾನು ಹೋಗಲ್ಲ. ನನ್ನ ರಕ್ತದಲ್ಲಿಯೇ ಬಿಜೆಪಿ ಇದೆ. ನಾನು ಬಿಜೆಪಿ ಪಕ್ಷ ಬಿಟ್ಟು ಬೇರೆ ಕಡೆ ಹೋಗಲ್ಲ. ಕುಟುಂಬ ರಾಜಕಾರಣಕ್ಕೆ ನನ್ನ ವಿರೋಧವಿದೆ. ನನ್ನ ಮಗನಿಗೆ ಟಿಕೆಟ್ ಕೊಡುವ ಬಗ್ಗೆ ಈಗ ಮಾತನಾಡಲ್ಲ. ನಾವು ರಾಜಕೀಯ ಸನ್ಯಾಸತ್ವ ಪಡೆದಿಲ್ಲ ಎಂದು ಹೇಳಿದರು.**

# ನೀರಾವರಿ ಯೋಜನೆಗಳ ಜಾರಿಗೆ ಸಂಸದರ ಜೊತೆ ಚರ್ಚೆ: ಡಿಕೆಶಿ

**ಬೆಂಗಳೂರು:** ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮತಿ ಬಾಕಿ ಉಳಿಸಿಕೊಂಡಿರುವ ಹಿನ್ನೆಲೆಯಲ್ಲಿ ಸಚಿವರಾದ ಎಚ್.ಕೆ.ಪಾಟೀಲ್ ಹಾಗೂ ಎಂ.ಬಿ ಪಾಟೀಲ್ ಅವರೊಂದಿಗೆ ನಾನು ರಾಜ್ಯದ ಎಲ್ಲಾ ಸಂಸದರನ್ನು ಭೇಟಿ ಮಾಡಿ ಚರ್ಚಿಸುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ನವದೆಹಲಿಗೆ ತೆರಳುವ ಮುನ್ನ ಮಂಗಳವಾರ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಚರ್ಚೆಯ ವಿಚಾರಗಳನ್ನು ಬಂದ ನಂತರ ತಿಳಿಸುತ್ತೇವೆ. ಎಲ್ಲರೂ ಒಟ್ಟಾಗಿ ನೀರಾವರಿ ವಿಚಾರಗಳ ಬಗ್ಗೆ ತೀರ್ಮಾನ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುತ್ತೇವೆ ಎಂದು ಅವರು ತಿಳಿಸಿದರು.

ಮೇಕೆದಾಟು, ಮಹದಾಯಿ ನದಿಗೆ ಅಡ್ಡಲಾಗಿ ಕಳಸಾ–ಬಂಡೂರಿ ನಾಲಾ ಯೋಜನೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ ಎನ್‌ಓಸಿಗಳು ಬಾಕಿ ಇದೆ. ಅದಕ್ಕಾಗಿ ಒತ್ತಡ ಹೇರುವಂತೆ ಮನವಿ ಸಲ್ಲಿಸಲಿದ್ದಾರೆ. ಬೆಂಗಳೂರಿನ ನಗರಾಭಿವೃದ್ಧಿ ಹಾಗೂ ಇತರ ಯೋಜನೆಗಳ ಸಂಬಂಧಪಟ್ಟಂತೆಯೂ ಸಂಸದರ ಜೊತೆ ಡಿ.ಕೆ.ಶಿವಕುಮಾರ್ ಚರ್ಚೆ ನಡೆಸುವುದಾಗಿ ತಿಳಿಸಿದರು.



# 4 ಲಕ್ಷ ಬೆಲೆ ಮಾದಕವಸ್ತು ವಶ: ಮತ್ತೊಬ್ಬನ ಬಂಧನ

**ಮೈಸೂರು:** ನಗರ ಪೊಲೀಸರು ಮಾದಕ ವಸ್ತುಗಳ ವಿರುದ್ಧ ಕಾರ್ಯಾಚರಣೆ ನಡೆಸಿ ಒಬ್ಬನನ್ನು ಬಂಧಿಸಿದ್ದಾರೆ. 4 ಲಕ್ಷ ರೂ. ಮೌಲ್ಯದ 40 ಗ್ರಾಂ ಎಂ.ಡಿ.ಎಂ.ಎ ವಶಕ್ಕೆ ಪಡೆದಿದ್ದಾರೆ.

ನಗರದಲ್ಲಿ ಮಾದಕ ವಸ್ತುಗಳ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಮೈಸೂರು ನಗರ ಪೊಲೀಸರು ವಿಶೇಷ ಕಾರ್ಯಾಚರಣೆ ಕೈಗೊಂಡಿದ್ದಾರೆ. ಕುವೆಂಪುನಗರ ಪೊಲೀಸರ ವಿಶೇಷ ತಂಡ ಕುವೆಂಪುನಗರ ಠಾಣಾ ವ್ಯಾಪ್ತಿಯ ಸರ್ವಿಸ್ ಅಪಾರ್ಟ್ಮೆಂಟ್‌ನಲ್ಲಿ ಎಂ.ಡಿ.ಎಂ.ಎ. ಮಾದಕ ವಸ್ತು ಇರುವಿಕೆ ಬಗ್ಗೆ ಮಾಹಿತಿ ಸಂಗ್ರಹಿಸಿ ಪುಟ 2ಕ್ಕೆ

# ಅಕ್ರಮ ವಿದ್ಯುತ್ ತಂತಿ ಸ್ಪರ್ಶಿಸಿ ಹುಲಿ ಸಾವು



**ಚಾಮರಾಜನಗರ:** ಅಕ್ರಮ ವಿದ್ಯುತ್ ತಂತಿ ಸ್ಪರ್ಶಿಸಿ ಹುಲಿ ಸಾವನ್ನಪ್ಪಿರುವ ಘಟನೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಪಡಗೂರು ಬಳಿ ನಡೆದಿದೆ. ಕೇರಳ ಮೂಲದವರು ಜಮೀನಿಗೆ ಅಳವಡಿಸಿದ್ದ ಅಕ್ರಮ ವಿದ್ಯುತ್ ತಂತಿ ಸ್ಪರ್ಶಿಸಿ ಸುಮಾರು ಎರಡು ಪುಟ 2ಕ್ಕೆ

# ಶಿವರಾತ್ರೀಶ್ವರ ಪ್ರಶಸ್ತಿಗೆ ಕೃತಿಗಳ ಆಹ್ವಾನ

**ಮೈಸೂರು:** ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯಿಂದ ನೀಡಲಾಗುವ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿಗೆ ಕೃತಿಗಳನ್ನು ಆಹ್ವಾನಿಸಲಾಗಿದೆ. ವೀರಶೈವ ಲಿಂಗಾಯತ ಧರ್ಮ, ಸಾಹಿತ್ಯ, ಇತಿಹಾಸ, ಕಲೆ ಹಾಗೂ ಸಂಸ್ಕೃತಿಗೆ ಸಂಬಂಧಿಸಿದಂತೆ 2025ನೇ ಸಾಲಿನಲ್ಲಿ ಪ್ರಕಟವಾದ ಕೃತಿಗಳನ್ನು ಪರಿಗಣಿಸಲಾಗುವುದು. 1983 ರಿಂದ ಪ್ರತಿ ವರ್ಷ ಒಂದು ಉತ್ತಮ ಕೃತಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ಫಲಕ ಹಾಗೂ 25 ಸಾವಿರ ನಗದು ಪುರಸ್ಕಾರವನ್ನು ಒಳಗೊಂಡಿದೆ. ಲೇಖಕರು ಪುಟ 2ಕ್ಕೆ

# ಚಿತ್ರಮಂದಿರಕ್ಕೆ ಬೆಂಕಿ: ಕಾವಲುಗಾರ ಸಾವು

**ಮೈಸೂರು:** ನಗರದ ಕೆಆರ್‌ಎಸ್ ರಸ್ತೆಯಲ್ಲಿರುವ ಗೋಕುಲ್ ಚಿತ್ರಮಂದಿರದ ಆವರಣದಲ್ಲಿ ನಡೆದ ಅಗ್ನಿ ಅವಘಡದಲ್ಲಿ ಕಾವಲುಗಾರ ಸಜೀವ ದಹನವಾಗಿದ್ದಾರೆ. ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದ ಮರಿಶೆಟ್ಟಿ (75) ಸಾವನ್ನಪ್ಪಿದ್ದಾರೆ.

ಗೋಕುಲ್ ಚಿತ್ರಮಂದಿರ ಹಲವು ವರ್ಷದ ಹಿಂದೆಯೇ ಮುಚ್ಚಿದೆ. ಮರಿಶೆಟ್ಟಿ 45 ವರ್ಷದಿಂದ ಚಿತ್ರಮಂದಿರದಲ್ಲಿ ಕೆಲಸ ಪುಟ 2ಕ್ಕೆ



# ಲೋಕಾಯುಕ್ತ ಬಲೆಗೆ ಬಿದ್ದ ಪಿಡಿಒ: ಕೈ ಕೂಯ್ದುಕೊಂಡು ಹೈಡ್ರಾಮ

**ಮೈಸೂರು:** ಸಿಬ್ಬಂದಿಗೆ ಬಾಕಿ ಸಂಬಳ ನೀಡಲು ಲಂಚ ಪಡೆದ ಪಿಡಿಒ ಲೋಕಾಯುಕ್ತ ಬಲೆಗೆ ಬಿದ್ದ ಘಟನೆ ಹುಣಸೂರು ತಾಲೂಕು ಮುಳ್ಳೂರು ಗ್ರಾಮ ಪಂಚಾಯಿಯಲ್ಲಿ ನಡೆದಿದೆ. ಪಿಡಿಒ ಮಂಜುಳಾ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದ ಅಧಿಕಾರಿ. 25 ಸಾವಿರ ಲಂಚ ಪಡೆಯುವಾಗ ಕಚೇರಿಯಲ್ಲೇ ಮಂಜುಳಾ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾರೆ.

ನೀರುಗಂಟಿ ಸ್ವಾಮಿ ಕರ್ತವ್ಯದಲ್ಲಿದ್ದ ವೇಳೆ ಮೃತಪಟ್ಟಿದ್ದರು. ಅನುಕಂಪದ ಆಧಾರದ ಮೇಲೆ ಸ್ವಾಮಿ ಮಗ ಮಹದೇವ್ ಅವರಿಗೆ ಕೆಲಸ ಸಿಕ್ಕಿದೆ. ಪುಟ 2ಕ್ಕೆ




# ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ: ವಿದ್ಯಾರ್ಥಿಗಳಿಗೆ ಸಿಎಂ ಶುಭಾಶಯ

**ಬೆಂಗಳೂರು:** ಎಸ್ಎಸ್ಎಲ್‌ಸಿ ಪರೀಕ್ಷೆ ಮಾ.18 ರಿಂದ ಪ್ರಾರಂಭವಾಗುತ್ತಿದೆ. ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸದನದಲ್ಲಿ ಶುಭಾಶಯ ತಿಳಿಸಿದರು.

ಪ್ರಸ್ತುತ ಸಾಲಿನಲ್ಲಿ 8,65,968 ಮಕ್ಕಳು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದೆ. ಮೂರು ಹಂತದಲ್ಲಿ ಪರೀಕ್ಷೆಗಳು ನಡೆಯುತ್ತವೆ. ಒಂದು ವೇಳೆ ಮೊದಲ ಹಂತದ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಎರಡನೇ ಹಂತ, ಮೂರನೇ ಹಂತದಲ್ಲಿ ಪರೀಕ್ಷೆಗೆ ಅವಕಾಶ ಇರುವುದರಿಂದ ಯಾವುದೇ ವಿದ್ಯಾರ್ಥಿಗಳು ಆತಂಕಗೊಳ್ಳದೇ ಪರೀಕ್ಷೆಯನ್ನು ಎದುರಿಸುವಂತೆ ತಿಳಿಸಿದರು. ಎಸ್. ಎಸ್. ಎಲ್.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಧೈರ್ಯ ವಾಗಿ ಪರೀಕ್ಷೆ ಬರೆಯಲು ತಿಳಿಸಿದರು.

ಶಿಕ್ಷಣ ಮಂತ್ರಿ ಮಧು ಬಂಗಾರಪ್ಪ ಶುಭಾಶಯ ಕೋರಿ ಮಾತನಾಡಿ, ಈ ಹಿಂದೆ ಮಕ್ಕಳು ಒತ್ತಡದಿಂದ ಪರೀಕ್ಷೆಗೆ ಹಾಜರಾಗುತ್ತಿದ್ದರು. ಈಗ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ಪುಟ 2ಕ್ಕೆ






# ಶಾಸಕರ ಪ್ರಶ್ನೆಗೆ ತಕ್ಷಣ ಉತ್ತರಿಸಿ: ಸಚಿವರಿಗೆ ಸಿಎಂ ಖಡಕ್ ಸೂಚನೆ

## ಸ್ಪೀಕರ್ ಯು.ಟಿ.ಖಾದರ್ ಸಭಾತ್ಯಾಗದಿಂದ ಸರ್ಕಾರಕ್ಕೆ ಮುಜುಗರ

**ಬೆಂಗಳೂರು:** ಸದನದ ವೇಳೆ ಶಾಸಕರ ಲಿಖಿತ ಪ್ರಶ್ನೆಗಳಿಗೆ ಉತ್ತರಿಸಲು ಸಚಿವರು ವಿಫಲರಾದ ಕುರಿತು ತಕ್ಷಣ ವಿವರಣೆ ನೀಡುವಂತೆ ಸಚಿವರಿಗೆ ಸೂಚಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

ಸದನದಲ್ಲಿ ಉತ್ತರ ಮಂಡಿಸಲು ವಿಫಲರಾದ ಸಚಿವರು, ಅಧಿಕಾರಿಗಳ ನಡೆಯ ವಿರುದ್ಧ ಅಸಮಾಧಾನಗೊಂಡ ಸಭಾಧ್ಯಕ್ಷ ಯು.ಟಿ. ಖಾದರ್ ಸಭಾತ್ಯಾಗ ಮಾಡಿದ ಘಟನೆ ವಿಧಾನಸಭೆಯಲ್ಲಿ ನಡೆದಿತ್ತು.

ಈ ಬೆನ್ನಲ್ಲಿಯೇ ಸಚಿವರು ಮತ್ತು ಅಧಿಕಾರಿಗಳಿಗೆ ನಡವಳಿ ಕಳುಹಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರಗಳನ್ನು ಇದುವರೆಗೂ ಕಳುಹಿಸದೇ ಇರುವುದು ವಿಧಾನಸಭಾ ಸದಸ್ಯರುಗಳು ಸದನದಲ್ಲಿ ಚರ್ಚಿಸಲು ಅನಾನುಕೂಲತೆಯನ್ನು ಉಂಟು ಮಾಡಿರುತ್ತದೆ. ಪುಟ 2ಕ್ಕೆ



### 8 ಐಎಎಸ್ ಅಧಿಕಾರಿಗಳಿಗೆ ನೋಟಿಸ್

**ಬೆಂಗಳೂರು:** ಸದನದಲ್ಲಿ ಶಾಸಕರ ಪ್ರಶ್ನೆಗೆ ಉತ್ತರ ನೀಡದ ಹಿನ್ನೆಲೆಯಲ್ಲಿ 8 ಐಎಎಸ್ ಅಧಿಕಾರಿಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶೋಕಾಸ್ ನೋಟಿಸ್ ಜಾರಿ ಮಾಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ಮೇರೆಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಈ ಕ್ರಮಕೈಗೊಂಡಿದ್ದಾರೆ. ಇಲಾಖೆ ಅಧಿಕಾರಿಗಳು ಸೂಕ್ತ ಉತ್ತರ ನೀಡದ ಹಿನ್ನೆಲೆಯಲ್ಲಿ ನೋಟಿಸ್ ನೀಡಲಾಗಿದೆ. ಸದನದಲ್ಲಿ ಸರ್ಕಾರಕ್ಕೆ ತೀವ್ರ ಮುಜುಗರ ಆಗಿತ್ತು. ಸ್ಪೀಕರ್ ಯು.ಟಿ.ಖಾದರ್ ಕೂಡ ಅಸಮಾಧಾನ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದ್ದರು. ಹೀಗಾಗಿ, ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ.

ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿಗಳಿಗೆ ಪುಟ 2ಕ್ಕೆ

### ಅಧಿಕಾರಿಗಳ ವಿವರ

- **ಪಶುಸಂಗೋಪನಾ ಇಲಾಖೆ ಕಾರ್ಯದರ್ಶಿ– ಆರ್.ವಿನೋತ್ ಪ್ರಿಯಾ**
- **ವಸತಿ ಇಲಾಖೆ ಕಾರ್ಯದರ್ಶಿ– ಮೋಹನ್ ರಾಜ್ ಕೆ.ಪಿ**
- **ಸಾರಿಗೆ ಇಲಾಖೆ ಕಾರ್ಯದರ್ಶಿ– ಎನ್.ವಿ.ಪ್ರಸಾದ್**
- **ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಕಾರ್ಯದರ್ಶಿ ಆರ್.ಗಿರೀಶ್**
- **ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ– ಅಮ್ಲಾನ್ ಆದಿತ್ಯ ಬಿಸ್ವಾಸ್**
- **ಕಂದಾಯ ಇಲಾಖೆ ಕಾರ್ಯದರ್ಶಿ– ರಾಜೇಂದರ್ ಕುಮಾರ್ ಕಟಾರಿಯಾ**

**ಮೊದಲ ಪುಟದಿಂದ**

## ಪ್ರಿಯಾಂಕ್ ಖರ್ಗೆ ಇನ್ನೂ ಎಳಸು

ಸಮಯದಲ್ಲಿ ಇಡೀ ದೇಶ ಒಂದಾಗಬೇಕು. ಆದರೆ, ಕಾಂಗ್ರೆಸ್ ಆರೋಪ ಮಾಡುತ್ತಿದೆ. ಹಿರಿಯರಾದ ಖರ್ಗೆ ಅವರು ಈ ರೀತಿ ಹೇಳಿಕೆ ಕೊಡಬಾರದು ಎಂದು ತಿಳಿಸಿದರು.

ವಿಧಾನಸಭೆಯಲ್ಲಿ ಸ್ಪೀಕರ್ ಸಭಾತ್ಯಾಗ ಮಾಡಿದ್ದು ಇದೇ ಮೊದಲು. ಇದು ರಾಜ್ಯ ಸರ್ಕಾರದ ಆಡಳಿತಕ್ಕೆ ಹಿಡಿದ ಕೈಗನ್ನಡಿ. ರಾಜ್ಯದಲ್ಲಿ ಆಡಳಿತ ಸಂಪೂರ್ಣವಾಗಿ ಕುಸಿದು ಹೋಗಿದೆ. ಇದರಿಂದ ರಾಜ್ಯದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಅಧಿಕಾರಕ್ಕೆ ಬರೋದಿಲ್ಲ. ಹಿಂದುತ್ವ ಉಳಿಯಬೇಕು. ಅದಕ್ಕಾಗಿ ರಾಜ್ಯದ ಜನ ಜಾಗೃತರಾಗಬೇಕು ಎಂದು ಹೇಳಿದರು.

## 8 ಐಎಎಸ್ ಅಧಿಕಾರಿಗಳಿಗೆ ನೋಟಿಸ್

ಸಿಎಸ್ ನೋಟಿಸ್ ಜಾರಿ ಮಾಡಿದ್ದಾರೆ. ವಾರದಲ್ಲಿ ಉತ್ತರ ಕೊಡದೇ ಹೋದರೆ ಯಾಕೆ ಉತ್ತರ ಕಳಿಸಲು ಸಾಧ್ಯವಾಗಿಲ್ಲ ಅಂತ ವಿವರಣೆ ನೀಡಬೇಕು ಎಂದು ತಿಳಿಸಿದ್ದಾರೆ.

ಕೂಡಲೇ ಲಿಖಿತ ರೂಪದಲ್ಲಿ ಸ್ಪಷ್ಟನೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಬಜೆಟ್ ಅಧಿವೇಶನದಲ್ಲಿ 230 ಪ್ರಶ್ನೆಗಳಿಗೆ ಕೇವಲ 84 ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ.

ನಿನ್ನೆ ಯು.ಟಿ ಖಾದರ್ ಕೂಡ ಅಸಮಾಧಾನ ಹೊರಹಾಕಿದ್ದರು. ಸದನ ನಡೆಸೋದು ಮಂತ್ರಿಗಳಿಗಲ್ಲ ಎಂದು ಸದನ ನಿಲ್ಲಿಸಿ ಹೊರ ತೆರಳಿದ್ದರು. ನಂತರ ಸಿಎಂ ಸಿದ್ದರಾಮಯ್ಯ, ಕೆಲ ಸಚಿವರಿಂದ ಸ್ಪೀಕರ್ ಮನವೊಲಿಸಿದ ನಂತರ ಖಾದರ್ ಅಧಿವೇಶನಕ್ಕೆ ಆಗಮಿಸಿದ್ದರು.

## 4 ಲಕ್ಷ ಬೆಲೆ ಮಾದಕವಸ್ತು ವಶ: ಮತ್ತೊಬ್ಬನ ಬಂಧನ

ನಗರದ ದಟ್ಟಗಳ್ಳಿ ಹಾಲಿಡೇ ಇನ್ ಸರ್ವೀಸ್ ಅಪಾರ್ಟ್ಮೆಂಟ್ ಮೇಲೆ ದಾಳಿ ಮಾಡಿ ರೂಂ.ನಲ್ಲಿದ್ದ ಕೇರಳ ರಾಜ್ಯದ ಶಬೀರ್ (28) ಎಂಬಾತನು ಬಂಧಿಸಿದ್ದಾರೆ.

ಅವನಿಂದ 4 ಲಕ್ಷ ರೂ. ಮೌಲ್ಯದ 40 ಗ್ರಾಂ ಎಂ.ಡಿ.ಎಂ.ಎ ವಶಕ್ಕೆ ಪಡೆದು, ಈತನ ವಿರುದ್ಧ ಕೇರಳಾ ರಾಜ್ಯದಲ್ಲಿ 1 ದರೋಡೆ ಪ್ರಕರಣ ಹಾಗೂ ಬೆಂಗಳೂರು ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆಯಡಿ 1 ಪ್ರಕರಣ ದಾಖಲಾಗಿದೆ.

## ಅಕ್ರಮ ವಿದ್ಯುತ್ ತಂತಿ ಸ್ಪರ್ಶಿಸಿ ಹುಲಿ ಸಾವು

ವರ್ಷದ ಹುಲಿ ಸಾವಿಗೀಡಾಗಿದೆ. ಕೇರಳ ಮೂಲದ ಪರಮೇಶ್ ಎಂಬವರು ಸ್ಥಳೀಯರ ಜಮೀನನ್ನು ಗುತ್ತಿಗೆ ಪಡೆದಿದ್ದರು. ಈ ಭಾಗದಲ್ಲಿ ಹುಲಿ, ಚಿರತೆ ಸಂಚಾರ ಹೆಚ್ಚಿದೆ. ಈ ಹಿನ್ನೆಲೆ ಅಧಿಕಾರಿಗಳು ಥರ್ಮಲ್ ಡ್ರೋನ್ ಹಾರಿಸುವಾಗ ಹುಲಿ ಸತ್ತು ಬಿದ್ದಿರುವುದು ಗೊತ್ತಾಗಿದೆ. ಸ್ಥಳಕ್ಕೆ ಪೊಲೀಸ್, ಅರಣ್ಯ ಹಾಗೂ ಸೆಸ್ಕ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಹಿಂದೆ ಮಲೆ ಮಹದೇಶ್ವರ ವನ್ಯಧಾಮದಲ್ಲಿ ವಿಷಕ್ಕೆ 6 ಹುಲಿ, ಬಿಆರ್‌ಟಿ ಹುಲಿ ಸಂರಕ್ಷಿತಾರಣ್ಯ ವ್ಯಾಪ್ತಿಯಲ್ಲಿ ಉರುಳಿಗೆ ಒಂದು ಹುಲಿ ಸಾವನ್ನಪ್ಪಿತ್ತು.

## ಚಿತ್ರಮಂದಿರಕ್ಕೆ ಬೆಂಕಿ: ಕಾವಲುಗಾರ ಸಾವು

ಮಾಡಿಕೊಂಡಿದ್ದರು. ಅದು ಮುಚ್ಚಿದ ಬಳಿಕವೂ ಪತ್ನಿಯೊಂದಿಗೆ ಅಲ್ಲೇ ವಾಸವಿದ್ದರು. ಮಂಗಳವಾರ ಬೆಳಿಗ್ಗೆ ಆವರಣ ಸ್ವಚ್ಛಗೊಳಿಸುವಾಗ ಕಸದ

ರಾಶಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದಿದೆ. ಅದು ವೇಗವಾಗಿ ಹರಡಿಕೊಂಡ ಕಾರಣ ಮರಿಶೆಟ್ಟಿ ಅವರು ಹೊರಬರಲು ಸಾಧ್ಯವಾಗದೆ ಮೃತಪಟ್ಟಿದ್ದಾರೆ. ಪತ್ನಿ ಸ್ಥಳಕ್ಕೆ ಆಗಮಿಸಿ ನೋಡಿದಾಗ ಸುಟ್ಟು ಕರಕಳಾದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಪತ್ನಿ ನೀಡಿದ ದೂರು ಆಧರಿಸಿ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಶಾಸಕರ ಪ್ರಶ್ನೆಗೆ ತಕ್ಷಣ ಉತ್ತರಿಸಿ: ಸಚಿವರಿಗೆ ಸಿಎಂ ಖಡಕ್ ಸೂಚನೆ

ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟು ಮಾಡುವುದರೊಂದಿಗೆ ಶಾಸಕರುಗಳ ಹಕ್ಕಿಗೆ ಮತ್ತು ಸದನದ ಘನತೆಗೆ ಚ್ಯುತಿಯನ್ನುಂಟು ಮಾಡಿರುತ್ತದೆ. ಈ ಸಂಬಂಧ ನಡೆದ ಸಭೆಯಲ್ಲಿ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಲಾಗಿದೆ. ಅಲ್ಲದೆ, ಉತ್ತರ ಕಳುಹಿಸದ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರಿಗೆ ಪ್ರತ್ಯೇಕ ಪತ್ರವನ್ನು ಕಳುಹಿಸಿ ಹಾಗೂ ಮಾಹಿತಿ ಒದಗಿಸುವ ನಿರ್ದಿಷ್ಟ ಸಮಯವನ್ನು ತಿಳಿಸಲು ಸಹ ಸೂಚಿಸಿದೆ ಎಂದು ಸಿಎಂ ಸಚಿವರಿಗೆ ಸೂಚಿಸಿದ್ದಾರೆ.

ಸ್ಪೀಕರ್ ಖಾದರ್ ಖದರ್‌ಗೆ ಸರ್ಕಾರ ಬೆಚ್ಚಿಬಿದ್ದಿದೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರಿಗೆ ಪತ್ರ ಬರೆದು ವಾರ್ನಿಂಗ್ ಮಾಡಿದ್ದಾರೆ. ಸರ್ಕಾರಕ್ಕೆ ಮುಜಗರ, ಶಾಸಕರ ಹಕ್ಕಿಗೆ ಚ್ಯುತಿ ಆಗಿದೆ ಎಂದು ಖಾರವಾಗಿ ಪತ್ರ ಬರೆದಿದ್ದಾರೆ. ಪ್ರಶ್ನೋತ್ತರ ಕಲಾಪದ ಬಳಿಕ ಲಿಖಿತ ರೂಪದಲ್ಲಿರುವ ಉತ್ತರಗಳನ್ನು ಮಂಡಿಸಿದ ಗೃಹ ಸಚಿವ ಜಿ. ಪರಮೇಶ್ವರ್, 230 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಉತ್ತರ ಮಂಡಿಸಲಾಗಿದೆ ಎಂದಿದ್ದರು. ಅದಕ್ಕೆ ವಿರೋಧ ಪಕ್ಷದ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಅದರ ನಂತರ, ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಸಭಾತ್ಯಾಗ ಮಾಡಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಯುದ್ಧವನ್ನು ಎಲ್ಲರೂ ಸೀಮಾತೀತವಾಗಿ ಖಂಡಿಸೋಣ




ಮೈಸೂರು: ಯುದ್ಧಕೋರತನ ಎಂದಿಗೂ ಅಮಾನವೀಯ. ಯುದ್ಧವನ್ನು ಎಲ್ಲರೂ ಸೀಮಾತೀತವಾಗಿ ಖಂಡಿಸಬೇಕು ಎಂದು ಚಿಂತಕ ಪ್ರೊ.ಬಂಜಗೆರೆ ಜಯಪ್ರಕಾಶ ಹೇಳಿದರು.

ಮಾನಸಗಂಗೋತ್ರಿಯ ಸಮಾಜ ಕಾರ್ಯ ಅಧ್ಯಯನ ವಿಭಾಗದಲ್ಲಿ ಬೋಧಿವೃಕ್ಷ ಅಭಿವೃದ್ಧಿ ಸಂಸ್ಥೆಯು ಅಂತರರಾಷ್ಟ್ರೀಯ ಸಮಾಜಕಾರ್ಯ ದಿನಾಚರಣೆ ಪ್ರಯುಕ್ತ ಮಂಗಳವಾರ ಆಯೋಜಿಸಿದ್ದ ಪ್ರೊ.ಸಿ.ಪಾರ್ವತಮ್ಮ ನೆನಪಿನ ಉಪನ್ಯಾಸದಲ್ಲಿ ಆಶಯ ಭಾಷಣ ಮಾಡಿದರು. ಇರಾನ್ ಶಾಲೆಯ ಮೇಲೆ ಬಾಂಬ್ ಹಾಕಿ ಮುಗ್ಧ ಕಂದಮ್ಮಗಳನ್ನು ಕೊಂದ ಇಸ್ರೇಲ್ ಮತ್ತು ಅಮೆರಿಕ ಕ್ರೂರಿಯೇ, ಅದು ಭಯೋತ್ಪಾದನೆಯೇ ಆಗಿದೆ. ಯುದ್ಧೋನ್ಮಾದ ಮೂಡಿಸುತ್ತಿರುವ, ಮಾರು ಕಟ್ಟೆ– ಹಣದ ಪಿಪಾಸಿನ ಬಂಡವಾಳಶಾಹಿ ದಾಳಿಕೋರ ದೇಶಗಳ ವಿರುದ್ಧ ಭಾರತವು ತನ್ನ ಆಲಿಪ್ತ ವಿದೇಶಾಂಗ ನೀತಿ ಪ್ರಕಟಿಸಬೇಕು. ಯುದ್ಧ ನಿಲ್ಲಿಸಬೇಕೆಂಬ ವಿವೇಕದ ಮಾತನ್ನು ಹೇಳಬೇಕು ಎಂದರು. ದ್ವೇಷಪೂರಿತವಾದ ಯುದ್ಧವಾಗಲಿ, ಚಳವಳಿಯಾಗಲಿ ಸಮಾಜವನ್ನು ಎಂದಿಗೂ ಒಗ್ಗೂಡಿಸಲು ಸಾಧ್ಯವಿಲ್ಲ. ಬುದ್ಧನ ಪ್ರಜ್ಞೆ, ಕರುಣೆ ಮತ್ತು ಮೈತ್ರಿ ಮಾತ್ರವೇ ಪ್ರಪಂಚವನ್ನು ಒಗ್ಗೂಡಿಸುತ್ತದೆ. ಮಾನವೀಯತೆ, ಕಾರುಣ್ಯವನ್ನು ಮನುಷ್ಯ ಸಮಾಜದ ಎದೆಯೊಳಗೆ ನೆಲೆಗೊಳಿಸಬೇಕು. ನೊಂದವರಿಗೆ ಕರುಣಾ ಪ್ರಜ್ಞೆ, ಸಹಾನುಭೂತಿ ಪ್ರಕಟಿಸಬೇಕು. ಆಗ, ಸಮಾಜದಲ್ಲಿ ಸಹಜವಾಗಿ ಸಂತೋಷದಾಯಕ ವಾತಾವರಣ ನೆಲೆಗೊಂಡು ನೆಮ್ಮದಿ ತರುತ್ತದೆ. ಬುದ್ಧ ಭಾರತದ ಮೊದಲ ವೃತ್ತಿಪರ ಸಮಾಜಕಾರ್ಯ ಪ್ರವರ್ತಕ. ಧರ್ಮವನ್ನೇನೂ ಸ್ಥಾಪಿಸಲಿಲ್ಲ. ಬಿಕ್ಕು ಸಂಘಗಳನ್ನು ಸ್ಥಾಪಿಸುವ ಮೂಲಕ ಸಮಾಜ ಸೇವಾಕಾರ್ಯ ಆರಂಭಿಸಿದನು. ಯುದ್ಧವೇ ಬೇಕಿರುವ, ಹಣದ ಪಿಪಾಸುಗಳ ನಡುವೆ ಹಾಡು ಹೇಳುವ ಕಲಾವಿದರು, ಮಕ್ಕಳನ್ನು ಆರೈಕೆ ಮಾಡುತ್ತಿರುವ ಮಹಿಳೆಯರು, ಶಾಲೆಯಲ್ಲಿ ಕನಸು ಕಾಣುತ್ತಿರುವ ಕಂದಮ್ಮಗಳ ಪರವಾಗಿ ವಿಶ್ವವು ನಿಲ್ಲಬೇಕಿದೆ ಎಂದರು.

ಬೋಧಿವೃಕ್ಷ ಸಂಸ್ಥೆಯ ಅಧ್ಯಕ್ಷ ಎಂ.ಎಸ್. ಚಂದ್ರ ಮಾತನಾಡಿ, ಪ್ರೀತಿ ಮತ್ತು ಕರುಣೆ ಮಾತ್ರವೇ ಮಾನವ ಸಮಾಜವನ್ನು ಒಗ್ಗೂಡಿಸಬಲ್ಲದು. ಸಮಾಜ ಸೇವೆಯ ಅಡಿಪಾಯ ಇದರ ಮೇಲೆ ನಿಂತಿದೆ ಎಂದರು. ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಶಿಕ್ಷಣ ಪಡೆದವರು ತಮ್ಮ ಹಳ್ಳಿಗಳಿಗೆ ತೆರಳಿ ಸಣ್ಣ ಸಣ್ಣ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡಬೇಕು. ಇವತ್ತಿಗೂ ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆ ಜೀವಂತವಾಗಿದೆ. ಮಹಿಳೆಯರ ಮೇಲಿನ ಶೋಷಣೆ ನಿಂತಿಲ್ಲ. ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಭೂ ಸಮಸ್ಯೆಗಳು ಬಗೆಹರಿದಿಲ್ಲ. ಯುವಜನರು ಉದ್ಯೋಗಕ್ಕಾಗಿ ಹೋರಾಟ ಮಾಡಬೇಕಾದ ಪರಿಸ್ಥಿತಿಯಲ್ಲಿದ್ದೇವೆ ಎಂದರು. ವಿಭಾಗದ ಮುಖ್ಯಸ್ಥ ಪ್ರೊ.ಆರ್. ಶಿವಪ್ಪ, ಪ್ರೊ. ಚಂದ್ರಮೌಳಿ, ಡೀಡ್ ಸಂಸ್ಥೆಯ ನಿರ್ದೇಶಕ ಶ್ರೀಕಾಂತ, ಪ್ರೊ.ಎಚ್.ಪಿ.ಜ್ಯೋತಿ, ಪ್ರೊ. ಕಾಳಚನ್ನೇಗೌಡ, ಪ್ರೊ.ವನಜಾ, ಪ್ರೊ.ಸುಧಾ ಪಾಲ್ಗೊಂಡಿದ್ದರು.

> **ಭಾರತದಿಂದ ವಿದೇಶಕ್ಕೆ ಹೋದವರು ತಾವುಗಳು ಬುದ್ಧನ ನಾಡಿನಿಂದ ಬಂದಿದ?ದೇವೆ ಎಂದು ಘನತೆಯಿಂದ ಹೇಳುತ್ತಾರೆ. ಭಾರತದಲ್ಲಿ ಬುದ್ಧರ ಚಿಂತನೆಗಳಿಗೆ ವಿರುದ್ಧವಾಗಿ ಬದುಕುತ್ತಿರುತ್ತಾರೆ. ಈ ವೈರುಧ್ಯದಿಂದಲೇ ಭಾರತೀಯ ಸಮಾಜವೂ ನಾನಾ ಸಮಸ್ಯೆಗಳಿಂದ ಬಳಲುತ್ತಿದೆ.**
> **–ಅಹಿಂದ ಜವರಪ್ಪ**

# 25ರಂದು ಬೃಹತ್ ಹೋರಾಟ

## ಒಳ ಮೀಸಲು ವಿರೋಧಿಸಿ ಬೆಂಗಳೂರಲ್ಲಿ ಪ್ರತಿಭಟನೆ



ಮೈಸೂರು: ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಆಯೋಗದ ಅವೈಜ್ಞಾನಿಕ ವರದಿಯನ್ನು ತಿರಸ್ಕರಿಸುವಂತೆ ಒತ್ತಾಯಿಸಿ ಮಾ.23ರಂದು ಮೈಸೂರು ನಗರದಲ್ಲಿ ಮಾ. 25ರಂದು ಬೆಂಗಳೂರಲ್ಲಿ ಹಮ್ಮಿಕೊಂಡಿರುವ ಎರಡೂ ಹೋರಾಟಗಳನ್ನು ಯಶಸ್ವಿಗೊಳಿಸಬೇಕೆಂದು ಮುಖಂಡ ನಾಗವಾಲ ನರೇಂದ್ರ ಮನವಿ ಮಾಡಿದರು.

ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಮಹಾಒಕ್ಕೂಟದ ವತಿಯಿಂದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಕರೆದಿದ್ದ ನಾಗಮೋಹನ್ ದಾಸ್ ಆಯೋಗ ನೀಡಿರುವ ಅವೈಜ್ಞಾನಿಕ ವರದಿಯನ್ನು ತಿರಸ್ಕರಿಸುವಂತೆ ಸರ್ಕಾರವನ್ನು ಆಗ್ರಹಿಸಿ ಮಾ. 25ರ ಬೃಹತ್ ಪ್ರತಿಭಟನೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಹೊಲಯ ಮಾದಿಗ ಸಹೋದರರೆಂದು ಭಾವಿಸದ್ದೇವು. ಒಳ ಮೀಸಲಾತಿ ಹಂಚಿಕೆ ಮುನ್ನೆಲೆಗೆ ಬಂದ ಮೇಲೆ ಅದು ಸುಳ್ಳೆಂಬುದು ಸಾಬೀತಾಗಿದೆ. ಸಮೀಕ್ಷೆಯಲ್ಲಿ ಹೊಲೆಯ ಜನಾಂಗದವರು ಸರಿಯಾಗಿ ಪಾಲ್ಗೊಳ್ಳದೇ ವ್ಯತ್ಯಾಸವಾಗಿದೆ. ಪ್ರಾದೇಶಿಕವಾರು ಭಿನ್ನಭಿನ್ನವಾಗಿ ಜಾತಿಯನ್ನು ನಮೂದಿಸಿ ತೊಂದರೆಗೆ ಸಿಲುಕುವಂತಾಗಿದೆ ಎಂದರು.

ಅತಿಥಿ ಉಪನ್ಯಾಸಕ ಡಾ. ಪ್ರತಾಪ್ ಒಳ ಮೀಸಲಾತಿಯನ್ನು ಪೂರ್ಣ ತಿರಸ್ಕರಿಸಬೇಕ? ಅಥವಾ ವೈಜ್ಞಾನಿಕವಾಗಿ ಸರಿಪಡಿಸಿಕೊಂಡು ಮುಂದುವರಿಯಬೇಕ? ಎಂಬುದನ್ನು ನಾಯಕರು ಸ್ಪಷ್ಟಪಡಿಸಬೇಕೆಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ನರೇಂದ್ರ ಅವರು, ನಮ್ಮ ಮಕ್ಕಳ ಭವಿಷ್ಯಕ್ಕೆ ಕಂಟಕವಾಗಿರುವ ಒಳ ಮೀಸಲಾತಿಯನ್ನು ತಿರಸ್ಕರಿಸಬೇಕೆಂಬುದು ನಮ್ಮ ಆಗ್ರಹವಾಗಿದೆ. ನಮ್ಮ ನಾಯಕರುಗಳಿಗೆ ಚಪ್ಪಾಲಿಯಲ್ಲಿ ಹೊಡೆಯುವವರ ಪರವಾಗಿ ನಿಲ್ಲಬೇಕಾದ ಅಗತ್ಯವಿಲ್ಲ ಎಂದು ಹೇಳಿದರು.

ಪ್ರತಿಭಟನೆಯನ್ನು ಯಶಸ್ವಿಗೊಳಿಸಲು ಮೈಸೂರು ಜಿಲ್ಲಾ ಸಮಿತಿ ರಚಿಸಬೇಕು. ತಾಲೂಕಿಗೆ ಒಬ್ಬರು ಸಂಚಾಲಕರನ್ನು ನಿಯೋಜಿಸಬೇಕು. ಸಾವಿರಕ್ಕೂ ಹೆಚ್ಚು ಹಳ್ಳಿಗಳಿದ್ದು, ಮೈಸೂರು ಭಾಗದಲ್ಲಿ ಹೆಚ್ಚಿನ ಜನರು ತೆರಳಬೇಕು ಎಂದು ಮುಖಂಡರು ಸಲಹೆ ನೀಡಿದರು. ಮಾಜಿ ಶಾಸಕ ನಂಜುಂಡಸ್ವಾಮಿ, ಬಿಳಿಗೆರೆ ರಾಜಣ್ಣ, ರಮೇಶ್, ಮೂರ್ತಿ, ಭುಗತಹಳ್ಳಿ ಮಣಿಯಯ್ಯ, ಜಿಪಂ ಮಾಜಿ ಸದಸ್ಯ ಚನ್ನಪ್ಪ, ಸೋಮಶೇಖರ್, ಜವರಪ್ಪ, ದಸಂಸ ಸಂಚಾಲಕ ಚೋರನಹಳ್ಳಿ ಶಿವಣ್ಣ, ಬೆಳವಾಡಿ ಶಿವಕುಮಾರ್, ಡಾ.ಎಸ್.ಮೂರ್ತಿ ಕಲ್ಲಹಳ್ಳಿ, ಕಲ್ಲಹಳ್ಳಿ ಕುಮಾರ್ ಮುಂತಾದವರಿದ್ದರು.

### ಕನಿಷ್ಠ 6 ಲಕ್ಷ ಜನರು ಸೇರಬೇಕಿದೆ

**ಮಾಜಿ ಗ್ರಾಪಂ ಮಾಜಿ ಅಧ್ಯಕ್ಷ ಬೋಗಾದಿ ನಾಗರಾಜ್ ಮಾತನಾಡಿ, ಯುದ್ಧಕ್ಕೆ ಕರೆಯುತ್ತಿರುವುದು ರಕ್ತಪಾತದ ಹೇಳಿಕೆ ಕೊಡುತ್ತಿದ್ದರು ಸುಮ್ಮನಿರಬೇಕ? ಸಚಿವ ಮಹದೇವಪ್ಪ ಅವರಿಗೆ ಚಪ್ಪಲಿಯಲ್ಲಿ ಹೊಡೆದವರು ಕೆ.ಎಚ್.ಮುನಿಯಪ್ಪ ಅವರಿಗೆ ಯಾಕೇ ಹೊಡೆಯಲಿಲ್ಲ. ಒಳ ಮೀಸಲಾತಿ ರಾಜಕಾರಣದ ಕುತಂತ್ರ. ಅದನ್ನು ವಿರೋಧಿಸಬೇಕು. ಪ್ರತಿಭಟನೆಯಲ್ಲಿ ಕನಿಷ್ಠ 6 ಲಕ್ಷ ಜನರು ಸೇರಬೇಕು ಎಂದು ಹೇಳಿದರು.**

## ಹಣ, ಆಸ್ತಿಯಿಂದ ಆರೋಗ್ಯ ಕೊಳ್ಳಲು ಸಾಧ್ಯವಿಲ್ಲ: ಪ್ರೊ.ಭಾಷ್ಯಂ ಸ್ವಾಮೀಜಿ

ಮೈಸೂರು: "ಆರೋಗ್ಯವೇ ಭಾಗ್ಯ" ಎಂಬುದು ಅಕ್ಷರಶಃ ಸತ್ಯ. ದೈಹಿಕ ಮತ್ತು ಮಾನಸಿಕ ಆರೋಗ್ಯವು ಸಂತೋಷ, ಉತ್ಪಾದಕತೆ ಮತ್ತು ಜೀವನದ ಒಟ್ಟಾರೆ ಯೋಗಕ್ಷೇಮಕ್ಕೆ ಅತ್ಯಗತ್ಯ ಎಂದು ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕ ನಾಡೋಜ ಪ್ರೊ.ಭಾಷ್ಯಂ ಸ್ವಾಮೀಜಿ ಅಭಿಪ್ರಾಯಿಸಿದರು.

ನಟ ದಿ.ಪುನೀತ್ ರಾಜ್ ಕುಮಾರ್ ಹುಟ್ಟು ಹಬ್ಬದ ಅಂಗವಾಗಿ ದಟ್ಟಗಳ್ಳಿಯ ನೇತಾಜಿ ವೃತ್ತದ ಬಳಿ ಇರುವ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಹಣ ಅಥವಾ ಆಸ್ತಿಯಿಂದ ಭೌತಿಕ ವಸ್ತುಗಳನ್ನು ಕೊಳ್ಳಬಹುದು, ಆದರೆ ಆರೋಗ್ಯವನ್ನು ಕೊಳ್ಳಲು ಸಾಧ್ಯವಿಲ್ಲ. ಉತ್ತಮ ಆರೋಗ್ಯವೇ ನೈಜ ಸಂಪತ್ತು ಮತ್ತು ಜೀವನದ ಅತಿದೊಡ್ಡ ಆಸ್ತಿಯಾಗಿದೆ. ಆರೋಗ್ಯವಿದ್ದರೆ ಮಾತ್ರ ಜೀವನದ ಸಂತೋಷವನ್ನು ಅನುಭವಿಸಲು ಸಾಧ್ಯ.ಆದ್ದರಿಂದ, ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮ್ಮ ಮೊದಲ ಆದ್ಯತೆಯಾಗಿರಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ನಯನಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ ಆದಾಗಿನಿಂದಲೂ ಸಾರ್ವಜನಿಕರಿಗೆ ಅತ್ಯುತ್ತಮ ಸೇವೆ ಒದಗಿಸಲಾಗುತ್ತಿದೆ.ನಮ್ಮಲ್ಲಿ ಬಿಪಿಎಲ್ ಕಾರ್ಡ್ , ಯಶಸ್ವಿನಿ, ರೈಲ್ವೆ, ಇಎಸ್ ಐ ಸೇರಿ ಇನ್ನಿತರ ಎಲ್ಲಾ ರೀತಿಯ ಯೋಜನೆಗಳನ್ನು ಅಂಗೀಕರಿಸಲಾಗುತ್ತದೆ. ಮಾ.31 ರವರೆಗೂ ಉಚಿತ ವೈದ್ಯರ ಸಲಹೆ ಹಾಗೂ ತಪಾಸಣೆ ವಿಸ್ತರಿಸಲಾಗಿದ್ದು, ಸಾರ್ವಜನಿಕರು ಇದರ ಉಪಯೋಗ ಪಡೆದುಕೊಳ್ಳುವಂತೆ ಕೋರಿದರು. ಈ ಸಂದರ್ಭದಲ್ಲಿ ಯೋಗಾನರಸಿಂಹ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಡಾ.ತೇಜಸ್, ಡಾ.ಶಾಲಿನ ಡಾ.ಪ್ರಕಾಶ್,ಡಾ.ದೇವಾನಂದ್, ಡಾ.ಶಿವಾನಂದ್, ಡಾ. ಅಪೂರ್ವ, ಡಾ.ಪೂರ್ಣಿಮ ಸೇರಿ ಇನ್ನಿತರರು ಉಪಸ್ಥಿತರಿದ್ದರು.



## ಮಾ.23ರಿಂದ ಉಚಿತ ಸಿಇಟಿ ತರಬೇತಿ

ಮೈಸೂರು: ಇಲ್ಲಿನ ತಾಂಡವಪುರದ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗಾಗಿ ಉಚಿತ ಸಿಇಟಿ ತರಬೇತಿ ಆಯೋಜಿಸಲಾಗಿದೆ ಎಂದು ಎಂಇಟಿ ಶಿಕ್ಷಣ ಟ್ರಸ್ಟ್ ಜಂಟಿ ಕಾರ್ಯದರ್ಶಿ ಎಚ್.ಕೆ.ಚೇತನ್ ತಿಳಿಸಿದರು.



ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರ್ಚ್ 23ರಿಂದ 2 ವಾರಗಳವರೆಗೆ ತರಬೇತಿ ನಡೆ ಯಲಿದೆ. ಅನುಭವ ಉಪನ್ಯಾಸಕರು, ಸರ್ಕಾರಿ ನೋಡಲ್ ಅಧಿಕಾರಿಗಳು ತರಬೇತಿ ನೀಡುವರು. ಉಚಿತ ಬಸ್ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲಾಗುವುದು. ವಿದ್ಯಾರ್ಥಿಗಳ ಕಲಿಕೆಗೆ ಅಗತ್ಯವಾದ ಅಧ್ಯಯನ ಸಾಮಗ್ರಿ ಒದಗಿಸಲು 999 ನೋಂದಣಿ ಶುಲ್ಕ ನಿಗದಿ. ಮಾಹಿತಿಗೆ ಮೊ.ಸಂ. 83108 54887 ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಆಡಳಿತ ಅಧಿಕಾರಿ ಮೊಹಮ್ಮದ್ ಸಲಾಮತ್, ಉಪನ್ಯಾಸಕ ಪ್ರದೀಪ್ ಇದ್ದರು.

## ಟಾಂಗಾ ನಿಲ್ದಾಣ ಸ್ಥಳಾಂತರಕ್ಕೆ ಪ್ರತಾಪಸಿಂಹ ಮನವಿ

ಮೈಸೂರು: ಸ್ವದೇಶ್ ದರ್ಶನ್ ಯೋಜನೆಯಡಿ ಮೈಸೂರಿನ ಅರಮನೆ ಮುಂಭಾಗ ಟೌನ್ ಹಾಲ್ ಗೆ ಹೊಂದಿಕೊಂಡಿರುವ ಪಾದಚಾರಿ ರಸ್ತೆ ಮೇಲೆಯೇ ಟಾಂಗಾ ಸ್ಟ್ಯಾಂಡ್ ನಿರ್ಮಾಣ ಮಾಡಲು ಮುಂದಾಗಿರುವ ಪ್ರವಾಸೋದ್ಯಮ ಇಲಾಖೆಗೆ ಭೇಟಿ ನೀಡಿದ ಅವೈಜ್ಞಾನಿಕವಾಗಿ ನಿರ್ಮಾಣ ಮಾಡುತ್ತಿರುವ ಟಾಂಗಾ ನಿಲ್ದಾಣದ ಕಾಮಗಾರಿಯನ್ನು ಕೈಬಿಡಬೇಕು ಎಂದು ಮಾಜಿ ಸಂಸದ ಪ್ರತಾಪಸಿಂಹ ಮನವಿ ಮಾಡಿದರು.



ಟಾಂಗ್ ನಿಲ್ದಾಣ ನಿರ್ಮಾಣಕ್ಕೆ ಸಾರ್ವಜನಿಕರ ವಿರೋಧ ಹಿನ್ನೆಲೆ ಮಂಗಳವಾರ ಭೇಟಿ ನೀಡಿ ಮಾತನಾಡಿದ ಅವರು, ನಿತ್ಯ ಸಾವಿರಾರು ಜನರು ಓಡಾಡುವ ಪಾದಚಾರಿ ಜಾಗವನ್ನು ಮುಚ್ಚಿ ಆ ಜಾಗದಲ್ಲಿ ಟಾಂಗಾ ಸ್ಟ್ಯಾಂಡ್ ಮಾಡಲು ಹೊರಟಿರುವುದು ಅವೈಜ್ಞಾನಿಕವಾಗಿದೆ. ಇದನ್ನು ಬೇರೆಡೆ ಸೂಕ್ತ ಜಾಗದಲ್ಲಿ ಮಾಡಲಿ ಇಲ್ಲ ಬೇಡ. ಪಾದಚಾರಿ ಓಡಾಡುವ ಸ್ಥಳದಲ್ಲಿ ಟಾಂಗಾ ನಿಲ್ದಾಣ ಮಾಡಿದರೆ ಜನರು ಓಡಾಡಲು ಕಷ್ಟವಾಗುತ್ತದೆ. ಕುದುರೆಗಳ ಲದ್ದಿ ದುರ್ವಾಸನೆ ಬರುತ್ತದೆ. ಅದು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಪಾಲಿಕೆ ಅಧಿಕಾರಿಗಳಿಗೆ ಸಾಮಾನ್ಯ ಜ್ಞಾನ ಇಲ್ಲ ಸೂಕ್ತ ಜಾಗ ನೋಡಿ ಮಾಡಬೇಕಿದೆ ಎಂದರು.

ಹೆಚ್ಚಾದ ಟ್ರಾಫಿಕ್ ಸಿಗ್ನಲ್ ವಿಚಾರವಾಗಿ ಮಾತನಾಡಿ 108 ಹೊಸ




ಸಿಗ್ನಲ್ ಅಳವಡಿಕೆ ಮಾಡಿದ್ದಾರೆ. ಒಳ್ಳೆಯ ಆಯುಕ್ತರು ಬಂದಿರಬೇಕು. ಇದಕ್ಕೆ ಮುಖ್ಯಮಂತ್ರಿ ಹಾಗೂ ಅವರ ಸುಪುತ್ರ ಉತ್ತರ ಕೊಡಬೇಕು. ಜನಗಳೇ ಇಲ್ಲದ ಜಾಗದಲ್ಲಿಯೂ ಸಿಗ್ನಲ್ ಹಾಕಿದ್ದಾರೆ. 50 ಮೀಟರ್ ಅಂತರದಲ್ಲಿಯೇ ಸಿಗ್ನಲ್ ಗಳನ್ನು ಅಳವಡಿಕೆ ಮಾಡಿದ್ದಾರೆ. 1.5ಕಿ.ಮೀಗೆ 9ಸಿಗ್ನಲ್ ಹಾಕಿದ್ದಾರೆ ಯಾಕೆ ಸಿಗ್ನಲ್ ಅಳವಡಿಕೆಯ ಮಾಡಿದ್ದಾರೆ. ಕಮಿಷನ್ ಕೊಟ್ಟಿದ್ದಾರೆ ಅಂತ ಸಿಕ್ಕ ಸಿಕ್ಕ ಕಡೆ ಸಿಗ್ನಲ್ ಹಾಕಿದ್ದಾರಾ? ಇದರಿಂದ ಜನರಿಗೆ ಯಾವುದೇ ಪ್ರಯೋಜನ ಮಾತ್ರ ಅಗುತ್ತಿಲ್ಲ. ಜನರು ಸುಮ್ಮನೆ ಟ್ರಾಫಿಕ್ ನಲ್ಲಿ ನಿಲ್ಲೋ ಹಾಗೆ ಆಗಿದೆ. ಅನವಶ್ಯಕ ಸಿಗ್ನಲ್ ಗಳಲ್ಲಿ ಸಿಗ್ನಲ್ ಲೈಟ್ ಅಳವಡಿಕೆ ಮಾಡಿರುವುದನ್ನು ತೆಗೆಯಬೇಕು ಎಂದು ಒತ್ತಾಯಿಸಿದರು. ಬಿಜೆಪಿ ಚಾಮರಾಜ ಕ್ಷೇತ್ರದ ಮಂಡಳ ಅಧ್ಯಕ್ಷ ದಿನೇಶ್ ಗೌಡ, ನಗರಪಾಲಿಕೆ ಮಾಜಿ ಸದಸ್ಯ ಎಂ.ಯು. ಸುಬ್ಬಯ್ಯ, ಸತೀಶ್, ಗ್ರಾಹಕರ ಪರಿಷತ್ತಿನ ಎಸ್.ಕೆ.ದಿನೇಶ್ ಉಪಸ್ಥಿತರಿದ್ದರು.

## ಕೈ ಕೊಯ್ದುಕೊಂಡು ಹೈಡ್ರಾಮ

ತಂದೆ ಕರ್ತವ್ಯ ನಿರ್ವಹಿಸಿದ್ದ ಎರಡು ವರ್ಷದ ಸಂಬಳ ಬಾಕಿ ಪಡೆಯಲು ಮಹದೇವ್ ಮುಂದಾ ಗಿದ್ದಾರೆ. ಸುಮಾರು ನಾಲ್ಕು ಲಕ್ಷ ಸಂಬಳ ನೀಡಲು ಮಂಜುಳ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಮಂಜುಳಾ ಕಿರುಕು ಳಕ್ಕೆ ಬೇಸತ್ತ ಮಹದೇವ್ ಲೋಕಾಯುಕ್ತ ಮೊರೆ ಹೋಗಿದ್ದಾರೆ.

ಮಹದೇವ್ ಅವರಿಂದ 25 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ರೆಡ್ ಹ್ಯಾಂಡಾಗಿ ಹಿಡಿದಿದ್ದಾರೆ.

ಈ ವೇಳೆ ಮಂಜುಳಾ ತನ್ನ ಕೈಯನ್ನ ಹರಿತವಾದ ಆಯುಧದಿಂದ ಕೊಯ್ದುಕೊಂಡಿದ್ದಾರೆ. ಗಾಯಗೊಂಡ ಅವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಲಾಗಿದೆ.

## ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ: ವಿದ್ಯಾರ್ಥಿಗಳಿಗೆ ಸಿಎಂ ಶುಭಾಶಯ


ಮಕ್ಕಳಿಗೆ ಪೋಷಕರು ಮಾನಸಿಕ ಹಿಂಸೆ ನೀಡಬಾರದು ಎಂದು ಹೇಳಿದರು. ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗುತ್ತಿದೆ ಎಂಬ ಸುದ್ದಿಗಳು ಬರುತ್ತಿವೆ. ಈ ಬಗ್ಗೆ ಶಿಕ್ಷಣ ಸಚಿವರು ಸುದ್ದಿಗೋಷ್ಠಿ ನಡೆಸಿ ಎಚ್ಚರಿಕೆ ನೀಡುವಂತೆ ತಿಳಿಸಿದರು.

## ಪ್ರಶಸ್ತಿಗೆ ಕೃತಿಗಳ ಆಹ್ವಾನ

ಹಾಗೂ ಪ್ರಕಾಶಕರು ಪ್ರಕಟಿತ ಕೃತಿಗಳನ್ನು ನಿರ್ದೇಶಕರು, ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಜಗದ್ಗುರು ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570004 ಈ ವಿಳಾಸಕ್ಕೆ ಮಾ.31ರ ಒಳಗೆ ಕಳುಹಿಸಲು ಪ್ರಕಟಣೆ ತಿಳಿಸಿದೆ.

## ಪ್ರವೇಶಕ್ಕೆ ಅರ್ಜಿ ಅಹ್ವಾನ

ಮೈಸೂರು: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಗಸ್ಟ್–2025ನೇ ಸಾಲಿಗೆ ಖಾಸಗಿ ಅಭ್ಯರ್ಥಿಗಳಿಗೆ ಪ್ರವೇಶ ಪ್ರಕ್ರಿಯೆ ಪ್ರಾರಂಭಗೊಂ ಡಿದ್ದು, ಮಾ.20ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿ ಗಾಗಿಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಪ್ರಾಚಾರ್ಯರನ್ನು ಭೇಟಿ ನೀಡಬಹುದಾಗಿದೆ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ತಿಳಿಸಿದ್ದಾರೆ.




**ವಿಚಾರ ಸಂಕಿರಣ, ರಂಗಗೌರವ ಮತ್ತು ನಾಟಕ ಪ್ರದರ್ಶನ**

# ಮಾ.20ರಿಂದ ಜಿಲ್ಲಾ ನಾಟಕೋತ್ಸವ

ಬೆಂಗಳೂರಿನ: ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದೊಂದಿಗೆ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆವತಿಯಿಂದ ಜಿಲ್ಲಾ ನಾಟಕೋತ್ಸವದ ಪ್ರಯುಕ್ತ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಾ.20 ಮತ್ತು 21ರಂದು ವಿಚಾರ ಸಂಕಿರಣ, ರಂಗಗೌರವ ಮತ್ತು ನಾಟಕ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಗೌರವಾಧ್ಯಕ್ಷ ರಾಜಶೇಖರ ಕದಂಬ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಮಾ.20ರಂದು ಸಂ.4ಗಂಟೆಗೆ ನಡೆಯಲಿರುವ ಕಾರ್ಯಕ್ರಮವನ್ನು ಚಿಂತಕಿ ಸವಿತಾ ಪ. ಮಲ್ಲೇಶ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ರಂಗನಿರ್ದೇಶಕಿ ಕೆ. ಆರ್.ಸುಮತಿ, ಉಪನ್ಯಾಸಕಿ ಡಾ.ಶಭಾನ ಮೈಸೂರು ಆಗಮಿಸುವರು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ.ನಾಗರಾಜ ಮೂರ್ತಿ ಅಧ್ಯಕ್ಷತೆವಹಿಸುವರು. ವಿಚಾರಗೋಷ್ಠಿಯಲ್ಲಿ ಒಡನಾಡಿ ಸಂಸ್ಥೆ ಮುಖ್ಯಸ್ಥ ಸ್ಟ್ಯಾನ್ಲಿ, ಪ್ರಜಾಪ್ರಭುತ್ವ, ಸಂವಿಧಾನ ಮತ್ತು ಮಹಿಳೆ, ರಂಗಕರ್ಮಿ ದಿನಮಣಿ ಪ್ರತಿಕ್ರಿಯೆ ನೀಡುವರು. ಸಂಶೋಧಕಿ ರತಿರಾವ್ ಅಧ್ಯಕ್ಷತೆವಹಿಸುವರು. ಮೀನಾ ಮೈಸೂರು ರಂಗಭೂಮಿ ಮತ್ತು ಮಹಿಳೆ ಕುರಿತು ವಿಚಾರ ಮಂಡನೆ ಮಾಡುವರು. ಪತ್ರಕರ್ತ ಗಣೇಶ್ ಅಮೀನಗಡ ಪ್ರತಿಕ್ರಿಯೆ ನೀಡುವರು. ಉಪನ್ಯಾಸಕಿ ಸುಜಾತಾ ಅಕ್ಕಿ ಅಧ್ಯಕ್ಷತೆ ವಹಿಸುವರೆಂದರು. ರಂಗಭೂಮಿ ಹಿರಿಯ ಕಲಾವಿದರಾದ ಯಶೋಧಾ, ಸುಲೋಚನಾ, ವಿಜಯಲಕ್ಷ್ಮಿಗೆ ರಂಗಗೌರವ ಪ್ರಶಸ್ತಿ ನೀಡಲಾಗುವುದು. ಸಂ.7ಗಂಟೆಗೆ ಜನಮನ ಸಾಂಸ್ಕೃತಿಕ ಸಂಘಟನೆಯಿಂದ ಮಹಾಶ್ವೇತಾ ದೇವಿಯ ದ್ರೌಪ್ತಿ ನಾಟಕ ಪ್ರದರ್ಶನ ಇರಲಿದೆ. ಸುಮತಿ ನಿರ್ದೇಶನ ಜನಾರ್ಧನ್ ಸಂಗೀತ ನೀಡಿದ್ದಾರೆ ಎಂದರು.

ಮಾ.21ರಂದು ಸಂ.4ಗಂಟೆಗೆ ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ನಡೆಯಲಿರುವ ನೆನಪಿನಂಗಳ–ರಂಗ ಸಂವಾದದಲ್ಲಿ ಹಿರಿಯ ರಂಗಕರ್ಮಿ ಗಂಗಾಧರಸ್ವಾಮಿ ಅವರೊಂದಿಗೆ ಸಂವಾದ ನಡೆಯಲಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ತಲಕಾಡು, ಉಪಾಧ್ಯಕ್ಷ ಮತಿ ಮೋಹನ್ ರಾಜ್ ಶೆಟ್ಟಿ, ಸಂಘಟನಾ ಕಾರ್ಯದರ್ಶಿ ಡಾ.ಎಸ್.ಭುವನೇಶ್ವರಿ, ನಾಗಭೂಷಣ್ ಇದ್ದರು.

# ರಾಮಕೃಷ್ಣ ಆಶ್ರಮಕ್ಕೆ ನಾರೇಯಣ ಪ್ರಶಸ್ತಿ



ಮೈಸೂರು: ನಗರದ ಯೋಗಿನಾರೇಯಣ ಯತೀಂದ್ರ ಪ್ರಚಾರ ಸಭಾ ನೀಡುವ 2026ನೇ ಸಾಲಿನ 'ನಾರೇಯಣ ಪ್ರಶಸ್ತಿ'ಗೆ ಇಲ್ಲಿನ ಶ್ರೀರಾಮಕೃಷ್ಣ ಆಶ್ರಮವನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ಅಭಿನಂದನಾ ಪ್ರಶಂಸಾಪತ್ರ, ಯೋಗಿನಾರೇಯಣ ಯತೀಂದ್ರರ ಸ್ಮರಣ ಫಲಕ ಹಾಗೂ 50 ಸಾವಿರ ನಗದು ಒಳಗೊಂಡಿದೆ. ಚಾಮರಾಜನಗರದ ವರನಟ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಮಾರ್ಚ್ 22ರಂದು ಬೆಳಿಗ್ಗೆ 11ಕ್ಕೆ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಆಶ್ರಮದ ಪರವಾಗಿ ಸ್ವಾಮಿ ಮುಕ್ತಿದಾನಂದ ಪ್ರಶಸ್ತಿ ಸ್ವೀಕರಿಸುವರು. ಆಶ್ರಮ ಆಧ್ಯಾತ್ಮಿಕ, ಶಿಕ್ಷಣ, ಸಂಸ್ಕೃತಿ ಹಾಗೂ ಸಮಾಜಸೇವಾ ಕ್ಷೇತ್ರಗಳಲ್ಲಿ ಮಾಡುತ್ತಿರುವ ಅಪೂರ್ವ ಸಾಧನೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಭಾ ಪ್ರಧಾನ ಸಂಚಾಲಕ ಎಚ್.ಎ.ವೆಂಕಟೇಶ್ ತಿಳಿಸಿದ್ದಾರೆ.

# ಅಪ್ಪು ಜನ್ಮಜಯಂತಿ ಆಚರಣೆ



ಚಾಮರಾಜನಗರ, ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರ 51 ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ರಾಜರತ್ನ ಅಪ್ಪು ಯುವಸೇನಾ ಸಮಿತಿ ವತಿಯಿಂದ ಚಿಕನ್ ಬಿರಿಯಾನಿ ವಿತರಿಸಲಾಯಿತು.

**ರಾಜರತ್ನ ಅಪ್ಪು ಯುವಸೇನಾ ಸಮಿತಿಯಿಂದ ಆಚರಣೆ**

ನಗರದ ಹಳೆಯ ಖಾಸಗಿ ಬಸ್ ನಿಲ್ದಾಣದಲ್ಲಿರುವ ಕಾಮಧೇನು ಮಿಲ್ಕ್ ಪಾರ್ಲರ್ ಮುಂಭಾಗದಲ್ಲಿ

ರಾಜರತ್ನ ಅಪ್ಪು ಯುವಸೇನಾ ಸಮಿತಿ ಅಯೋಜಿಸಿದ ಕಾರ್ಯಕ್ರಮದಲ್ಲಿ ಅಪ್ಪು ಕಟೌಟ್ ಗೆ ಮಾಲಾರ್ಪಣೆ ಮಾಡಿ ಕೇಕ್ ಕತ್ತರಿಸಿ ಅಪ್ಪು ಅಪ್ಪು ಅಪ್ಪು ಎಂದು ಜೈಕಾರ ಕೂಗಿ ಸಂಭ್ರಮಿಸಿದರು. ನಂತರ ಚಿಕನ್ ಬಿರಿಯಾನಿ ವಿತರಿಸಿದರು. ಅಧ್ಯಕ್ಷ ಕ್ಯಾಂಟೀನ್ ಮಂಜು, ಮಿಲನಮಂಜು, ಕಾರ್ತಿಕ್ ಪವರ್, ರಮೇಶ್, ಮದನ್, ಕಾರ್ತಿಕ್ ಕಾರ್, ಕೆ. ಆರ್. ಮಂಜು,ಬಂಗಾರನಾಯಕ,ಮಣಿ, ಅಂಕಶೆಟ್ಟಿ, ಶಿವು, ಪ್ರದೀಪ್, ಮೋಹನ್, ಮಹೇಶ್ ಅಧಿತಿ, ಚೇತನ್, ಸುಸ್ಯೆನ್, ವಿನೋದ್, ಪ್ರಭ ಮಹೇಶ, ಮಂಜುನಾಥ್, ಕುಮಾರ್, ರಾಜೇಂದ್ರ, ಸಿದ್ದರಾಜು, ಹರದನಹಳ್ಳಿ ಮಹೇಶ್ಇತರರು ಹಾಜರಿದ್ದರು.

# ಮಾ.24ರಿಂದ 4ನೇ ತ್ರೈಮಾಸಿಕ ಜನಸಂಪರ್ಕ ಸಭೆ

ಮೈಸೂರು: ನ.ರಾ ಮೊಹಲ್ಲಾ ವಿಭಾಗದ ವ್ಯಾಪ್ತಿಯ ಗ್ರಾಹಕರಿಗೆ ವರುಣ, ಚಾಮುಂಡಿಪುರಂ, ಕೇಂದ್ರ, ನ.ರಾ ಮೊಹಲ್ಲಾ ಹಾಗೂ ಜ್ಯೋತಿನಗರ ಉಪವಿಭಾಗ ಕಛೇರಿಗಳಲ್ಲಿ 4ನೇ ತ್ರೈಮಾಸಿಕ ಜನ ಸಂಪರ್ಕ ಸಭೆಯನ್ನು ಮಾ.24 ರಿಂದ 26ರವರೆಗೆ ಏರ್ಪಡಿಸಲಾಗಿದೆ.

ಸಭೆಯನ್ನು ಮಾ.24 ರಂದು ಬೆಳಿಗ್ಗೆ 11ಗಂಟೆ ವರುಣ ಉಪ ವಿಭಾಗ ಹಾಗೂ ಮಧ್ಯಾಹ್ನ 3ಗಂಟೆ ಚಾಮುಂಡಿಪುರಂ ಉಪವಿಭಾಗ, ಮಾ.25 ಬೆಳಿಗ್ಗೆ 11ಗಂಟೆಗೆ ಕೇಂದ್ರ ಉಪವಿಭಾಗ, ಮಾ.26 ರಂದು ಬೆಳಿಗ್ಗೆ 11ಗಂಟೆ ನ.ರಾ ಮೊಹಲ್ಲಾ ಉಪವಿಭಾಗ ಹಾಗೂ ಮಧ್ಯಾಹ್ನ 3.ಗಂಟೆ ಜ್ಯೋತಿನಗರ ಉಪವಿಭಾಗದಲ್ಲಿ ಆಯೋಜಿಸಲಾಗುತ್ತದೆ. ಗ್ರಾಹಕರು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಉಪವಿಭಾಗಗಳಲ್ಲಿ ನಡೆಯುವ ಜನಸಂಪರ್ಕ ಸಭೆಯಲ್ಲಿ ಲಿಖಿತ ಅರ್ಜಿಗಳನ್ನು ಸಲ್ಲಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಚಾ.ವಿ.ಸ.ನಿ.ನಿ ನ.ರಾ. ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

# ಮಾ.23ರಂದು ದೇವರ ದಾಸಿಮಯ್ಯ ಜಯಂತಿ

ಮೈಸೂರು: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ದೇವರ ದಾಸಿಮಯ್ಯ ಜಯಂತಿ ಸಮಿತಿ ವತಿಯಿಂದ ದೇವರ ದಾಸಿಮಯ್ಯ ಜಯಂತಿಯನ್ನು ಮಾ.23ರಂದು ಮದ್ಯಾಹ್ನ 12 ಘಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿರುತ್ತದೆ.

ಬೆಳಗ್ಗೆ 9 ಘಂಟೆಗೆ ಅರಮನೆಯ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕರ್ನಾಟಕದ ಕಲಾಮಂದಿರದವರೆಗೂ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಕೈಗಾರಿಕ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಘನ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿದ್ದಾರೆ. ಶಾಸಕ ಕೆ.ಹರೀಶ್ ಗೌಡರ ಕಾರ್ಯಕ್ರಮದ ಅಧ್ಯಕ್ಷತೆವಹಿಸಲಿದ್ದಾರೆ. ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್ ಕುಮಾರ್, ಎ.ಬಿ.ರಮೇಶ್ ಬಂಡಿ ಸಿದ್ದೇಗೌಡ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಮೈಸೂರು ಪೇಂಟ್ಸ್ ಮತ್ತು ವಾರ್ನಿಂಷ್ ಲಿಮಿಟೆಡ್ ಅಧ್ಯಕ್ಷ ಹೆಚ್.ಡಿ.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎನ್.ರಂಗಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಆಗಮಿಸಲಿದ್ದಾರೆ. ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ವರದಿಗಾರ ಶ್ರೀ ಸ್ವಾಮಿ ಮಹಮೇಧಾನಂದ ಸಾನಿಧ್ಯವನ್ನು ವಹಿಸಲಿದ್ದಾರೆ. ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಭಾರತೀಯ ಭಾಷಾ ಸಂಸ್ಥಾನದ ಯೋಜನಾ ನಿರ್ದೇಶಕ ಡಾ.ನೀಲಗಿರಿ ತಳವಾರ್ ಉಪನ್ಯಾಸವನ್ನು ನೀಡಲಿದ್ದಾರೆ.

# ದರಪಟ್ಟಿ ಆಹ್ವಾನ

ಮೈಸೂರು: ನಂಜನಗೂಡು ತಾಲ್ಲೂಕು ಕಾರಾಗೃಹದಲ್ಲಿ ಅಳವಡಿಸಿರುವ 15 ಏಗಿಂ EICHER(TNTL)ಮಾದರಿ ಜನರೇಟರ್ ದುರಸ್ಥಿಯಾಗಿದ್ದು, ತಾಂತ್ರಿಕ ಸಿಬ್ಬಂದಿಯವರ ಪರಿಶೀಲನೆಯನ್ವಯ ಬ್ಯಾಟರಿ ಅಳವಡಿಕೆ ಮತ್ತು ಇತರೆ ಕಾಮಗಾರಿಗಳು ಅಗತ್ಯವಿರುತ್ತದೆ.

ದುರಸ್ಥಿ/ಅಳವಡಿಕೆ ಕಾಮಗಾರಿಗಳಿಗೆ ದ್ವಿ ಪ್ರತಿಯಲ್ಲಿ ದರಪಟ್ಟಿಗಳನ್ನು ಮಾ.22ರೊಳಗಾಗಿ ನಂಜನಗೂಡು ತಾಲ್ಲೂಕು ಉಪ ಕಾರಾಗೃಹದ ಅಧೀಕ್ಷಕರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ ಸಂ.9480806435ನ್ನು ಸಂಪರ್ಕಿಸಬಹುದಾಗಿದೆ ಎಂದು ನಂಜನಗೂಡು ತಾಲ್ಲೂಕು ಉಪ ಕಾರಾಗೃಹ ಅಧೀಕ್ಷಕ ತಿಳಿಸಿದ್ದಾರೆ.

# ಮಾ.20ಕ್ಕೆ ವಿದ್ಯುತ್ ವ್ಯತ್ಯಯ

ಮೈಸೂರು: ದಕ್ಷಿಣ ಹಾಗೂ ಮಂಡಕಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಮಾ.20 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಘಂಟೆಯವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ದಕ್ಷಿಣ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಪ್ರದೇಶಗಳು: ವಿದ್ಯಾರಣ್ಯಪುರಂ 25 ರಿಂದ 30ನೇ ಕ್ರಾಸ್, ಕನಕಗಿರಿ, ವೀವರ್ಸ್ ಕಾಲೋನಿ, ಸ್ಟರ್ಲಿಂಗ್ ಥಿಯೇಟರ್, ಕೆ.ಆರ್ ಪುರಂ, ಇಂಡಸ್ಟ್ರಿಯಲ್ ಸಬರ್ಬ್ 1 ರಿಂದ 3ನೇ ಹಂತ, ಚಾಮುಂಡಿಪುರಂ ಸರ್ಕಲ್, ಸಿಲ್ಕ್ ಫ್ಯಾಕ್ಟರಿ, ಅಶೋಕಪುರಂ, ಮೇದರಕೇರಿ, ಆರ್.ಟಿ.ಓ, ಬಲ್ಲಾಳ್ ಸರ್ಕಲ್, ನಂಜುಮಳಿಗೆ, ಬಂಡಿಪಾಳ್ಯ, ಹೊಸಹುಂಡಿ, ಗುಡುಮಾದನಹಳ್ಳಿ, ಏಳಿಗೆಹುಂಡಿ, ಆಲನಹಳ್ಳಿ ರಿಂಗ್ ರಸ್ತೆ, ನಾಚನಹಳ್ಳಿ ಪಾಳ್ಯ, ಕವಿತಾ ಬೇಕರಿ ಸರ್ಕಲ್, ಗೊಬಳಿ ಮರ, ಜೆ.ಪಿ ನಗರ ಎ.ಬಿ.ಸಿ,ಡಿ ಮತ್ತು ಇ ಬ್ಲಾಕ್, ಓಂಕಾರ್ ಲೇಔಟ್, ಪೊಲೀಸ್ ಬೂತ್ ಸರ್ಕಲ್, ಸಿದ್ದಲಿಂಗೇಶ್ವರ ಲೇಔಟ್, ಅಮೋಘ ಪ್ಯಾಲೆಸ್ ಹತ್ತಿರ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳು.

**ಮಂಡಕಳ್ಳಿ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಪ್ರದೇಶಗಳು**

ಮಂಡಕಳ್ಳಿ, ಗೆಜ್ಜಗಳ್ಳಿ ಐ.ಪಿ ಪ್ರದೇಶ, ಎಸ್. ಉತ್ತನಹಳ್ಳಿ, ಶ್ರೀನಗರ, ರೇಷ್ಮನಗರ, ಟೀಚರ್ಸ್ ಕಾಲೋನಿ, ಮಹಾಲಕ್ಷ್ಮಿ ಲೇಔಟ್, ಆರ್.ಕೆ ಲೇಔಟ್, ಭವಾನಿ ಲೇಔಟ್, ವಿನಾಯಕ ಲೇಔಟ್, ಮಹಾಲಕ್ಷ್ಮಿ ದೃಷ್ಟಿ ಲೇಔಟ್, ಕೊಪ್ಪಲೂರು ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

# ಗ್ಯಾಸ್ ಏಜೆನ್ಸಿ ಮುಂದೆ ಜನಸ್ತೋಮ

## ಸಿಲಿಂಡರ್ ಗಾಗಿ ಸರತಿ ಸಾಲು | ಗ್ರಾಮೀಣ ಭಾಗದಲ್ಲೂ ಗ್ಯಾಸ್ ಟ್ರಬಲ್

**ಶಿವಕುಮಾರ ತುಂಬಸೋಗೆ**

ಸರಗೂರು: ಹಳೆ ಮನೆಗಳ ನವೀಕರಣದ ವೇಳೆ ಸೌದೆ ಒಲೆಗಳನ್ನು ಕೆಡವಿರುವುದು, ಹೊಸ ಮನೆಗಳ ನಿರ್ಮಾಣದ ವೇಳೆ ಒಲೆಗಳನ್ನು ಕಟ್ಟಿಸದೇ ಇರುವುದು, ಬಹುತೇಕರು ಜಮೀನುಗಳನ್ನು ಹೊಂದಿದ್ದು, ಅಲ್ಲಿ ದೊರೆಯುವ ಕಟ್ಟಿಗೆಗಳಿಂದ ಅಡುಗೆ ಮಾಡುತ್ತಿದ್ದ ಸಂಪ್ರದಾಯವನ್ನು ಮಹಿಳೆಯರು ಮರೆತಿರುವುದರಿಂದ ಇದೀಗ ಗ್ರಾಮೀಣ ಭಾಗದಲ್ಲೂ ಗ್ಯಾಸ್ ಟ್ರಬಲ್ ಶುರುವಾಗಿದೆ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಎಲ್ಲೆಡೆ ಇತ್ತೀಚೆಗೆ ಗ್ಯಾಸ್ ಸಿಲಿಂಡರ್ (ಎಲ್.ಪಿ.ಜಿ)ಯದ್ದೇ ಸದ್ದು. ಇಷ್ಟು ದಿನ ನಗರ ಪ್ರದೇಶ ಹಾಗೂ ಹೋಟೆಲ್ ಗಳ ಮಾಲೀಕರಿಗಿದ್ದ ಸಿಲಿಂಡರ್ ನ ಚಿಂತೆ ಇದೀಗ ಹಳ್ಳಿ, ಹಳ್ಳಿಗಳ ಜನರನ್ನೂ ಕಾಡುತ್ತಿದೆ.

ಸರಗೂರಿನ ಸೌಜನ್ಯ ಗ್ಯಾಸ್ ಏಜೆನ್ಸಿ ಬಳಿ ಜನರು ಭಾರತ್ ಗ್ಯಾಸ್ ಸಿಲಿಂಡರ್ ಗಾಗಿ ಮಂಗಳವಾರ ಮುಂಜಾನೆ ಯಿಂದ ಸಂಜೆವರೆಗೂ ಸರತಿ ಸಾಲಿನಲ್ಲಿ ಕಾಯುತ್ತಿದ್ದರು. ಇಲ್ಲಿನ ಏಜೆನ್ಸಿಗೆ ಒಂದು ಲಾರಿಯಲ್ಲಿ ಪ್ರತಿನಿತ್ಯ ಬರುವ 342 ಸಿಲಿಂಡರ್ ಗಳ ಅವಶ್ಯಕತೆಯಿದೆ. ಏಳೆಂಟು ದಿನಗಳಿಂದ ಸೌಜನ್ಯ ಗ್ಯಾಸ್ ಏಜೆನ್ಸಿಯ ಗೋಡೌನ್ ಗೆ ಸಿಲಿಂಡರ್ ಗಳ ಆಮದು ಆಗದೇ ಇರುವುದರಿಂದ ಹಳ್ಳಿಗಳಿಗೆ ಸರಬರಾಜು ಸ್ಥಗಿತ ಮಾಡಲಾಗಿತ್ತು. ಮಂಗಳವಾರ ನಸುಕಿನ ಜಾವ ಭಾರತ್ ಗ್ಯಾಸ್ ಸಿಲಿಂಡರ್ ಹೊತ್ತಿದ್ದ ಲಾರಿ ಏಜೆನ್ಸಿ ಕಡೆ ಬರುತ್ತಿದ್ದ ಸುದ್ದಿ ಕಾಡ್ಗಿಚ್ಚಿನಂತೆ ಹರಡಿ, ಹಲವು ಗ್ರಾಮಗಳ ಜನರು ಅಂಗಡಿ ಮುಂದೆ ಮುಗಿಬಿದ್ದಿದ್ದರು. ಮಂಗಳವಾರ ಮಧ್ಯಾಹ್ನ ಒಂದು ಲಾರಿ, ಬುಧವಾರ ಒಂದು ಲಾರಿ ಲೋಡ್ ಬರಲಿದ್ದು, ಮುಂದಿನ ಗುರುವಾರದಿಂದ ಸರಬರಾಜು ಎಂದಿನಂತೆ ಇರಲಿದೆ ಎಂದು ಸೌಜನ್ಯ ಗ್ಯಾಸ್ ಏಜೆನ್ಸಿ ಮ್ಯಾನೇಜರ್ ಪ್ರತಾಪ್ ತಿಳಿಸಿದ್ದಾರೆ.




### ಹೊಸ ಪೀಳಿಗೆಗೆ ಹೊಂದಿಕೊಂಡ ಮಹಿಳೆಯರು: ಅಡಿಗೆ ಒಲೆಗಳು ಕಣ್ಮರೆ

**ಸಾಮಾನ್ಯವಾಗಿ ಗ್ರಾಮೀಣ ಭಾಗದ ಬಹುತೇಕರು ಜಮೀನು ಹೊಂದಿರುವುದರಿಂದ ಅಲ್ಲಲ್ಲಿ ಕಟ್ಟಿಗೆಗಳು ಲಭ್ಯವಾಗುತ್ತಿದ್ದವು. ಮನೆಗಳಲ್ಲಿ ಸೌದೆ ಒಲೆಗಳನ್ನು ಹೊಂದಿದ್ದು, ಅಡಿಗೆ, ಸ್ನಾನಕ್ಕೆ ಬಳಸಲಾಗುತ್ತಿತ್ತು. ಸೌದೆ ಒಲೆಯ ಊಟ ರುಚಿಕರ ಎನ್ನಲಾಗುತ್ತಿತ್ತು.**
**ಬೆಂಕಿಯ ಕಾವು ವ್ಯರ್ಥವಾಗಿ ಬೇರೆಡೆ ಕದಡದೇ ಬಹುಬೇಗ ಆಹಾರ ತಯಾರಿಸಲು ಅಸ್ತ್ರ ಒಲೆಗಳು ಸಹಕಾರಿಯಾಗಿದ್ದವು. ಗ್ರಾಮಾಂತರದಲ್ಲಿ ಹಳೆ ಮನೆಗಳ ನವೀಕರಣದ ವೇಳೆ ಒಲೆಗಳನ್ನು ಕೆಡವಲಾಗಿದೆ. ಹೊಸ ಮನೆಗಳ ನಿರ್ಮಾಣದ ವೇಳೆ ಸೌದೆ ಒಲೆಗಳಿಗೆ ಆದ್ಯತೆ ನೀಡುತ್ತಿಲ್ಲ ಹಾಗೂ ಮಹಿಳೆಯರು ಹೊಸ ಪೀಳಿಗೆಗೆ ಹೊಂದಿಕೊಂಡಿರುವುದರಿಂದ ಗ್ಯಾಸ್ ಸಿಲಿಂಡರ್ ಮೇಲೆ ನಗರ ಪ್ರದೇಶ ದಂತೆಯೇ ಹಳ್ಳಿಗರೂ ಅವಲಂಭಿಸಿದ್ದಾರೆ.**

ಇನ್ನುಳಿದಂತೆ ಬಿ.ಮಟಕೆರೆ, ನಾಗನಹಳ್ಳಿಯ ಇಂಡಿಯನ್, ಎಚ್.ಮಟಕೆರೆ, ಕೃಷ್ಣಾಪುರ, ಹ್ಯಾಂಡ್ ಪೋಸ್ಟ್‌ನ ಎಚ್.ಪಿ ಸಿಲಿಂಡರ್ ಏಜೆನ್ಸಿಗಳ ಸಿಲಿಂಡರ್ ಗಳ ಸರಬರಾಜಿನಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿಲ್ಲ. ಗ್ರಾಹಕರು ಉಹಾಪೋಹಗಳಿಗೆ ಕಿವಿಗೊಡಬಾರದು ಎಂದು ಕಂಪನಿಯ ಮೂಲಗಳು ವರ್ತಮಾನ ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

ಇತ್ತೀಚೆಗೆ ವಾಣಿಜ್ಯ ಸಿಲಿಂಡರ್ ಸರಬರಾಜಿನಲ್ಲಿ ಮಾತ್ರ ವ್ಯತ್ಯಯ ಉಂಟಾಗಿತ್ತು. ಗೃಹಬಳಕೆ ಎಲ್.ಪಿ.ಜಿಯಲ್ಲಿ ವ್ಯತ್ಯಯವಾಗಿಲ್ಲ ಎನ್ನಲಾಗುತ್ತಿತ್ತು. ಗುರುವಾರ ಮೈಸೂರಿನ ಜಿ.ಪಂ ಕಚೇರಿಯಲ್ಲಿ ತೈಲ ಸರಬರಾಜು ಕಂಪನಿಗಳಾದ ಎಚ್.ಪಿ, ಬಿಪಿ, ಸಿಎಲ್, ಐಒಸಿ ಅಧಿಕಾರಿಗಳೊಟ್ಟಿಗೆ ಸಭೆ ನಡಿಸಿದ್ದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಜಿಲ್ಲೆಯಲ್ಲಿ ಗೃಹ ಬಳಕೆ ಅಡುಗೆ ಅನಿಲ ಪೂರೈಕೆಯಲ್ಲಿ ಯಾವುದೇ ತೊಂದರೆಯಿಲ್ಲ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಅಭಯ ನೀಡಿದ್ದರು.

ಗ್ಯಾಸ್ ಬುಕ್ ಮಾಡಲು ಹಿಂದೆ ಯಾವುದೇ ನಿರ್ಬಂಧವಿರಲಿಲ್ಲ. ಒಂದು ಸಿಲಿಂಡರ್ ಬಿಕ್ಕಿಂಗ್ ಮಾಡಿ, ಮೂರ್ನಾಲ್ಕು ದಿನಗಳ ನಂತರ ಮತ್ತೊಂದು ಬುಕ್ಕಿಂಗ್ ತೆಗೆದುಕೊಳ್ಳುತ್ತಿತ್ತು.





### ಹಳ್ಳಿಗಳಿಗೆ ತಲುಪಿಸುವಲ್ಲಿ ವಿಳಂಬ

**ನೇರಳೆ, ಮಾಗುಡಿಲು, ನಿಲುವಾಗಿಲು, ತುಂಬಸೋಗೆ, ಇಟ್ನ, ಹುಲಿಕುರ, ದೇವಲಾಪುರ, ಹೆಬ್ಬಲಗುಪ್ಪೆ, ಕಾಡಂಚಿನ ಗ್ರಾಮಗಳಾದ ನಡಾಡಿ, ಚಿಕ್ಕಬರಗಿ, ಮೊಳೆಯೂರು, ಪುರದಕಟ್ಟೆ, ಹಲಸೂರು, ಶಾಂತಿಪುರ, ಬೀರ್ವಾಳು ಸೇರಿದಂತೆ ನೂರಾರು ಗ್ರಾಮಗಳಲ್ಲಿ ಗ್ಯಾಸ್ ಕಂಪನಿಗಳ ಗ್ರಾಹಕರಿದ್ದಾರೆ. ದಿನ ಬಿಟ್ಟರೆ ಮಾರನೆ ದಿನ ಹಳ್ಳಿಗಳ ಮನೆಬಾಗಿಲಿಗೆ ಬಂದು ಗ್ಯಾಸ್ ವಿತರಿಸುತ್ತಿದ್ದರು. ಇತ್ತೀಚೆಗೆ ಒಂದು ವಾರದ ನಂತರವೂ ಗ್ಯಾಸ್ ಸರಬರಾಜಿನ ವಾಹನಗಳು ಹಳ್ಳಿಗಳತ್ತ ಸುಳಿಯದೇ ಇರುವುದರಿಂದ ಗ್ರಾಹಕರೆ ಸರಗೂರು ಸಮೀಪದ ಬಿಡುಗಲು ಬಳಿಯಿರುವ ಸೌಜನ್ಯ ಗ್ಯಾಸ್ ಏಜೆನ್ಸಿ ಮುಂದೆ ಸರತಿ ಸಾಲಿನಲ್ಲಿ ನಿಲ್ಲಲು ಕಾರಣವಾಗಿದೆ.**



ಆದರೆ, ಇತ್ತೀಚೆಗೆ ಸಿಂಗಲ್ ಸಿಲಿಂಡರ್ ಇರುವವರಿಗೆ 25ದಿನ, ಡಬಲ್ ಸಿಲಿಂಡರ್ ಇರುವವರಿಗೆ 30 ದಿನಗಳ ಒಳಗೆ ಯಾವುದೇ ಬುಕ್ಕಿಂಗ್ ಮಾಡುವಂತಿಲ್ಲ ಎಂದು ತೈಲ ಕಂಪನಿಗಳಿಂದ ಗ್ರಾಹಕರಿಗೆ ನೇರ ಮೆಸೇಜ್ ಬರುತ್ತಿರುವುದು ಗ್ರಾಹಕರ ಆತಂಕ ಮತ್ತಷ್ಟು ಹೆಚ್ಚಳವಾಗಲು ಕಾರಣವಾಗಿದೆ.

# ನಾಲ್ವರ ಬಂಧನ, 5ಕೆಜಿ ಗಾಂಜಾ ವಶ



ಮೈಸೂರು: ಮಾದಕ ವ್ಯಸನ ಮುಕ್ತ ಮೈಸೂರು 'ವಿಮುಕ್ತಿ' ಅಭಿಯಾನದ ಮುಂದುವರಿದ ಕಾರ್ಯಾಚರಣೆಯಲ್ಲಿ ಸಿ.ಸಿ.ಬಿ. ವಿಭಾಗದ ಪೊಲೀಸರಿಂದ 4 ಆರೋಪಿಗಳ ಬಂಧಿಸಿ, 8,65,000ರೂ. ಮೌಲ್ಯದ ನಿಷೇಧಿತ ಮಾದಕವಸ್ತು 5ಕೆ.ಜಿ 320ಗ್ರಾಂ ಗಾಂಜಾ ಹಾಗೂ ವಾಹನ ಜಪ್ತಿ ಮಾಡಿದ್ದಾರೆ.

ಪೊಲೀಸ್ ಆಯುಕ್ತ ಮತ್ತು ಉಪ ಪೊಲೀಸ್ ಆಯುಕ್ತ ಕೇಂದ್ರಸ್ಥಾನ ಅಪರಾಧ ಮತ್ತು ಸಂಚಾರರವರ ಮಾರ್ಗದರ್ಶನದಲ್ಲಿ ಹಾಗೂ ಸಿಸಿಬಿ ಘಟಕದ ಎಸಿಪಿ ಮಾಹಿತಿಯ ಮೇರೆಗೆ ಸಿ.ಸಿ.ಬಿ ಒ.ಸಿ.ಡಬ್ಲ್ಯೂ ಘಟಕದ ಅಧಿಕಾರಿ ಮತ್ತು ಸಿಬ್ಬಂದಿಗಳು ವಾಹನ ತಪಾಸಣೆ ನಡೆಸಿ, ಕೆಎ-31/ಎಂಬಿ-9556 ಸ್ವಿಫ್ಟ್ ಕಾರಿನಲ್ಲಿ ನಿಷೇದಿತ ಮಾದಕವಸ್ತು ಗಾಂಜಾವನ್ನು ಮಾರಾಟಕ್ಕಾಗಿ ಸಾಗಾಣಿಕೆ ಮಾಡುತಿದ್ದ ಅಮ್ಮದ್ ಪಾಷ, ಜಿಯಾ ಖಾನ್ ಜಿಯಾ, ತಿ.ಮಹಮ್ಮದ್, ಸೈಯದ್ ಬೇಗ್ ಎಂಬುವರನ್ನು ವಶಕ್ಕೆ ಪಡೆದು, 8.65,000 ರೂ. ಮೌಲ್ಯದ ನಿಷೇಧಿತ ಮಾದಕವಸ್ತು ಗಾಂಜಾ 5ಕೆ.ಜಿ 320ಗ್ರಾಂ ಹಾಗೂ ವಾಹನವನ್ನು ಜಪ್ತು ಪಡಿಸಿಕೊಂಡು ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ. ಕಾರ್ಯಾಚರಣೆಯಲ್ಲಿ ಎಸಿಪಿ ಮಹಮ್ಮದ್ ಶರೀಫ್ ರಾವುತರ್, ಪಿ.ಐ.ಶಬ್ಬಿರ್ ಹುಸೇನ್, ಪಿ.ಎಸ್.ಐ ಲೇಪಾಕ್ಷಕೆ, ಆರ್.ಜೋತ್ಸ್ನಾರಾಜ್, ರೇವಣ ಸಿದ್ದಪ್ಪ, ಆನಿಲ್, ಸಿಬ್ಬಂದಿಗಳಾದ ಸಮೀರ್, ರಾಜಾ ಸಾಬ್, ಚೇತನ್, ಆದಂ, ಮಧುಕುಮಾರ್, ಕಿರಣ್ ರಾಥೋಡ್. ಸಂತೋಷ್ ಪವಾರ್, ಯಶ್ವಂತ್, ದೇವರಾಜು, ಎನ್.ಜಿ.ಮಮತ ಸಿದ್ದರಾಜು ಹಾಗೂ ಸುರೇಶ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ಸಾ.ರಾ. ಮಾಡಿರುವ ಆರೋಪ ಸುಳ್ಳು




ಮೈಸೂರು: ಶಾಸಕ ಡಿ.ರವಿಶಂಕರ್ ವಿರುದ್ಧ ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್ ಮಾಡಿರುವ ಆರೋಪ ಸುಳ್ಳು ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಹೇಮಂತ್‌ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಶಾಸಕರು ವಿಧಾನ ಸಭೆಯಲ್ಲಿ ಅಧಿಕಾರಿಗಳು ನೀಡಿದ ಮಾಹಿತಿ ಸರಿಯಲ್ಲ ಎಂದೇ ವಾದಿಸಿದ್ದಾರೆ. ಡಿ.ರವಿಶಂಕರ್ ಸದನದಲ್ಲಿ ಆಡಿದ ಮಾತು ಸರಿ ಇದೆ. ಆದರೆ ಕೆಶಿಪ್ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ. ವಿವಿಧ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಎರಡು ಬಾರಿ ಸಭೆ ಕರೆದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಅಭಿವೃದ್ಧಿ ಕಾರ್ಯಗಳಿಗೆ ಅವರೇ ಅಡ್ಡಿಯಾಗಿದ್ದಾರೆಂದರು.


ಮತ್ತೋರ್ವ ಕಾಂಗ್ರೆಸ್ ಮುಖಂಡ ಪ್ರಭಾಕರ್ ಮಾತನಾಡಿ, ಸಾ.ರಾ. ನಂದೀಶ್ ಜಿಪಂ ಸದಸ್ಯರಾಗಿದ್ದ ವೇಳೆ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಂಡಿಲ್ಲ. ಬದಲಾಗಿ ಶಾಸಕ ಡಿ. ರವಿಶಂಕರ್ ಕೈಗೊಂಡಿರುವ ಅಭಿವೃದ್ಧಿ ಕಾರ್ಯ ಜನತೆಗೆ ತಿಳಿದಿದೆ. ಆರೋಪ ಮಾಡುವ ವೇಳೆ ತಮ್ಮ ತೆಂಗಿನ ಮರಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ನೆಲಕ್ಕುರುಳಿಸಿದ್ದಾರೆ ಎಂದು ಸಾ.ರಾ. ನಂದೀಶ್ ಆರೋಪಿಸಿದ್ದಾರೆ. ಆದರೆ, ಅವು ಅವರ ಜಮೀನಿನಲ್ಲಿ ಇರಲಿಲ್ಲ. ಬದಲಾಗಿ ರಸ್ತೆಯಲ್ಲಿ ನೆಡಲಾಗಿತ್ತು. ಹೀಗಾಗಿ ರಸ್ತೆ ಅಭಿವೃದ್ಧಿಗಾಗಿ ಕಡಿಯಲಾಗಿದೆ ಅಷ್ಟೇ ಎಂದು ಹೇಳಿದರು. ಸಾರಾ ನಂದೀಶ್ ದೇವಸ್ಥಾನದ ಜಾಗಕ್ಕೂ ಕಾಂಪೌಂಡ್ ನಿರ್ಮಿಸಿಕೊಂಡಿದ್ದಾರೆ. ಪ್ರಶ್ನಿಸಿದವರ ವಿರುದ್ಧ ರೌಡಿ ಶೀಟರ್ ತೆರೆಸುತ್ತಾರೆ. ಇವರ ಅಣ್ಣ ಸಾಲಿಗ್ರಾಮ ಹಾಗೂ ಕೆ.ಆರ್. ನಗರ ತಾಲ್ಲೂಕಿನಲ್ಲಿ ಹೆದರಿಕೆ ಹುಟ್ಟಿಸಿದ್ದಾರೆ. ಹೀಗಾಗಿ ಇವರ ವಿರುದ್ಧ ಯಾರೂ ಧ್ವನಿಯೆತ್ತುತ್ತಿಲ್ಲ ಎಂದು ಆರೋಪಿಸಿದರು. ಎಸ್.ಡಿ. ಚಂದ್ರಶೇಖರ್, ಸಂತೋಷ್ ಮೊದಲಾದವರು ಸುದ್ದಿಗೋಷ್ಠಿಯಲ್ಲಿದ್ದರು.

### 10ರ ಬಾಲಕಿ ಮೇಲೆ ವೃದ್ಧನಿಂದ ಲೈಂಗಿಕ ದೌರ್ಜನ್ಯ ಆರೋಪ

# ಆರೋಪಿ ಬಂಧನ

ಚಾಮರಾಜನಗರ, 10 ವರ್ಷ ವಯಸ್ಸಿನ ಬಾಲಕಿ ಮೇಲೆ ವೃದ್ಧನೋರ್ವ ಲೈಂಗಿಕ ದೌರ್ಜನ್ಯ ಎಸಗಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಗ್ರಾಮವೊಂದರಲ್ಲಿ ನಡೆದಿದೆ.

ಗ್ರಾಮದ ಮಹದೇವಪ್ಪ(65) ಎಂಬಾತ ಬಂಧಿತ ಆರೋಪಿ.



ಸಂತ್ರಸ್ತ ಬಾಲಕಿಗೆ ಆರೋಪಿ ಕೆನ್ನೆ ಸವರುವುದು, ಮುತ್ತು ಕೊಡುವುದು ಮಾಡುತ್ತಿದ್ದನಂತೆ. ತಾತನ ಸಮಾನವೆಂದು ಸಾಮಾನ್ಯವಾಗಿಯೇ ಪಾಲಕರು ಭಾವಿಸಿದ್ದರು. ಆದರೆ, ಭಾನುವಾರ ಮಧ್ಯಾಹ್ನ ಬಾಲಕಿಯು ಮನೆಗೆ ತೆರಳುತ್ತಿದ್ದಾಗ ವೃದ್ಧನು ಬಾಲಕಿಯ ಪಾಲಕರು ಮನೆಯಲ್ಲಿ ಇಲ್ಲದ್ದನ್ನು ಗಮನಿಸಿ ಲೈಂಗಿಕ ದೌರ್ಜನ್ಯವೆಸಗಿ, ದೇಹದ ಹಲವೆಡೆ ಪರಚಿ ಗಾಯಗೊಳಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಬಾಲಕಿ ಸಪ್ಪೆ ಮೋರೆ ಹಾಕಿಕೊಂಡಿದ್ದನ್ನು ಗಮನಿಸಿದ ಪಾಲಕರು ವಿಚಾರಿಸಿದಾಗ ವೃದ್ಧನ ಪೈಶಾಚಿಕ ಕೃತ್ಯ ಬೆಳಕಿಗೆ ಬಂದಿದೆ. ಸದ್ಯ ಬೇಗೂರು ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಬೇಗೂರು ಠಾಣೆಯಲ್ಲಿ ಪೋಕ್ಸೋ ಕೇಸ್ ದಾಖಲಾಗಿದೆ.

**ಡಾ.ಎಸ್.ಶಿವರಾಜಪ್ಪ ಹೇಳಿಕೆ**

# 22ರಂದು ಯೋಗಿನಾರೇಯಣ ಆತ್ಮಬೋಧೆ ವಿಚಾರ ಸಂಕಿರಣ

ಚಾಮರಾಜನಗರ: ಚಾಮರಾಜನಗರ ವಿಶ್ವವಿದ್ಯಾನಿಲಯ, ಶ್ರೀಯೋಗಿನಾರೇಯಣ ಯತೀಂದ್ರರ ಪ್ರಚಾರ ಸಭಾ ವತಿಯಿಂದ

ಮಾ.22 ರಂದು ನಗರದಲ್ಲಿ ಕೈವಾರ ಸದ್ಗುರು ಯೋಗಿನಾರೇ ಯಣ ಯೋಗಿಗಳ ಪರಿಚಯ ಮತ್ತು ಆತ್ಮಬೋಧೆ ಕುರಿತು ವಿಚಾರ ಸಂಕಿರಣ ಹಾಗೂ. ಯತೀಂದ್ರ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಮೈಸೂರು ವಿವಿ - ವಿಶ್ರಾಂತ ಪ್ರಾಧ್ಯಾಪಕ ಡಾ.ಎಸ್. ಶಿವರಾಜಪ್ಪ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಳಗ್ಗೆ 11.30 ಗಂಟೆಗೆ ನಗರದ ವರನಟ ಡಾ.ರಾಜಕು ಮಾರ್ ಜಿಲ್ಲಾ ರಂಗಮಂದಿರದಲ್ಲಿ ಸಮಾರಂಭ ನಡೆಯಲಿದ್ದು ಸುತ್ತೂರು ಶ್ರೀಶಿವರಾತ್ರಿದೇಶೀ ಕೇಂದ್ರಮಹಾಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಶ್ರೀಕ್ಷೇತ್ರ ಕೈವಾರ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಘನ ಉಪಸ್ಥಿತಿ ಇರಲಿದ್ದು, ಚಾ.ನಗರ ವಿವಿ ಕುಲಪತಿ ಡಾ.ಎಂ.ಆರ್.




ಗಂಗಾಧರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಾಜೀ ಮಹಾರಾಜ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಬೆಂಗಳೂರಿನ ಎಂ.ಎಸ್. ರಾಮಯ್ಯ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಹಾಗೂ ಎಂಎಲ್‌ಸಿ ಡಾ.ಎಂ. ಆರ್.ಸೀತಾರಾಮ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಬ್ಬಹಳ್ಳಿ ಶ್ರೀಮದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ. ಎಂ.ಎನ್.ಕವಿತಾ ವಿಷಯ ಮಂಡನೆ ಮಾಡಲಿದ್ದಾರೆ. ಮುಖ್ಯ ಆತಿಥಿಗಳಾಗಿ ಜಿಲ್ಲಾಧಿಕಾರಿ ಶ್ರೀರೂಪ, ಎಸ್ಪಿ ಮುತ್ತುರಾಜು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಬೆಂಗಳೂರಿನ ರೈಟ್ಸ್ ಜನರಲ್ ಮ್ಯಾನೇಜರ್ ಎಂ.ಜಿ.ಸುದೀಪ್, ಹೈಕೋರ್ಟ್ ವಕೀಲ ಬಿ.ಎಂ.ಅರುಣ್, ಮುಖ್ಯ ಇಂಜಿನಿಯರ್ ಕೆ.ಟಿ.ರವಿಕುಮಾರ್, ಹಿರಿಯ ಲೆಕ್ಕ ಪರಿಶೋಧಕ ಸುರೇಂದ್ರ ಹೆಗಡೆ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದರು. ಇದಕ್ಕೂ ಮುನ್ನ ಬೆಳಗ್ಗೆ 9.30 ರಿಂದ 10.30 ತನಕ ಶ್ರೀ ಯೋಗಿನಾರೇಯಣ ಯತೀಂದ್ರರ ಕೀರ್ತನೆಗಳು ಹಾಗೂ ಸಾಮೂಹಿಕ ನಾಮ ಸಂಕೀರ್ತನೆಯ ಕೀರ್ತನೆಗಳನ್ನು ವಾನರಾಶಿ ಬಾಲಕೃಷ್ಣ ಭಾಗವತರ್ ಹಾಡಲಿದ್ದಾರೆ. ಶ್ರೀಕ್ಷೇತ್ರ ಕೈವಾರ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಘನ ಉಪಸ್ಥಿತಿ ವಹಿಸಲಿದ್ದು ಡಾ.ಎಸ್.ಶಿವರಾಜಪ್ಪ ಪುಷ್ಪಾರ್ಚನೆ ಮಾಡಲಿದ್ದಾರೆ. ಸಮಾಜ ಸೇವಕ ಚಂದ್ರಶೇಖರ್, ನಿವೃತ್ತ ಇಂಜಿನಿಯರ್ ಎಂ.ನಾರಾಯಣ, ಹಿರಿಯ ಲೆಕ್ಕ ಪರಿಶೋಧಕ ಕೆ.ಎನ್.ಮೋಹನ್ ಕುಮಾರ್ ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಸಿ.ವಿ.ಶ್ರೀನಿವಾಸಶೆಟ್ಟಿ, ನಾಡದೇಶಶೆಟ್ಟರು ವೈ.ವಿ.ಲೋಕನಾಥ್, ದಾಸ ಬಣಜಿಗರ ಸಂಘದ ಅಧ್ಯಕ್ಷ ಚಂದ್ರಶೇಖರ್. ಉಪಾಧ್ಯಕ್ಷ ಸತೀಶ್,

ಕಾರ್ಯದರ್ಶಿ ಆರ್.ಸುಬ್ರಹ್ಮಣ್ಯ, ನಿರ್ದೇಶಕರಾದ ಪದ್ಮಪುರುಷೋತ್ತಮ, ಸಿ.ವಿ.ಶ್ರೀಧರ್, ಹಾಜರಿದ್ದರು.

## ಜಿಲ್ಲೆಯಲ್ಲಿ ಸ್ಥಗಿತಗೊಂಡಿರುವ ರೈಲ್ವೆ ಯೋಜನೆಗಳಿಗೆ ಚಾಲನೆ ನೀಡಿ

### ಲೋಕಸಭೆಯಲ್ಲಿ ಗಮನ ಸೆಳೆದ ಸುನೀಲ್ ಬೋಸ್

ಚಾಮರಾಜನಗರ. ಜಿಲ್ಲೆಯಲ್ಲಿ ಸ್ಥಗಿತಗೊಂಡಿರುವ ರೈಲ್ವೆ ಯೋಜನೆಗಳಿಗೆ ಚಾಲನೆ ನೀಡಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ರೈಲ್ವೆ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಜನಸಾಮಾನ್ಯರಿಗೆ ನ್ಯಾಯ ಒದಗಿಸಬೇಕು ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಸದಸ್ಯರಾದ ಸುನೀಲ್ ಬೋಸ್ ಅವರು ಲೋಕಸಭೆಯಲ್ಲಿ ಗಮನ ಸೆಳೆದಿದ್ದಾರೆ.



ಚಾಮರಾಜನಗರ ಜಿಲ್ಲೆಯಲ್ಲಿ ದಿನನಿತ್ಯ ನೂರಾರು ಕಾರ್ಮಿಕರು ನಗರದಿಂದ ಬೆಂಗಳೂರಿಗೆ ಕೆಲಸಕ್ಕೆ ಹೋಗುತ್ತಾರೆ.ನಗರದಿಂದ ಮೈಸೂರು, ಮೈಸೂರಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದಾರೆ.ಅವರ ಬಹುದಿನಗಳ ಬೇಡಿಕೆ ಹೆಜ್ಜಾಲ ರೈಲ್ವೆ ಮಾರ್ಗವನ್ನ ಕಲ್ಪಿಸಿಕೊಡಬೇಕು.ಇದು ದಶಕಗಳ ಬೇಡಿಕೆ ಅಂದರೂ ತಪ್ಪಾಗಲ್ಲ. ಹೆಜ್ಜಾಲದಿಂದ ನಗರಕ್ಕೆ ಸುಮಾರು 140 ಕಿಲೋ ಮೀಟರ್ ರಷ್ಟು ಇದೆ.ಆದರೆ ನಮ್ಮಲ್ಲಿ ರೈಲ್ವೆ ಮಾರ್ಗಗಳು ಕಡಿಮೆಇದೆ. ನನ್ನ ಕ್ಷೇತ್ರ ಸುಮಾರು ಶೇ.51 ಅರಣ್ಯ ವ್ಯಾಪ್ತಿಯಲ್ಲಿ ಇರುವುದರಿಂದ ರೈಲ್ವೆ ಮಾರ್ಗಗಳು ಬಹಳ ಕಡಿಮೆ ಇದೆ ಎಂದು ಲೋಕಸಭಾ ಸದಸ್ಯರು ಹೇಳಿದರು. ಹೆಜ್ಜಾಲ ರೈಲ್ವೆ ಯೋಜನೆಯನ್ನು19 96–97 ರಲ್ಲಿ ಘೋಷಣೆ ಮಾಡಿ 13–14ನೇ ಸಾಲಿನಲ್ಲಿ ಸುಮಾರು 1382 ಕೋಟಿಯನ್ನು ಯೋಜನೆಗೆ ಮೀಸಲು ಇಡಲಾಯಿತು. ಆದರೆ ಈವರೆಗೂ ಕೂಡ ಭೂಸ್ವಾಧೀನ ಪ್ರಕ್ರಿಯೆ ಸಹ ಆರಂಭವಾಗಿಲ್ಲ. ಈ ವಿಳಂಬಕ್ಕೆ ಪ್ರಮುಖ ಕಾರಣವೆಂದರೆ ಯೋಜನೆಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಶೇ. 50–50ರ ಅನುಪಾತದ ಅನುದಾನದಲ್ಲಿ ಅನುಷ್ಠಾನಗೊಳಿಸಲು ಮುಂದಾಗಿರುವುದೇ ಇದಕ್ಕೆ ಮೂಲ ಕಾರಣ ಎಂದರು. ರೈಲ್ವೆ ಇಲಾಖೆ ಸಂಪೂರ್ಣವಾಗಿ ಕೇಂದ್ರದ ಪಟ್ಟಿಯಲ್ಲಿದೆ. ಈ ಯೋಜನೆಯಿಂದ ಬರುವ ಲಾಭಾಂಶವು ಕೇಂದ್ರ ಸರ್ಕಾರಕ್ಕೆ ಸಲ್ಲುತ್ತದೆ. ಚಾಮರಾಜನಗರ ಜಿಲ್ಲೆ ಶೇ. 50ಕ್ಕೂ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿದೆ. ಇಂತಹ ಪರಿಸರ ಸೂಕ್ಷ್ಮ ಹಾಗೂ ಹಿಂದುಳಿದ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಕೇಂದ್ರ ಸರ್ಕಾರವೇ ಶೇಕಡ ನೂರರಷ್ಟು ಅನುದಾನವನ್ನು ಭರಿಸಿ ಈ ಯೋಜನೆಯನ್ನು ಆದ್ಯತೆ ಮೇಲೆ ಪೂರ್ಣಗೊಳಿಸಬೇಕೆಂದು ಸಂಸದ ಸುನೀಲ್ ಬೋಸ್ ಅವರು ಆಗ್ರಹಿಸಿದರು. ರೈಲು ಸಂಚಾರದ ವೇಳೆ ಮೈಸೂರು ಚಾಮರಾಜನಗರ ರೈಲು ಮಾರ್ಗದಲ್ಲಿ ಬರುವ ಎಲ್.ಪಿ.ಗೇಟ್ ಗಳಲ್ಲಿ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಗೇಟ್ ಗಳು ಮುಚ್ಚಿರುತ್ತದೆ. ಹೀಗಾಗಿ ತುರ್ತು ಸಂದರ್ಭದಲ್ಲಿ ಆಂಬುಲೆನ್ಸ್ ಸಂಚಾರಕ್ಕೆ ತೀವ್ರ ಅಡಚಣೆಯಾಗಿ ಪ್ರಾಣಕ್ಕೆ ತೊಂದರೆ ಸಂಭವಿಸುತ್ತಿರುವ ಘಟನೆಗಳು ಕೂಡ ವರದಿಯಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಪಣ್ಯದ ಹುಂಡಿ ಎಲ್ ಸಿ ಗೇಟ್ 47, ಚಿನ್ನದಗುಡಿ ಹುಂಡಿ ಎಲ್ ಸಿ ಗೇಟ್ 27 ಮತ್ತು ನಂಜನಗೂಡು ಪಟ್ಟಣದ ಎಲ್ ಸಿ 20 ಗೇಟ್ ಗೆ ರೈಲ್ವೆ ಮೇಲ್ಸೇತುವೆ ಮಂಜೂರು ಮಾಡಲಾಗಿದೆ.ಇದಕ್ಕಾಗಿ ಡಿಪಿಆರ್ ಸಿದ್ಧವಾಗಿ ಅನುದಾನ ಮಂಜೂರಾಗಿ ವರ್ಷಗಳ ಕಳೆದಿದ್ದರೂ ಕೂಡ ಕಾಮಗಾರಿ ಮಾತ್ರ ಇನ್ನು ಆರಂಭವಾಗಿಲ್ಲ. ಕೇಂದ್ರದ ರಾಜ್ಯ ಸಚಿವರು ಮತ್ತು ನಾವು ಖುದ್ದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅಧಿಕಾರಿಗಳ ಜೊತೆ ಹಲವು ಬಾರಿ ಚರ್ಚೆಯನ್ನು ಮಾಡಲಾಗಿದ್ದರೂ ಕಾಮಗಾರಿ ಆರಂಭ ಮಾಡಿಲ್ಲ ಎಂದರು.

**ಮೈಸೂರು ವಿಶ್ವವಿದ್ಯಾನಿಲಯ**
**Estd. 1916**
**Ph: 2414383/241934 2419245**
**ಮೈಸೂರು ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗ**
**ಮಾನಸಗಂಗೋತ್ರಿ, ಮೈಸೂರು – 06**
**ಸಂಖ್ಯೆ: ಯು.ಇ.ಡಿ/ಡಿ.ಬಿ–1/1403/2025–26 ದಿನಾಂಕ: 13.03.2026**

**ಅಲ್ಪಾವಧಿ ಟೆಂಡರ್ ಪ್ರಕಟಣೆ**

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಟೆಂಡರ್ ಪ್ರಕಟಣೆ ಸಂಖ್ಯೆ : **UOM/2025-26/EL/WORK_INDENT 10, ದಿನಾಂಕ:13.03.2026**
**Website: https://kppp.karnataka.gov.in**

ಸಹಾಯಕ ಕಾರ್ಯಪಾಲಕ ಅಭಿಯಂತರರು (ಸ್ವ/ಪ್ರ), ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿಯಮಾನುಸಾರ ಒಂದು ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮಗಳ 2000ರಂತೆ ಹಾಗೂ ಅರ್ಹ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ **KW-1**ರ ನಿಯಮಗಳನ್ವಯ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಅರ್ಹ ದರ್ಜೆ ನೊಂದಾಯಿತ **ವಿದ್ಯುತ್** ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿರುತ್ತಾರೆ. ಟೆಂಡರ್ ಸಲ್ಲಿಸಲು ಕೊನೆಯ **ದಿ: 25.03.2026**ರ ಸಂಜೆ 4,00 ಗಂಟೆಯವರೆಗೆ, ನಿಗಧಿಪಡಿಸಿದ ಇ.ಎಂ.ಡಿ.ಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ. ಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದವರೆಗೆ ಮಾನ್ಯತೆ ಇರತಕ್ಕದ್ದು.

**ಕ್ರಮ ಸಂಖ್ಯೆ:** 1 **ಕಾಮಗಾರಿಯ ಹೆಸರು: Providing & laying UG. Cable from Engineering College HT Transformers to Pharmacy College & Engineering Boys Hostel buildings at Manasagangotri, Mysuru ಅಂದಾಜು ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ): 6.93 ಇ.ಎಂ.ಡಿ. ರೂ.ಗಳಲ್ಲಿ: 17500/– ಕಾಲಾವಧಿ: 02 months**

**ಸೂಚನೆ: 1)** ಈ ಮೇಲ್ಕಂಡ ಕಾಮಗಾರಿಗೆ ಮುಂದೆ ನಮೂದಿಸಿದ ಟೆಂಡರ್‌ಗಿಟ್ಟ ಅಂದಾಜು ಮೊತ್ತ ಹಾಗೂ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತ ಮತ್ತು ಇ.ಎಂ.ಡಿ. ಮೊತ್ತವು ಅಂತಿಮವಾಗಿರುತ್ತದೆ. **2)** ಈ ಕಾಮಗಾರಿಗೆ ಭಾಗವಹಿಸುವ ಗುತ್ತಿಗೆದಾರರು ಇ.ಎಂ.ಡಿ. ಹಣವನ್ನು ಇ–ಪ್ರಕ್ಯೂರ್‌ಮೆಂಟ್‌ನಡಿ ನಮೂದಿಸಿದ ಯಾವುದಾದರೂ ಒಂದು ವಿಧದಲ್ಲಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಸಲ್ಲಿಸಬೇಕಾಗಿರುತ್ತದೆ.

ಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ದೂರವಾಣಿ ಸಂಖ್ಯೆ **9845384894**ರಲ್ಲಿ ಪಡೆಯ ಬಹುದಾಗಿದೆ ಅಥವಾ ಈ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

**ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು (ಸ್ವ/ಪ್ರ)**
DIPR/DDMYS/1833/KSMCA/1035/2025-26

## ಶ್ರೀರಾಮ ಗೆಳೆಯರಿಂದ ಅಪ್ಪು ಸ್ಮರಣೆ



ಮೈಸೂರು: ಕನ್ನಡ ಚಿತ್ರರಂಗದ ಧ್ರುವತಾರೆ, ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಜನ್ಮದಿನೋತ್ಸವದ ಅಂಗವಾಗಿ ನಗರದ ಚಾಮುಂಡಿಪುರಂ ವೃತ್ತದಲ್ಲಿ ಶ್ರೀರಾಮ ಗೆಳೆಯರ ಬಳಗದವತಿಯಿಂದ ಸಾರ್ವಜನಿಕರಿಗೆ ಮಜ್ಜಿಗೆ ಮತ್ತು ಸಿಹಿಯನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, "ಪುನೀತ್ ರಾಜಕುಮಾರ್ ಕೇವಲ ನಟರಾಗಿರಲಿಲ್ಲ. ಕೋಟ್ಯಂತರ ಕನ್ನಡಿಗರ ಪಾಲಿನ ಶಕ್ತಿಯಾಗಿದ್ದರು. ಅವರ ಸರಳತೆ ಮತ್ತು ಸಮಾಜಮುಖಿ ಚಿಂತನೆಗಳು ಇಂದಿನ ಯುವ ಪೀಳಿಗೆಗೆ ಮಾದರಿ ಎಂದು ಶ್ಲಾಘಿಸಿದರು.

ಶ್ರೀರಾಮ ಗೆಳೆಯರ ಬಳಗದ ಅಧ್ಯಕ್ಷ ಸಿ.ಸಂದೀಪ್ ಮಾತನಾಡಿ, ಪುನೀತ್ ರಾಜಕುಮಾರ್ ಮಾಡಿರುವ ಸೇವಾ ಕಾರ್ಯಗಳು ಪ್ರತಿಯೊಬ್ಬರಿಗೂ ಪ್ರೇರಣೆಯಾಗಿವೆ. ಅವರ ಜನ್ಮದಿನವನ್ನು ಕೇವಲ ಸಂಭ್ರಮಕ್ಕೆ ಸೀಮಿತಗೊಳಿಸದೆ, 'ಸ್ಪೂರ್ತಿದಿನ'ವಾಗಿ ಆಚರಿಸಲಾಗುತ್ತಿದೆ. ಜನಸಾಮಾನ್ಯರು ಅವರ ಹಾದಿಯಲ್ಲಿ ನಡೆದು ಆರೋಗ್ಯ ಶಿಬಿರ, ರಕ್ತದಾನ, ನೇತ್ರದಾನ, ಸಾಮೂಹಿಕ ವಿವಾಹ ಹಾಗೂ ಅನ್ನದಾಸೋಹದಂತಹ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಪರಿಸರ ಕಾಳಜಿ ಮತ್ತು ಕನ್ನಡ ಭಾಷೆಗಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯ ಎಂದರು. ಕೆ.ಆರ್.ಬ್ಯಾಂಕ್ ನ ಬಸಪ್ಪ, ಅಪೂರ್ವ ಸುರೇಶ್, ರಾಜಣ್ಣ, ಜೋಗಿ ಮಂಜು, ವಿಕ್ರಂ, ಅಂಬಳೆ ಶಿವಣ್ಣ, ಬಸವರಾಜು ಪುರುಷೋತ್ತಮ್, ರಾಜೇಂದ್ರ , ಪ್ರಭುಶಂಕರ್, ಗುರುಸ್ವಾಮಿ, ಪ್ರಕಾಶ್ , ಮೋಹನ್, ಗೋಪಾಲ್ ಅರಸ್, ನಾಗೇಂದ್ರ, ಚಂದ್ರಶೇಖರ್, ಭಾನು ಕುಮಾರ್, ವಿನಯ್, ಪವನ್, ಧನುಷ್, ಚೇತನ್, ಹಾಜರಿದ್ದರು.

## ಲಿಂಗ ತಾರತಮ್ಯ ಬೇಡ, ಸಮಾನತೆ ಇರಲಿ




ಚಾಮರಾಜನಗರ, ತಾಲೂಕಿನ ಭೋಗಾಪುರ ವಸತಿಯುಕ್ತ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಲಿಂಗಸಮನ್ವಯತಾ ಮೇಳ ಗಮನ ಸೆಳೆಯಿತು.

ಕಾಲೇಜಿನಲ್ಲಿ ಕಾಲೇಜು ಮತ್ತು ಕಾಲೇಜು ಮತ್ತು ಸಾವಿತ್ರಿಬಾಯಿಪುಲೆ ತಂಡದವರ ನೇತೃತ್ವದಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಅಯೋಜಿಸಿದ ಲಿಂಗಸಮನ್ವ ಯತಾ ಮೇಳದಲ್ಲಿ ಲಿಂಗತಾರತಮ್ಯ ಕುರಿತು ವಿಡಿಯೋ ಚಿತ್ರೀಕರಣ, ಪೋಸ್ಟರ್ ಪ್ರದರ್ಶನ ಮೂಲಕ ಅರಿವು ಮೂಡಿಸಲಾಯಿತು.

> ▶▶ **ಎನ್ ಸೌಮ್ಯ ಹೇಳಿಕೆ**
> ▶▶ **ಭೋಗಾಪುರ ವಸತಿಯುಕ್ತ ಸರ್ಕಾರಿ ಪ್ರಥಮ ಕಾಲೇಜಿನಲ್ಲಿ ಲಿಂಗಸಮನ್ವಯತಾ ಮೇಳ**

ಅಜೀಂಪ್ರೇಮ್ ಜಿ ಪ್ರತಿಷ್ಠಾನ ಜಿಲ್ಲಾ ಸಂಯೋಜಕಿ ಎನ್.ಸೌಮ್ಯ ಚಾಲನೆ ನೀಡಿ ಮಾತನಾಡಿ, ಪ್ರತಿಯೊಬ್ಬರೂ ಹೆಣ್ಣು ಮತ್ತು ಗಂಡು ಮಗುವನ್ನು ಸಮಾನವಾಗಿ ಕಂಡಲ್ಲಿ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದರು. ಯಳಂದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಉಪನ್ಯಾಸ ಶ್ವೇತ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ಪಿ.ದೇವರಾಜು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಿಡಿಒ ಮಾನಸ, ಉಪನ್ಯಾಸಕರಾದ ನಂಜುಂಡಯ್ಯ, ಡಾ.ರಮೇಶ್ ಬಾಬು, ರಂಗಸ್ವಾಮಿ, ಯಶೋಧದೇವಿ, ಭಾಗ್ಯ, ನೇತ್ರಾವತಿ, ಪೂರ್ಣಿಕ, ಕುಸುಮ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಕಾರ್ಯಾಗಾರಗಳ ಮೂಲಕ ಜಾಗೃತಿ

## ಪ.ಜಾತಿ, ಪಂಗಡಗಳ ದೌರ್ಜನ್ಯ ಪ್ರತಿಬಂಧ ಕಾಯ್ದೆ ಜಾಗೃತಿ: ಸರ್ಪಭೂಷಣ ಸ್ವಾಮೀಜಿ

ಚಾಮರಾಜನಗರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರತಿಬಂಧ ಅಧಿನಿಯಮ ಮತ್ತು ನಾಗರಿಕ ಹಕ್ಕು ಸಂರಕ್ಷಣಾ ಅಧಿನಿಯಮ ಕುರಿತು ಗ್ರಾಮಪಂಚಾಯಿತಿಗಳ ಮಟ್ಟದಲ್ಲಿ ಹೆಚ್ಚು ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಮೂಲಕ ವಿಶೇಷವಾಗಿ ಸ್ಥಳೀಯ ಜನರಿಗೆ ಅರಿವು ಮೂಡಿಸಬಹುದು ಎಂದು ಹರವೆ ವಿರಕ್ತಮಠದ ಪೀಠಾಧ್ಯಕ್ಷರಾದ ಸರ್ಪಭೂಷಣ ಸ್ವಾಮಿಯವರು ತಿಳಿಸಿದರು.

ತಾಲೂಕಿನ ಹರವೆ ಗ್ರಾಮದ ಮೊರಾರ್ಜಿ ದೇಸಾಯಿ ವಸತಿಶಾಲೆ ಆವರಣದಲ್ಲಿಂದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ 1989 ಮತ್ತು ತಿದ್ದುಪಡಿ ಅಧಿನಿಯಮಗಳು ಹಾಗೂ ನಾಗರಿಕ ಹಕ್ಕು ಸಂರಕ್ಷಣಾ ಅಧಿನಿಯಮ ಕುರಿತ ಹೋಬಳಿ ಮಟ್ಟದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾಯ್ದೆಗಳ ಬಗ್ಗೆ ತಿಳಿದುಕೊಂಡರೆ ಯಾವುದೇ ತಪ್ಪು ಎಸಗುವ ಮುನ್ನ ಯಾವ ತೊಂದರೆ ಉಂಟಾಗಲಿದೆ ಎಂಬುದು ಅರಿವಾಗಲಿದೆ. ಹೀಗಾಗಿ ಕಾನೂನು ಬಗ್ಗೆ ಪ್ರತಿಯೊಬ್ಬರಿಗೂ ಮನವರಿಕೆ ಮಾಡಿಕೊಡುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಂಡು ಜಾಗೃತಿ ಮೂಡಿಸಲಾಗುತ್ತಿದೆ. ಇದರಿಂದ ಗ್ರಾಮೀಣ ಭಾಗದ ಜನರಿಗೆ ದೌರ್ಜನ್ಯ ಪ್ರತಿಬಂಧ ಕಾಯ್ದೆಗಳ ಬಗ್ಗೆ ತಿಳಿವಳಿಕೆ ಉಂಟಾಗಲಿದೆ ಎಂದರು.



### ದೌರ್ಜನ್ಯ ದಬ್ಬಾಳಿಕೆ ತಡೆಯಲು ಕಾನೂನು

ದೊಡ್ಡ ಪ್ರಜಾತಂತ್ರ ರಾಷ್ಟ್ರವಾಗಿರುವ ಭಾರತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನ ಚೌಕಟ್ಟಿನಲ್ಲಿ ಎಲ್ಲರೂ ಇದ್ದೇವೆ. ಕಾನೂನಿನ ಮುಂದೆ ಯಾರು ದೊಡ್ಡವರಲ್ಲ. ಕಾನೂನಿನ ಮುಂದೆ ಎಲ್ಲರು ಸರಿಸಮಾನರು. ಎಲ್ಲರಿಗೂ ಸರಿಸಮಾನವಾದ ಹಕ್ಕುಗಳನ್ನು ಸಂವಿಧಾನ ನೀಡಿದೆ. ಬುದ್ಧ, ಬಸವ, ಅಂಬೇಡ್ಕರ್ ಅವರು ಸಮಾನತೆಯನ್ನು ಪ್ರತಿಪಾದಿಸಿದವರು. ಶೋಷಿತರನ್ನು ಸಮಾನತೆ ದೃಷ್ಟಿಯಿಂದ ನಡೆಸಿಕೊಳ್ಳಬೇಕೆಂಬುದು ಸಂವಿಧಾನದ ಮುಖ್ಯ ಆಶಯವಾಗಿದೆ ಎಂದು ಸರ್ಪಭೂಷಣ ಸ್ವಾಮೀಜಿ ಅವರು ತಿಳಿಸಿದರು.

ಪರಿಶಿಷ್ಟರ ಮೇಲಿನ ದೌರ್ಜನ್ಯ ದಬ್ಬಾಳಿಕೆ ತಡೆಯಲು ಕಾನೂನು ಜಾರಿಗೆ ಬಂದಿದೆ. ಪೊಲೀಸ್ ಇಲಾಖೆಯಿಂದ ರಕ್ಷಣೆ ಸಿಗದೇ ಇದ್ದಲ್ಲಿ ನೇರವಾಗಿ ನ್ಯಾಯಾಲಯಕ್ಕೆ ಮೊರೆ ಹೋಗಬಹುದು. ಪ್ರಕರಣ ದಾಖಲು ಮಾಡಬಹುದು. ಈ ಬಗ್ಗೆ ಅರಿವು ಮೂಡಿಸಲು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರತಿವರ್ಷ ವಿಚಾರ ಸಂಕಿರಣ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಗ್ರಾಮಪಂಚಾಯಿತಿ ಮಟ್ಟದ ಜನಪ್ರತಿನಿಧಿಗಳಿಗೆ ಕಾನೂನು ಅರಿವು ಮೂಡಿಸುವುದು ಬಹಳ ಮುಖ್ಯವಾಗಿದೆ ಎಂದು ಹೇಳಿದರು.

> **ಪ್ರತಿಯೊಬ್ಬ ಪ್ರಜೆಯು ಅಭಿವೃದ್ಧಿ ಹೊಂದಬೇಕು. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣ ಕವಾಗಿ ಪ್ರಗತಿಯಾಗಬೇಕು ಎಂಬುದು ಸಂವಿಧಾನದ ಮೂಲ ಆಶಯವಾಗಿದೆ. ಹಿಂದುಳಿದ, ಶೋಷಿತ ಸಮುದಾಯಗಳಿಗೆ ರಕ್ಷಣೆ ಕೊಡುವ ಸಲುವಾಗಿಯೇ ಕೆಲವು ವಿಶೇಷವಾಗಿ ಕಾನೂನುಗಳನ್ನು ತರಲಾಯಿತು. ದೇಶದ ಹಿತದೃಷ್ಟಿಯಿಂದ ಬಾಬಾ ಸಾಹೇಬರು ಸಂವಿಧಾನವನ್ನು ಜಾರಿ ಮಾಡಿದರು.**
> ▶▶ **ಸಿ.ಎಂ ಕೃಷ್ಣಮೂರ್ತಿ**
> ಪ್ರಜಾ ಪರಿವರ್ತನಾ ವೇದಿಕೆಯ ಜಿಲ್ಲಾಧ್ಯಕ್ಷ

ಜಿಲ್ಲಾ ಪಂಚಾಯತ್ ನ ಮಾಜಿ ಸದಸ್ಯರಾದ ಕೆರೆಹಳ್ಳಿ ನವೀನ್, ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ.ನಾಗೇಶ್ ಅವರು ಕಾರ್ಯಾಗಾರದಲ್ಲಿ ಮಾತನಾಡಿದರು. ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಎಂ.ಕೆ. ಮೇಘ ಅಧ್ಯಕ್ಷತೆ ವಹಿಸಿದ್ದರು. ಪ್ರಜಾ ಪರಿವರ್ತನಾ ವೇದಿಕೆಯ ತಾಲೂಕು ಸಂಯೋಜಕರಾದ ಎಂ. ಪುರುಷೋತ್ತಮ್ ಮುಕ್ಕಡಹಳ್ಳಿ, ತಾಲೂಕು ಪಂಚಾಯತ್‌ನ ಮಾಜಿ ಸದಸ್ಯರದ ಎಂ.ಸಿ. ರವಿಕುಮಾರ್, ನಿಸರ್ಗ ನಾಗರಾಜು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಮಹಿಳೆಯರ ಸಮಾನತೆ ಸಂವಿಧಾನ ಎತ್ತಿಹಿಡಿದಿದೆ

ವಿಚಾರ ಮಂಡನೆ ಮಾಡಿದ ಪ್ರಗತಿಪರ ಚಿಂತಕ ಅರಕಲವಾಡಿ ನಾಗೇಂದ್ರ ಮಾತನಾಡಿ ಗ್ರಾಮ ಪಂಚಾಯಿತಿಯ ಸದಸ್ಯರಿಂದ ಹಿಡಿದು ಎಲ್ಲ ಹಂತದ ಜನಪ್ರತಿನಿಧಿಗಳು ಸೇರಿ ಕಾನೂನು ರಕ್ಷಣೆ ಮಾಡಿದರೆ ಮಾತ್ರ ಕಾನೂನು ಉಳಿಯು ತ್ತದೆ. ದೌರ್ಜನ್ಯಕ್ಕೆ ಒಳಗಾದವರನ್ನು ಮೇಲೆತ್ತಲು ಶಿಕ್ಷಣ ಆರೋಗ್ಯದಂತಹ ಎಲ್ಲ ಸೌಲಭ್ಯಗಳು ಸಮರ್ಪಕವಾಗಿ ಸಿಗಬೇಕು. ಅವರೂ ಸಹ ಇತರರಂತೆ ಅಭಿವೃದ್ದಿಯ ಬದುಕು ಹೊಂದ ಬೇಕು. ಮಹಿಳೆಯರು ಮನೆ ಬಿಟ್ಟು ಹೊರ ಬಂದು ಸ್ವಾವಲಂಬಿ ಜೀವನ ನಡೆಸಲು ಮಹಿ ಳೆಯರ ಮೇಲಿನ ದೌರ್ಜನ್ಯ ತಪ್ಪಿಸಲು ಕಾನೂ ನುಗಳನ್ನು ಜಾರಿಗೆ ತರಲಾಗಿದೆ. ಮಹಿಳೆಯರ ಸಮಾನತೆಯನ್ನು ಸಂವಿಧಾನ ಎತ್ತಿಹಿಡಿದಿದೆ ಎಂದರು. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದಲ್ಲಿ ಎಲ್ಲರಿಗೂ ಒಂದೇ ಕಾನೂನು ಇದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ 1989ರ ಈ ಕಾನೂನು ಬಹಳ ಕಠಿಣವಾಗಿದ್ದು, ಪರಿಶಿಷ್ಟರನ್ನು ಯಾವುದೇ ತಾರತಮ್ಯದಿಂದ ನೋಡುವಂತಿಲ್ಲ. ಪರಿಶಿಷ್ಟರ ಮೇಲೆ ದೌರ್ಜನ್ಯ ಎಸಗುವವರು, ಹೀಯಾಳಿಸುವವರಿಗೆ 10 ವರ್ಷ ಶಿಕ್ಷೆ ವಿಧಿಸಲು ಅವಕಾಶವಿದೆ. ಕ್ರೂರವಾಗಿ ದೌರ್ಜನ್ಯ ಮಾಡುವವರಿಗೆ ಮತ್ತಷ್ಟು ಕಠಿಣ ಶಿಕ್ಷೆ ನೀಡಲಾಗುತ್ತದೆ ಎಂದು ತಿಳಿಸಿದರು.

## "0" ದಿನಾಂಕ ಎಂಬುದಿದೆಯೇ?

ರಾಮನಗರ: "0" (ಶೂನ್ಯ) ದಿನಾಂಕ ಎಂಬುದಿದೆಯೇ? ಹಾಗಂತ ರಾಮನಗರದ ಕೆಲವರಲ್ಲಿ ಪ್ರಶ್ನೆ ಕಾಡುತ್ತಿದೆ.




ಇತ್ತೀಚೆಗೆ ಸಂಚಾರ ವಿಭಾಗದ ಪೊಲೀಸರು ನಗರದ ಪ್ರಮುಖ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ಸ್ಥಳ ಗುರುತಿಸಿ, ದಿನಾಂಕಗಳನ್ನು ನಿಗಧಿಪಡಿಸಿದ್ದಾರೆ. ಎಂ.ಜಿ.ರಸ್ತೆ, ಛತ್ರದ ಬೀದಿ ಹೀಗೆ ನಗರದ ಪ್ರಮುಖ ವ್ಯಾಪಾರ ಸ್ಥಳಗಳಲ್ಲಿ ವಾಹನ ಮತ್ತು ಜನದಟ್ಟಣೆ ಹೆಚ್ಚು. ವಾಹನ ಸಂಚಾರಕ್ಕೆ ಅಡಚಣೆಯಾಗಬಾರದು ಎಂಬ ಸದುದ್ದೇಶದಿಂದ ವಾಹನ ನಿಲುಗಡೆಗೆ ಅವಕಾಶ ಸೂಚಿಸುವ ಹೊಸ ಫಲಕಗಳನ್ನು ಅಳವಡಿಸಿದ್ದಾರೆ. ರಸ್ತೆಯ ಒಂದು ಬದಿಯಲ್ಲಿ ಸಮ ಸಂಖ್ಯೆಯ ದಿನಗಳಲ್ಲಿ ಮತ್ತೊಂದು ಬದಿಯಲ್ಲಿ ಬೆಸ ಸಂಖ್ಯೆಯ ದಿನಗಳಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಿದ್ದಾರೆ. ಪೊಲೀಸರ ಈ ಕ್ರಮವನ್ನು ಸಾರ್ವಜನಿಕರು ಸ್ವಾಗತಿಸಿದ್ದಾರೆ. ಆದರೆ ಸಮ ಸಂಖ್ಯೆ ದಿನಾಂಕಗಳ ಫಲಕದಲ್ಲಿ 0 – 2– 4– 8... ಎಂದು ನಮೂದಿಸಲಾಗಿದೆ. 2, 4, 8 ಎಲ್ಲ ಸಮಸಂಖ್ಯೆಯ ದಿನಾಂಕಗಳು, ಆದರೆ "0" ದಿನಾಂಕ ಯಾವ ಮಾಸದಲ್ಲಿ ಬರುತ್ತದೆ? ಎಂದು ಕೆಲವರು ಕುಚೋದ್ಯದ ಮಾತುಗಳನ್ನಾಡಿದ್ದಾರೆ.

## ಬಡಜನರಿಗೆ ರಂಜಾನ್ ಕಿಟ್ ವಿತರಣೆ



ಮೈಸೂರು: ನರಸಿಂಹರಾಜ ವಿಧಾನ ಸಭಾ ಕ್ಷೇತ್ರದ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್ ಮಂಗಳವಾರ ನಗರದ ಸೆಕೆಂಡ್ ಈದ್ಗಾ ಬಡಾವಣೆಯ ಸಿವಿ ರಸ್ತೆಯಲ್ಲಿರುವ ತಮ್ಮ ನಿವಾಸದ ಎದುರು ಸುಮಾರು 500ಕ್ಕೂ ಹೆಚ್ಚು ಬಡಜನರಿಗೆ ವಿವಿಧ ದಿನಸಿ ಪದಾರ್ಥಗಳುಳ್ಳ ರಂಜಾನ್ ಕಿಟ್ ವಿತರಣೆ ಮಾಡಿದರು.

ಈ ಸಂದರ್ಭದಲ್ಲಿ ಪ್ರಾರ್ಥನೆ ಸಲ್ಲಿಸಿದ ಧರ್ಮಗುರು ಸಾದಿಖ್ ಹಜರತ್ ಮಾತನಾಡಿ, ಯಾವುದೇ ರೀತಿಯ ಪಾಪ ಕೃತ್ಯಗಳಿಂದ ದೂರವಿರಬೇಕು ಎಂಬ ಕಟ್ಟುನಿಟ್ಟಿನ ನಿಯಮವಿದೆ. ಕಣ್ಣು, ಕಿವಿ, ನಾಲಿಗೆ ಮತ್ತು ಮನಸ್ಸಿನ ಮೇಲಿನ ನಿಯಂತ್ರಣವೇ ನಿಜವಾದ ಉಪವಾಸ. ಇದು ಮನುಷ್ಯನಿಗೆ ಒಂದು ತಿಂಗಳ ಕಾಲ ಕಠಿಣ ಶಿಸ್ತಿನ ತರಬೇತಿಯನ್ನು ನೀಡುತ್ತದೆ. ಇಂತಹ ಪವಿತ್ರ ಮಾಸದಲ್ಲಿ ಸೈಯದ್ ಎಕ್ಬಾಲ್ ಬಡವರಿಗೆ ರಂಜಾನ್ ಕಿಟ್ ವಿತರಣೆ ಮಾಡುವ ಮೂಲಕ ಅವರಲ್ಲಿ ಚೈತನ್ಯ ತುಂಬಿದ್ದಾರೆ. ಇಂತಹವರು ಇತರರಿಗೆ ಮಾದರಿಯಾಗಬೇಕು ಎಂದರು.

ಸೈಯದ್ ಎಕ್ಬಾಲ್ ಮಾತನಾಡಿ, ಮಾಜಿ ಸಚಿವರು, ಕೆಪಿಸಿಸಿ ಕಾರ್ಯಾಧ್ಯಕ್ಷರೂ ಮತ್ತು ಎನ್‌ಆರ್ ಕ್ಷೇತ್ರದ ಶಾಸಕರಾದ ತನ್ವೀರ್ ಸೇಠ್ ಅವರ ಮಾರ್ಗದರ್ಶನದಲ್ಲಿ ನಾನು ಕಳೆದ ಹಲವು ವರ್ಷಗಳಿಂದ ಪವಿತ್ರ ರಂಜಾನ್ ತಿಂಗಳಲ್ಲಿ ನಮ್ಮ ಬಡಾವಣೆಯ ಬಡಜನರನ್ನು ಗುರುತಿಸಿ ರಂಜಾನ್ ಮಾಸದಲ್ಲಿ ನನ್ನ ಕೈಲಾದಷ್ಟು ಸಹಾಯ ಮಾಡುತ್ತಾ ಬಂದಿದ್ದೇನೆ. 50 ಆಹಾರ ಕಿಟ್‌ಗಳಿಂದ ಪ್ರಾರಂಭವಾದ ಸಹಾಯ ಇದೀಗ 500 ಕಿಟ್ ವರೆಗೂ ತಲುಪಿದೆ, ಮುಂದಿನ ವರ್ಷ ಇನ್ನೂ ಹೆಚ್ಚಿನ ಸಹಾಯ ಮಾಡುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸಂಯೋಜಕ ಶೌಕತ್ ಅಲಿ ಖಾನ್, ಮೌಲಾನ ಅಸ್ಲಂ ಹಜರತ್, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷರಾದ ಷಹೇನ್ ಷಾ ಅಹಮದ್, ಕಾಂಗ್ರೆಸ್ ಮುಖಂಡರಾದ ಅಫ್ರೋಜ್ ಖಾನ್, ಮುನ್ನ ಮುಂತಾದವರು ಇದ್ದರು.

## ಸಿಲಿಂಡರ್ ಪಡೆಯಲು ಒಟಿಪಿ ಕಡ್ಡಾಯ



ಮೈಸೂರು: ಇರಾನ್–ಇಸ್ರೇಲ್ ಯುದ್ಧದ ಕಾರಣ ಅಡುಗೆ ಅನಿಲ ಸರಬರಾಜಿನಲ್ಲಿ ಕೆಲವೊಂದು ವ್ಯತ್ಯಯವುಂಟಾಗಿದೆ. ಆದರೆ, ಗೃಹ ಬಳಕೆದಾರರಿಗೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗಿದೆ. ಸಿಲಿಂಡರ್ ಪಡೆಯಲು ಒಟಿಪಿ ಕಡ್ಡಾಯವಾಗಿರುತ್ತದೆ. ಮೂರು ಪ್ರಮುಖ ಅಡುಗೆ ಅನಿಲ ಸರಬರಾಜು ಕಂಪನಿಗಳ ಬುಕಿಂಗ್, ವಾಟ್ಸಪ್ ಸಂಖ್ಯೆ ಬದಲಾಗಿದ್ದು, ಇದರಿಂದಾಗಿ ಸೇವೆ ಮೊದಲಿಗಿಂತ ಸಮರ್ಪಕವಾಗಿ ದೊರೆಯುತ್ತಿದೆ ಎಂದು ಎಲ್‌ಪಿಜಿ ವಿತರಕರ ಸಂಘದ ಅಧ್ಯಕ್ಷ ಮೆಹುಲ್ ಪಟೇಲ್ ಮಾಹಿತಿ ನೀಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಾಣಿಜ್ಯ ಸಿಲಿಂಡರ್ ಪೂರೈಕೆಗೆ ಅಡ್ಡಿ ಎದುರಾಗಿರಬಹುದಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಂಡಿವೆ. ಅಡುಗೆ ಅನಿಲ ಹೊತ್ತ ಮೂರು ಹಡಗುಗಳು ಈಗಾಗಲೇ ದೇಶದ ಬಂದರು ತಲುಪಿದ್ದು, ಸಂಸ್ಕರಿಸಿ ಸರಬರಾಜು ಮಾಡಲು ಎರಡು ಮೂರು ದಿನ ಬೇಕಾಗುತ್ತದೆ. ಹೀಗಾಗಿ ಸಮಸ್ಯೆ ಶೀಘ್ರದಲ್ಲೇ ಬಗೆಹರಿಯಲಿದೆ. ಇದೇ ವೇಳೆ ಗೃಹ ಬಳಕೆದಾರರು ಒಂದು ಸಿಲಿಂಡರ್‌ನವರಾಗಿದ್ದರೆ 25ದಿನ ಅಂತರದಲ್ಲಿ, ಎರಡು ಸಿಲಿಂಡರ್‌ನವರಾಗಿದ್ದರೆ 30 ದಿನ ಅಂತರದಲ್ಲಿ ಬುಕ್ ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ಈ ಅವಧಿ 40 ದಿನಗಳಾಗಿವೆ. ಅಂಗನವಾಡಿ, ಕೈಗಾರಿಕೆಗಳು ಮೊದಲಾದ ಆದ್ಯತಾ ವಲಯಗಳಿಗೆ ಈಗ ಸಿಲಿಂಡರ್ ಪೂರೈಕೆ ಯಾವುದೇ ವ್ಯತ್ಯಯವಿಲ್ಲದೇ ನಡೆದಿದೆ. ಆದರೆ, ಹೋಟೆಲ್ ಮೊದಲಾದವುಗಳಿಗೆ ಶೇ.20ರಷ್ಟು ವ್ಯತ್ಯಯ ಉಂಟಾಗಿದ್ದು, ಯುಗಾದಿ ಬಳಿಕ ಸಹಜ ಸ್ಥಿತಿಗೆ ಬರಲಿದೆ ಎಂದರು. ಭಾರತ್ ಗ್ಯಾಸ್ ಗ್ರಾಹಕರು ವಾಟ್ಸಪ್ ಮೊ.1800224344, ಐವಿಆರ್‌ಎಸ್ 7715012345 ಆಗಿದೆ. ಇಂಡೇನ್‌ಗೆ ವಾಟ್ಸಪ್ ಮೊ.75888 88824, ಐವಿಆರ್‌ಎಸ್ ಮೊ.77189 55555, ಎಚ್‌ಪಿ ಗ್ಯಾಸ್‌ಗೆ ವಾಟ್ಸಪ್ ಮೊ.92222 01122, ಐವಿಆರ್‌ಎಸ್ ಮೊ.88888 23456ಕ್ಕೆ ಬದಲಾಗಿದೆ ಎಂದರು. ಮಾಜಿ ಶಾಸಕ ನಂಜುಂಡಸ್ವಾಮಿ, ವಿತರಕ ರಂಗ ಇದ್ದರು.

### ಅಚ್ಚಲು ಗ್ರಾಮದ ಸರ್ಕಾರಿ ಶಾಲೆಗೆ ಕೊಡುಗೆ

## ಕರವೇ ಬಣದಿಂದ ಡೆಸ್ಕ್‌ಗಳ ಕೊಡುಗೆ



ರಾಮನಗರ: ಕನ್ನಡ ಶಾಲೆ ಉಳಿಸಿ ಬೆಳೆಸಿ ಅಭಿಯಾನ ಹಮ್ಮಿಕೊಂಡಿರುವ ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣದ ಜಿಲ್ಲಾ ಘಟಕ ಅಚ್ಚಲು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಡೆಸ್ಕ್‌ಗಳು ಹಾಗೂ ವಿದ್ಯಾರ್ಥಿಗಳ ಪರೀಕ್ಷೆಗೆ ಅವಶ್ಯಕತೆ ಇರುವ ಉಪಕರಣಗಳನ್ನು ವಿತರಿಸಿದರು.

ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಸಂಘಟನೆಯ ರಾಜ್ಯ ಉಸ್ತುವಾರಿ ಅಧ್ಯಕ್ಷ ಶಿವುಗೌಡ, ಕನ್ನಡ ಮಾಧ್ಯಮದಲ್ಲಿ ಬೋದಿಸುವ ಸರ್ಕಾರಿ ಶಾಲೆಗಳು ಉಳಿಯ ಬೇಕು. ಈ ನಿಟ್ಟಿನಲ್ಲಿ ನಮ್ಮ ಸಂಘಟನೆ ಜಿಲ್ಲೆಯಲ್ಲಿ ಸುಮಾರು 15ಕ್ಕೂ ಹೆಚ್ಚು ಶಾಲೆಗಳಿಗೆ ಜಾರು ಬಂಡೆ ಮುಂತಾದ ಆಟೋಪಕರಣಗಳನ್ನು ಕೊಡುಗೆ ನೀಡಿದೆ. ಅವಶ್ಯವಿರುವ ಶಾಲೆಗಳಿಗೆ ಡೆಸ್ಕ್‌ಗಳ ಕೊಡುಗೆ ನೀಡಿದ್ದೇವೆ. ವಿದ್ಯಾರ್ಥಿಗಳ ಕಲಿಕೆ ಅನುಕೂಲವಾಗುವಂತೆ ಪರಿಕರಗಳನ್ನು ವಿತರಿಸಿದ್ದೇವೆ ಎಂದರು.

ಸರ್ಕಾರಿ ಶಾಲೆಗಳ ಉಳಿಯಲಿ ಅಭಿಯಾನ ಮುಂದುವರೆದಿದ್ದು, ಇಂದು ರಾಮನಗರ ತಾಲ್ಲೂಕಿನ ಅಚ್ಚಲು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಏಳು ಡೆಸ್ಕ್‌ಗಳನ್ನು ಕೊಡುಗೆ ನೀಡಿದ್ದೇವೆ. ಈ ಹಿಂದೆ ಇದೇ ಶಾಲೆಗೆ ಆಟೋಪಕರಣಗಳನ್ನು ನೀಡಿದ್ದೆವು. ಸರ್ಕಾರಿ ಶಾಲೆಗಳು ಉಳಿಯಲಿ ಎಂಬುದು ಸಂಘಟನೆಯ ಪ್ರಾಮಾಣಿಕ ಸೇವೆ ಎಂದರು.

ಕರ್ನಾಟಕ ರಕ್ಷಣಾ ವೇದಿಕೆ (ಸ್ವಾಭಿಮಾನಿ ಬಣ) ಜಿಲ್ಲಾ ಘಟಕದ ಅಧ್ಯಕ್ಷ ಕಿರಣ್ ಕುಮಾರ್ ನೇತೃತ್ವದಲ್ಲಿ ಅಚ್ಚಲು ಗ್ರಾಮದ ಸರ್ಕಾರಿ ಶಾಲೆಗೆ ಡೆಸ್ಕ್‌ಗಳನ್ನು ಕೊಡುಗೆ ನೀಡಲಾಯಿತು. ಈ ವೇಳೆ ಯುವ ಘಟಕದ ಜಿಲ್ಲಾಧ್ಯಕ್ಷ ಸ್ವಾಮಿ, ಯುವ ಘಟಕದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘು, ಕಾರ್ಯದರ್ಶಿ ಬಸವರಾಜು, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಲಕ್ಷ್ಮಿ ನರಸಿಂಹ, ಪ್ರಮುಖರಾದ ನಾಯಕ್. ಕಾರ್ತಿಕ್, ಪ್ರದೀಪ್, ಸುದೀ, ದೇವರಾಜು, ಅಚ್ಯುತ್, ಶೇಖರ್, ಶೇಷಗಿರಿ ಮುಂತಾದವರು ಹಾಜರಿದ್ದರು.

## ಸಂಕ್ಷಿಪ್ತ ಸುದ್ದಿ

### ಮಾರ್ಚ್ 23 ರಂದು ದೇವರ ದಾಸಿಮಯ್ಯ ಜಯಂತಿ

**ಮೈಸೂರು:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ದೇವರ ದಾಸಿಮಯ್ಯ ಜಯಂತಿ ಸಮಿತಿ ವತಿಯಿಂದ ದೇವರ ದಾಸಿಮಯ್ಯ ಜಯಂತಿಯನ್ನು ಮಾ.23 ರಂದು ಮಧ್ಯಾಹ್ನ 12 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿರುತ್ತದೆ.

ಬೆಳಗ್ಗೆ 9 ಗಂಟೆಗೆ ಅರಮನೆಯ ಶ್ರೀಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕರ್ನಾಟಕದ ಕಲಾಮಂದಿರದವರೆಗೂ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ.

ಸಿಎಂ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಕೈಗಾರಿಕ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರ ಘನ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಅನಿಲ್ ಕುಮಾರ್ ಸಿ., ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿ ಸಿದ್ದೇಗೌಡ ಅವರು ಗೌರವ ಉಪಸ್ಥಿತರಿರಲಿದ್ದಾರೆ.

### ದರಪಟ್ಟಿ ಆಹ್ವಾನ

**ಮೈಸೂರು:** ನಂಜನಗೂಡು ತಾಲ್ಲೂಕು ಕಾರಾಗೃಹದಲ್ಲಿ ಅಳವಡಿಸಿರುವ 15 KVA EICHER (TNTL) ಮಾದರಿ ಜನರೇಟರ್ ದುರಸ್ಥಿಯಾಗಿದ್ದು, ತಾಂತ್ರಿಕ ಸಿಬ್ಬಂದಿಯವರ ಪರಿಶೀಲನೆಯನ್ವಯ ಬ್ಯಾಟರಿ ಅಳವಡಿಕೆ, Engine Oil Service, filter kit, AC Altranator service, Fuel Line pipe kit ಅಳವಡಿಕೆ ಕಾಮಗಾರಿಗಳು ಅಗತ್ಯವಿರುತ್ತದೆ.
ದುರಸ್ಥಿ/ಅಳವಡಿಕೆ ಕಾಮಗಾರಿಗಳಿಗೆ ದ್ವಿ ಪ್ರತಿಯಲ್ಲಿ ದರಪಟ್ಟಿಗಳನ್ನು (Included GST & ಇತರೆ ವೆಚ್ಚಗಳು ಸೇರಿ) ಮಾರ್ಚ್ 22 ರೊಳಗಾಗಿ ನಂಜನಗೂಡು ತಾಲ್ಲೂಕು ಉಪ ಕಾರಾಗೃಹದ ಅಧೀಕ್ಷಕರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬಹುದಾಗಿದೆ

ಹೆಚ್ಚಿನ ಮಾಹಿತಿಗಾಗಿ ಮೊ.9480806435 ನ್ನು ಸಂಪರ್ಕಿಸಬಹುದಾಗಿದೆ ಎಂದು ನಂಜನಗೂಡು ತಾಲ್ಲೂಕು ಉಪ ಕಾರಾಗೃಹ ಅಧೀಕ್ಷಕರು ತಿಳಿಸಿದ್ದಾರೆ.

## ವಿದ್ಯಾರ್ಥಿಗಳು ನಾಡು, ನುಡಿ, ಪರಂಪರೆ, ಇತಿಹಾಸ ಅರಿಯಲಿ: ಡಾ.ಕುಮಾರ

# ಮೌಲ್ಯಯುತ ಆದರ್ಶ ಬದುಕು ನಡೆಸಿದ ಪುತಿನ

**ಮಂಡ್ಯ:** ವಿದ್ಯಾರ್ಥಿಗಳು ಪು.ತಿ.ನ ರವರ ಮೌಲ್ಯ, ಆದರ್ಶ, ಚಿಂತನೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಮಕ್ಕಳು ಪುಸ್ತಕವನ್ನು ಓದುವಂತ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ನಮ್ಮ ನಾಡು, ನುಡಿ,ಪರಂಪರೆ, ಇತಿಹಾಸವನ್ನು ಅರಿತುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ರವರು ತಿಳಿಸಿದರು.



ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ನಡೆದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಡಾ.ಪು.ತಿ.ನ ಟ್ರಸ್ಟ್ (ರಿ) ಮೇಲುಕೋಟೆ ಪಾಂಡವಪುರ ತಾಲೂಕು, ಜಿಲ್ಲಾ ಮಾಂಡವ್ಯ ಪ್ರಥಮ ದರ್ಜೆ ಕಾಲೇಜು ಮಂಡ್ಯ ಸಹಯೋಗದೊಂದಿಗೆ ಕನ್ನಡದ ಮಹಾಕವಿ ಡಾ.ಪು.ತಿ.ನ ರವರ 121ನೇ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಪು.ತಿ.ನ ರವರ ಮೌಲ್ಯ ಚಿಂತನೆಗಳನ್ನು ಹಾಗೂ ಮಹನೀಯರ ಮೌಲ್ಯ, ಆದರ್ಶ,ಚಿಂತನೆಗಳನ್ನು ಮಕ್ಕಳಿಗೆ ತಿಳಿಸಬೇಕು ಎಂದು ಹೇಳಿದರು.

ಪುರೋಹಿತ ತಿರುನಾರಾಯಣ ನರಸಿಂಹಾಚಾರ್ (ಪುತಿನ) ಕನ್ನಡದ ನವೋದಯ ಕಾಲದ ಪ್ರಮುಖ ಕವಿ, ಗೀತನಾಟಕಕಾರರು ಮತ್ತು ವಿದ್ವಾಂಸರು (1905–1998). ಮಂಡ್ಯ ಜಿಲ್ಲೆಯ ಮೇಲುಕೋಟೆಯವರಾದ ಇವರು ಸಂಸ್ಕೃತ ಮತ್ತು ಇಂಗ್ಲಿಷ್‌ನಲ್ಲಿ ಪಾಂಡಿತ್ಯ ಹೊಂದಿರುತ್ತಾರೆ ಎಂದು ತಿಳಿಸಿದರು.

ಯುವ ಪೀಳಿಗೆಗೆ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ವೃತ್ತಿಯಿಂದ ನಿವೃತ್ತಿಯಾದರೂ ಪವೃತ್ತಿಯಿಂದ ನಿವೃತ್ತಿಯಾಗದೆ ಸಾಹಿತ್ಯ ವೃತ್ತಿಯಲ್ಲಿ ಅಪಾರ ಚಿಂತನೆಯನ್ನು ಇಟ್ಟುಕೊಂಡು ಪ್ರೊ. ಕೃಷ್ಣಗೌಡರು ಕಾರ್ಯಕ್ರಮ ವನ್ನು ಆಯೋಜನೆ ಮಾಡಿದ್ದೂ ಸಮಾಜಕ್ಕೆ ಕೊಡುಗೆಯನ್ನು ನೀಡುವ ನಿಟ್ಟಿನಲ್ಲಿ ಸಾಂಸ್ಕೃತಿಕ ರಾಯಭಾರಿಯಾಗಿ ಸಾಹಿತಿಕ ರಾಯಭಾರಿಯಾಗಿ ಸಾಮಾಜಿಕ ಚಿಂತನೆಗಳನ್ನು ಮಕ್ಕಳಿಗೆ ತಿಳಿಸುವ ನಿಟ್ಟಿನಲ್ಲಿ ಕೆಲಸ ಆಗುತ್ತಿರುವುದು ಸಂತಸ ತಂದಿದೆ ಎಂದು ಹೇಳಿದರು.

ಪು.ತಿ.ನ ರವರು ಅತ್ಯಂತ ಶ್ರೇಷ್ಠ ಕವಿ ಅವರ ಸಾಹಿತ್ಯ ಮತ್ತು ವೃತ್ತಿ ಬದುಕನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಅವರ ಸಾಹಿತ್ಯದ ಮೌಲ್ಯ,ಭಾವನೆ ಚಿಂತನೆಯನ್ನು ಓದಬೇಕು.ವಿದ್ಯಾರ್ಥಿಗಳು ಮೊದಲು ಸಾಹಿತ್ಯವನ್ನು ಅರ್ಥೈಸಿಕೊಳ್ಳಬೇಕು ಅದರಂತೆ ಸಾಹಿತ್ಯದ ಪ್ರಕಾರವನ್ನು ಅರಿತುಕೊಳ್ಳಬೇಕು ಎಂದು ಹೇಳಿದರು. ಪೋಷಕರು ಮಕ್ಕಳಲ್ಲಿ ನಮ್ಮ ನಾಡಿನ ಪರಂಪರೆ ಕಲೆ,ಸಾಹಿತ್ಯ, ಸಂಸ್ಕೃತಿ, ಚಿಂತನೆಗಳನ್ನು ತುಂಬುವಂತ ಕೆಲಸ ಆಗಬೇಕು ಎಂದು ಹೇಳಿದರು.

ಮಂಡ್ಯ ಜಿಲ್ಲೆಯ ಕೃಷಿ ಪ್ರಧಾನವಾದ ಜಿಲ್ಲೆ ಹಾಗೂ ಜಿಲ್ಲೆಯಲ್ಲಿ ಸಾಹಿತ್ಯದಲ್ಲೂ ಕ್ಷೇತ್ರದಲ್ಲೂ ಅಪಾರವಾಗಿ ಕವಿಗಳು ಸಮಾಜಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಜಿಲ್ಲೆಯೂ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂದು ತಿಳಿಸಿದರು.

ಪು.ತಿ.ನ.ರವರು ಅತ್ಯುತ್ತಮ ಬರಹಗಳ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಮತ್ತು ಸಮಾಜಕ್ಕೆ ಹಲವು ಕೊಡುಗೆಯನ್ನು ನೀಡಿದ್ದಾರೆ. ಜಿಲ್ಲೆಯಲ್ಲಿ ಸಾಹಿತ್ಯ ಬಹಳ ಗಟ್ಟಿಯಾಗಿದೆ ಹಾಗಾಗಿ ಸಾಹಿತ್ಯ ಇನ್ನೂ ಗಟ್ಟಿಯಾಗಿ ಉಳಿದಿದೆ ಪು.ತಿ.ನ ರವರ ಆಧ್ಯಾತ್ಮಿಕ ಚಿಂತನೆಗಳ ಮೂಲಕ ಸಮಾಜಕ್ಕೆ ಹಲವು ಕೊಡುಗೆಗಳನ್ನು ನೀಡಿದ್ದಾರೆ ಎಂದು ತಿಳಿಸಿದರು. ತಂದೆ–ತಾಯಿಗಿಂತ ಮಿಗಿಲಾದ ಶಕ್ತಿ ಯಾವುದು ಇಲ್ಲ ಎಂದು ಮಕ್ಕಳು ಅರ್ಥೈಸಿಕೊಳ್ಳಬೇಕು ಹಾಗೂ ತಂದೆ–ತಾಯಿಯರನ್ನು ಗೌರವಿಸಬೇಕು.ವಿದ್ಯಾರ್ಥಿಗಳು ಜೀವನದಲ್ಲಿ ಮೌಲ್ಯಗಳಿಗೆ ಬೆಲೆ ಕೊಡಬೇಕು ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಮೀರಾ ಶಿವಲಿಂಗಯ್ಯ ಮಾತನಾಡಿ, ಪುರೋಹಿತ ತಿರುನಾರಾಯಣ ನರಸಿಂಹಾಚಾರ್ (ಪುತಿನ) ಕನ್ನಡದ ನವೋದಯ ಕಾಲದ ಪ್ರಮುಖ ಕವಿ, ಗೀತನಾಟಕಕಾರರು ಮತ್ತು ವಿದ್ವಾಂಸರು (1905–1998). ಮಂಡ್ಯ ಜಿಲ್ಲೆಯ ಮೇಲುಕೋಟೆಯವರಾದ ಇವರು ಸಂಸ್ಕೃತ ಮತ್ತು ಇಂಗ್ಲಿಷ್‌ನಲ್ಲಿ ಪಾಂಡಿತ್ಯ ಹೊಂದಿದ್ದು, 'ಯದುಗಿರಿಯ ವೀಣೆ', 'ಗೋಕುಲ ನಿರ್ಗಮನ' (ಗೀತನಾಟಕ) ಮುಂತಾದ ಕೃತಿಗಳ ಮೂಲಕ ಭಕ್ತಿ ಹಾಗೂ ಭಾವಗೀತೆಗಳಿಗೆ ಹೊಸ ಆಯಾಮ ನೀಡಿದವರು ಎಂದು ತಿಳಿಸಿದರು.

ಪು.ತಿ.ನ ರವರ ನಾಟಕಗಳಲ್ಲಿ ಸಂಗೀತವೇ ಪ್ರಧಾನವಾಗಿದ್ದು ಜೊತೆಗೆ ಆಧ್ಯಾತ್ಮಿಕ ಚಿಂತನೆಯನ್ನು ಹೊಂದಿದವರು ಅವರು. ಪು.ತಿ.ನ ರವರ ಸಮಾಧಿಯನ್ನು ಹೂದೋಟಕ್ಕೆ ಪರಿವರ್ತಿಸಲಾಗಿದೆ ಎಂದು ತಿಳಿಸಿದರು.

ಪು.ತಿ.ನ ರವರು ಹಣತೆ ಹಂಸದಾಮಯಂತಿ ಅಹಲ್ಯ ಶ್ರೇಷ್ಠ ಕೃತಿ ಬರೆದು ಪದ್ಮಶ್ರೀ ಹಾಗೂ ಕೇಂದ್ರ ಸಾಹಿತ್ಯ ಪ್ರಶಸ್ತಿಯನ್ನು ಪಡೆದಿದ್ದು, 60ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದರು. ಅವರ ಹಣತೆ ಎಲ್ಲರಿಗೂ ಬೆಳಕಾಗಲಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ.ಪು.ತಿ.ನ ಟ್ರಸ್ಟ್‌ನ ಅಧ್ಯಕ್ಷರು ಪ್ರೊ. ಎಂ.ಕೃಷ್ಣೇಗೌಡ, ಕನ್ನಡದ ಪ್ರಖ್ಯಾತ ಲೇಖಕರು ಜೋಗಿ, ಕರ್ನಾಟಕ ಸಂಘ ಡಾ. ಜಯಪ್ರಕಾಶ್ ಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ನಿರ್ದೇಶಕರು ಡಾ. ಬಿ. ವಿ.ನಂದೀಶ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹರ್ಷ, ಡಾ.ಪು.ತಿ.ನ.ಟ್ರಸ್ಟ್‌ನ ಸದಸ್ಯರು ಪಿ.ಸುಮಾರಾಣಿ ಶಂಭು, ಕುಮಾರ ಕೊಪ್ಪ ಉಪಸ್ಥಿತರಿದ್ದರು.

## ವಿದ್ಯುತ್ ವ್ಯತ್ಯಯ ಮಾ.20ಕ್ಕೆ

**ಮೈಸೂರು:** ದಕ್ಷಿಣ ಹಾಗೂ ಮಂಡಕಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ಕೆಲಸದ ನಿಮಿತ್ತ ಮಾರ್ಚ್ 20 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ದಕ್ಷಿಣ ವಿ.ವಿ.ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಪ್ರದೇಶಗಳು: ವಿದ್ಯಾರಣ್ಯಪುರಂ 25 ರಿಂದ 30ನೇ ಕ್ರಾಸ್, ಕನಕಗಿರಿ, ವೀವರ್ಸ್ ಕಾಲೋನಿ, ಸ್ಟರ್ಲಿಂಗ್ ಥಿಯೇಟರ್, ಕೆ.ಆರ್ ಪುರಂ, ಇಂಡಸ್ಟ್ರಿಯಲ್ ಸಬರ್ಬ್ 1 ರಿಂದ 3ನೇ ಹಂತ, ಚಾಮುಂಡಿಪುರಂ ಸರ್ಕಲ್, ಸಿಲ್ಕ್ ಫ್ಯಾಕ್ಟರಿ, ಅಶೋಕಪುರಂ, ಮೇದರಕೇರಿ, ಆರ್.ಟಿ.ಓ, ಬಲ್ಲಾಳ್ ಸರ್ಕಲ್, ನಂಜುಮಳಿಗೆ, ಬಂಡಿಪಾಳ್ಯ, ಹೊಸಹುಂಡಿ, ಗುಡುಮಾದನಹಳ್ಳಿ, ಏಳಿಗೆಹುಂಡಿ, ಆಲನಹಳ್ಳಿ ರಿಂಗ್ ರಸ್ತೆ, ನಾಚನಹಳ್ಳಿ ಪಾಳ್ಯ, ಕವಿತಾ ಬೇಕರಿ ಸರ್ಕಲ್, ಗೊಬಳಿ ಮರ, ಜೆ.ಪಿ ನಗರ ಎ.ಬಿ.ಸಿ,ಡಿ ಮತ್ತು ಇ ಬ್ಲಾಕ್, ಓಂಕಾರ್ ಲೇಔಟ್, ಪೊಲೀಸ್ ಬೂತ್ ಸರ್ಕಲ್, ಸಿದ್ದಲಿಂಗೇಶ್ವರ ಲೇಔಟ್, ಅಮೋಘ ಪ್ಯಾಲೆಸ್ ಹತ್ತಿರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ಮಂಡಕಳ್ಳಿ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಪ್ರದೇಶಗಳು: ಮಂಡಕಳ್ಳಿ, ಗೆಜ್ಜಗಳ್ಳಿ ಐ.ಪಿ ಪ್ರದೇಶ, ಎಸ್. ಉತ್ತನಹಳ್ಳಿ, ಶ್ರೀನಗರ, ರೇಷ್ಮನಗರ, ಟೀಚರ್ಸ್ ಕಾಲೋನಿ, ಮಹಾಲಕ್ಷ್ಮಿ ಲೇಔಟ್, ಆರ್.ಕೆ ಲೇಔಟ್, ಭವಾನಿ ಲೇಔಟ್, ವಿನಾಯಕ ಲೇಔಟ್, ಮಹಾಲಕ್ಷ್ಮಿ ದೃಷ್ಟಿ ಲೇಔಟ್, ಕೊಪ್ಪಲೂರು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ನ.ರಾ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರಿಂದ ಟಮೋಟೊ ಸುರಿದು ಪ್ರತಿಭಟನೆ

**ಚಾಮರಾಜನಗರ:** ರೈತರು ಬೆಳೆದ ಟೊಮೋಟೋ ಖರೀದಿ ಮಾಡುವಲ್ಲಿ ಡೀಲರ್‌ಗಳು ತಾರತಮ್ಯ ಮಾಡುತ್ತಿದ್ದು, ಒಂದೊಂದು ದರ ನೀಡುವ ಮೂಲಕ ರೈತರಿಗೆ ವಂಚನೆ ಮಾಡಲಾಗುತ್ತಿದೆ ಎಂದು ಆರೋಪಿಸಿ ರೈತರು ನಗರದಲ್ಲಿಂದು ಟಮೋಟೋ ಸುರಿದು ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸಿದ ಪರಿಣಾಮ ಜಿಲ್ಲಾಧಿಕಾರಿ ಶ್ರೀರೂಪ ಅವರು ಎಪಿಎಂಸಿ ಅಧಿಕಾರಿಗಳ ಮುಖಾಂತರ ಟಮೋಟೋ ಖರೀದಿದಾರರು ಹಾಗು ರೈತರ ಸಭೆ ನಡೆಸಿ, ಸಮಸ್ಯೆಯನ್ನು ಇತ್ಯರ್ಥ ಪಡಿಸಿದರು.



ನಗರದ ಜಿಲ್ಲಾಡಳಿತ ಭವನವ ಮುಂಭಾಗ ಸಾಮೂಹಿಕ ನಾಯಕತ್ವದ ರೈತ ಸಂಘಟನೆಯ ಅಧ್ಯಕ್ಷರಾದ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ಹರದನಹಳ್ಳಿ, ಹರವೆ ಹಾಗೂ ಇತರೇ ಭಾಗಗಳ ರೈತರು ತಾವು ಬೆಳೆದ ಟಮೋಟೋ ವನ್ನು ಜಿಲ್ಲಾಡಳಿತ ಭವನದ ಮುಂದೆ ತಂದು ಟಮೋಟೋ ಖರೀದಿದರರು ಹಾಗೂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿತ್ತ ಪ್ರತಿಭಟನೆಗೆ ಮುಂದಾದರು.

ರೈತ ಸಂಘದ ಅಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಜಿಲ್ಲೆಯಲ್ಲಿ ಟೊಮೋಟೋ ಬೆಳೆಯುವ ರೈತರಿಗೆ ಖರೀದಿದಾರರು ತೊಂದರೆ ನೀಡುತ್ತಿದ್ದಾರೆ. ಒಂದೊಂದು ಕಡೆ ತರವಾರಿ ದರವನ್ನು ನೀಡುವ ಮೂಲಕ ರೈತರಿಗೆ ಮೋಸ ಮಾಡಲಾಗುತ್ತಿದೆ. ಚಿಕ್ಕಹೊಳೆ ಹಾಗು ಇತರೇ ಕಡೆಯಲ್ಲಿ ದರ ನೀಡುವಲ್ಲಿ ತಾರತಮ್ಯ ಮಾಡುತ್ತಿದ್ದು, ಮೈಸೂರು, ಗುಂಡ್ಲುಪೇಟೆ ಹಾಗೂ ತೆರಕಣಾಂಬಿಯಲ್ಲಿ ನಡೆಯುವ ದರವನ್ನು ನೀಡದೇ ಅದಕ್ಕಿಂತ ಕೆಜಿಗೆ 5 ರಿಂದ 10 ರೂ. ಕಡಿಮೆ ನೀಡುವ ಮೂಲಕ ರೈತರ ಶೋಷಣೆ ಮಾಡಲಾಗುತ್ತಿದೆ. ಈ ತಾರತಮ್ಯ ನಿಲ್ಲಬೇಕು. ಜಿಲ್ಲಾಧಿಕಾರಿಗಳು, ಎಪಿಎಂಸಿ ಅಧಿಕಾರಿಗಳು ಈ ಕೂಡಲೇ ಸ್ಥಳಕ್ಕೆ ಬಂತು ನಮ್ಮ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಬಳಿಕ ಎಪಿಎಂಸಿ ಸಹಾಯಕ ಕಾರ್ಯದರ್ಶಿ ಬಸವಣ್ಣ, ಕಾರ್ಯದರ್ಶಿ ಜಗದೀಶ್ ಹಾಗೂ ಎಪಿಎಂಸಿ ನಿರ್ದೇಶಕ ವೆಂಕಟರಾವ್ ಸಾಠೆ ಅವರು ಟಮೋಟೋ ಖರೀದಿರಾರರೊಂದಿಗೆ ಆಗಮಿಸಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸಭೆ ಆಯೋಜನೆ ಮಾಡಿದರು. ರೈತರು ಹಾಗೂ ಖರೀದಿರಾರರ ನಡುವೆ ಕಾಲ ಕಾಲ ಚರ್ಚೆ ನಡೆಯಿತು. ರೈತ ಮುಖಂಡರು ಮೈಸೂರಿನಲ್ಲಿ ಯಾವ ದರ ನಡೆಯುತ್ತಿದೆ. ಅದನ್ನು ಇಲ್ಲಿಯು ಕೊಡಬೇಕು. ಇಲ್ಲದಿದ್ದರೆ ನಮಗೆ ಅನ್ಯಾಯವಾಗುತ್ತದೆ. ಹೆಚ್ಚು ಬೇಡ ಕಡಿಮೆಯು ಬೇಡ ಸ್ಥಿರವಾದ ಒಂದು ಬೆಲೆಯನ್ನು ನಿಗಧಿ ಮಾಡಿ ಎಂದು ಪಟ್ಟು ಹಿಡಿದರು.

ಜಿಲ್ಲಾಧಿಕಾರಿ ಶ್ರೀರೂಪ ಅವರು ರೈತರು ಹಾಗೂ ಖರೀದಿದಾರರ ಅಹವಾಲುಗಳನ್ನು ಆಲಿಸಿ, ನಮ್ಮಜಿಲ್ಲೆಯ ರೈತರು ಉಳಿಯಬೇಕು. ಟಮೋಟೋ ಬೆಲೆ ಯಾವ ಹಂತದಲ್ಲಿ ಎಷ್ಟು ಕುಸಿತ ಮತ್ತು ಏರುತ್ತದೆ ಎಂಬುವುದು ಯಾರು ಊಹೆ ಮಾಡಲು ಸಾಧ್ಯವಿಲ್ಲ. ಹೀಗಾಗಿ ಮೈಸೂರು ಭಾಗದಲ್ಲಿ ಯಾವ ದರ ಇರುತ್ತದೆ ಅದರನ್ವಯ 2 ರೂ. ಕಡಿಮೆ ಮಾಡಿ ನಮ್ಮಜಿಲ್ಲೆಯ ರೈತರ ಟಮೋಟೋವನ್ನು ಖರೀದಿ ಮಾಡಬೇಕು. ಇದಕ್ಕೆ ಎಲ್ಲರು ಒಪ್ಪಿಗೆ ಸೂಚಿಸಬೇಕು ಎಂದು ತಿಳಿಸಿದರು. ಸಭೆಯಲ್ಲಿ ರೈತ ಮುಖಂಡರಾದ ಅರಕಲವಾಡಿ ಮಹೇಶ್, ಕಿರಣ್, ಲೋಕೇಶ್, ನಾಗೇಂದ್ರ, ಖರೀದಿದಾರರಾದ ಎಪಿಎಂಸಿ ಮಾಜಿ ನಿರ್ದೇಶಕ ಬಿ. ಶಿವಕುಮಾರ್, ಪಳನಿಸ್ವಾಮಿ, ಸುಹೇಲ್ ಅನಂದ್, ಬಸವರಾಜು, ಮಹೇಶ್, ಅಭಿ, ಸಚಿ, ಮಹೇಶ್, ಎಸ್.ಎಂ.ಗುರು, ನಾಜಿಮ್ ಸೇರಿದಂತೆ ಅನೇಕರು ಇದ್ದರು.

## ಕೆಯುಡಬ್ಲ್ಯೂಜೆ ಸಂಸ್ಥಾಪಕರಾದ ಡಿವಿಜಿ ಜನ್ಮದಿನಾಚರಣೆ

# ಡಿವಿಜಿ ಹಾಕಿಕೊಟ್ಟ ಮಾರ್ಗವೇ ಪತ್ರಕರ್ತರ ಸಂಘಟನೆಗೆ ದಾರಿದೀಪ: ತಗಡೂರು

**ಬೆಂಗಳೂರು:** ಆಧುನಿಕ ಕನ್ನಡ ಸಾಹಿತ್ಯದ ಸರ್ವಜ್ಞ, ಸಾಹಿತ್ಯ ದಿಗ್ಗಜ ಡಿ.ವಿ.ಗುಂಡಪ್ಪನವರು ಕೇವಲ ಸಾಹಿತಿಯಷ್ಟೇ ಅಲ್ಲದೆ, ಪತ್ರಕರ್ತರ ಹಿತರಕ್ಷಣೆಗಾಗಿ 95 ವರ್ಷಗಳ ಹಿಂದೆಯೇ ಸಂಘಟನೆಯನ್ನು ಕಟ್ಟಿದ ದೂರದರ್ಶಿ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಏಗಘಎ) ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಬಣ್ಣಿಸಿದರು.




ನಗರದಲ್ಲಿ ಬೆಂಗಳೂರು ಜಿಲ್ಲಾ ಘಟಕದ ನೂತನ ಕಚೇರಿ ಪೂಜೆ ಹಾಗೂ ಡಿ.ವಿ.ಜಿ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಂದು ಮೈಸೂರು ರಾಜ್ಯ ಪತ್ರಕರ್ತರ ಸಂಘ, ಇಂದು ಕೆ.ಯು.ಡಬ್ಲ್ಯು.ಜೆ:

ಡಿ.ವಿ.ಜಿ ಅವರು ಅಂದು ಹಾಕಿಕೊಟ್ಟ ಅಡಿಪಾಯದ ಮೇಲೆ ಇಂದು 'ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ' ಹೆಮ್ಮರವಾಗಿ ಬೆಳೆದಿದೆ. ಸುಮಾರು 10,000 ಸದಸ್ಯರನ್ನು ಹೊಂದಿರುವ ಇದು ದೇಶದ ಅತಿದೊಡ್ಡ ಸಂಘಟನೆಗಳಲ್ಲಿ ಒಂದಾಗಿದೆ. ಹಿರಿಯ ಪತ್ರಕರ್ತ ಖಾದ್ರಿ ಶಾಮಣ್ಣ ಸಮಿತಿಯ ಶಿಫಾರಸಿನ ಮೇರೆಗೆ ಹುಬ್ಬಳ್ಳಿಯಲ್ಲಿ ನಡೆದ ಸಮ್ಮೇಳನದಲ್ಲಿ ಈ ಸಂಘಕ್ಕೆ ಮರುನಾಮಕರಣ ಮಾಡಲಾದ ಇತಿಹಾಸವನ್ನು ತಗಡೂರು ಸ್ಮರಿಸಿದರು.

**ಬಹುಮುಖ ಪ್ರತಿಭೆಯ ಮೇರು ವ್ಯಕ್ತಿತ್ವ:** ಕರ್ನಾಟಕ ಭೂ ಕಬಳಿಕೆ ನಿಷೇಧ ನ್ಯಾಯಾಲಯದ (ಕಂದಾಯ)ಸದಸ್ಯ ಕೆ.ಎಚ್. ಅಶ್ವತ್ಥನಾರಾಯಣ ಮಾತನಾಡಿ, ಡಿ.ವಿ.ಜಿ ಅವರು ಪ್ರೌಢಶಾಲೆವರೆಗೆ ಓದಿದ್ದರೂ, ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಯಲ್ಲಿ ಅವರು ಹೊಂದಿದ್ದ ಪಾಂಡಿತ್ಯ ಅಪ್ರತಿಮವಾದುದು. ಅವರ "ಮಂಕುತಿಮ್ಮನ ಕಗ್ಗ" ಅಪ್ರತಿಮ ಕೃತಿಯು ಸಮಾಜದ ಪ್ರತಿಯೊಂದು ಸಮಸ್ಯೆಗೆ ಪರಿಹಾರ ನೀಡುವ ಶಕ್ತಿ ಹೊಂದಿವೆ ಎಂದರು.

**ಮಂಕುತಿಮ್ಮನ ಕಗ್ಗವೇ ಸಂವಿಧಾನ:** ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಮಾತನಾಡಿ, "ದೇಶಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನ ಹೇಗೋ, ಪತ್ರಕರ್ತರು ಮತ್ತು ಸಾಮಾನ್ಯ ಜನರ ಬದುಕಿಗೆ ಡಿ.ವಿ.ಜಿ ಅವರ 'ಮಂಕುತಿಮ್ಮನ ಕಗ್ಗ' ಸಂವಿಧಾನದಂತಿದೆ. ಡಿ.ವಿ.ಜಿ ಅವರು ಎಷ್ಟೇ ಬಡತನವಿದ್ದರೂ ಸರ್ಕಾರದ ಚೆಕ್‌ಗಳನ್ನು ನಗದೀಕರಿಸದೆ ಸ್ವಾಭಿಮಾನಿಯಾಗಿ ಬದುಕಿದ ಆದರ್ಶ ವ್ಯಕ್ತಿತ್ವದವರು," ಎಂದು ಕೊಂಡಾಡಿದರು.

ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಮಾತನಾಡಿದ, ಹಿರಿಯ ಪತ್ರಕರ್ತ ಭೋಪಯ್ಯ ಅವರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಂಸ್ಥಾಪಕರಾದ ಡಿ.ವಿ.ಗುಂಡಪ್ಪನವರ ಹುಟ್ಟುಹಬ್ಬದ ದಿನದಂದೇ ಬೆಂಗಳೂರು ಜಿಲ್ಲಾ ಘಟಕ ಇಂದಿನಿಂದಲೇ ತಮ್ಮ ಕಚೇರಿ ಪೂಜೆ ಮಾಡುವುದರೊಂದಿಗೆ ಅವರ ಜನ್ಮದಿನಾಚರಣೆ ಕಾರ್ಯಕ್ರಮದೊಂದಿಗೆ ಕಾರ್ಯಾರಂಭ ಮಾಡಿದೆ. ಇದೊಂದು ಶುಭ ಸೂಚನೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಸಂಘದ ಪ್ರಧಾನ ಕಾರ್ಯದರ್ಶಿ ಜೆ.ಸಿ.ಲೋಕೇಶ್, ಹಾಗೂ ಬೆಂಗಳೂರು ನಗರ ಜಿಲ್ಲೆಯ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಬೆಂಗಳೂರು ನಗರ ಜಿಲ್ಲೆ ಅಧ್ಯಕ್ಷರಾದ ಎಸ್.ಸೋಮಶೇಖರ ಗಾಂಧಿ ಸ್ವಾಗತ ಮಾಡಿದರು, ಬೆಂಗಳೂರು ನಗರ ಜಿಲ್ಲೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ರವೀಶ್ ವಂದನಾರ್ಪಣೆ ಮಾಡಿದರು.

**ನಗರ ಘಟಕ ಕಚೇರಿಯಲ್ಲಿ ಪೂಜೆ:** ಇದೇ ಸಂದರ್ಭದಲ್ಲಿ ಬೆಂಗಳೂರು ನಗರ ಘಟಕದ ಕಚೇರಿಯಲ್ಲಿ ವಿಧ್ಯುಕ್ತವಾಗಿ ಪೂಜೆ ಸಲ್ಲಿಸಿದ ನೂತನ ಪದಾಧಿಕಾರಿಗಳು ಸಂಘದ ಕಾರ್ಯಚಟುವಟಿಕೆಗಳಿಗೆ ಚಾಲನೆ ನೀಡಿದರು.

# ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ದತೆ ಮಾಡಿಕೊಳ್ಳಲಾಗಿದೆ: ತಿಮ್ಮೇಗೌಡ



**ಕೆ.ಆರ್.ಪೇಟೆ:** 2025–26ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗಳು ದಿನಾಂಕ 18–03–26 ರಿಂದ 02–04–26 ರ ವರೆಗೆ ನಡೆಯಲಿದ್ದು ಸುಗಮ ಪರೀಕ್ಷೆಗೆ ಎಲ್ಲಾ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಕ್ಷೇತ್ರ ಶಿಕ್ಷಣಧಿಕಾರಿ ವೈ.ಕೆ.ತಿಮ್ಮೇಗೌಡ ತಿಳಿಸಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು ಸುಗಮ ಪರೀಕ್ಷೆಗೆ ಇಲಾಖಾ ವತಿಯಿಂದ ಕೈಗೊಂಡಿರುವ ಸಿದ್ದತಾ ಕ್ರಮಗಳನ್ನು ವಿವರಿಸಿದರು.

ಎಸ್.ಎಸ್.ಎಲ್.ಸಿ ಪರೀಕ್ಷೆ ಮಾರ್ಚಿ 18 ರಿಂದ ಏಪ್ರಿಲ್ 02 ರವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.25 ರ ವರೆಗೆ ನಡೆಯಲಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆ.ಪಿ.ಎಸ್, ಕಿಕ್ಕೇರಿಯ ಕೆ.ಪಿ.ಎಸ್ ಶಾಲೆ, ಅಕ್ಕಿಹೆಬ್ಬಾಳು, ಬೂಕನಕೆರೆ ಮತ್ತು ಸಂತೇಬಾಚಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ಸೇರಿ ಒಟ್ಟು 06 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದಗದು 2423 ಫ್ರೆಷ್ ಹಾಗೂ 203 ಪುನರಾವರ್ತಿತರು ಸೇರಿ ಒಟ್ಟು 2626 ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ಪರೀಕ್ಷೆ ಬರೆಯಲಿದ್ದಾರೆ.

ಒಟ್ಟಾರೆ 1167 ಹೆಣ್ಣು ಮತ್ತು 1256 ಗಂಡು ಮಕ್ಕಳು ಸೇರಿ 2423 ಮಂದಿ ಹೊಸದಾಗಿ ಪರೀಕ್ಷೆ ಬರೆಯುತ್ತಿದ್ದು ಪರೀಕ್ಷೆ ಬರೆಯುವವರಲ್ಲಿ ಗಂಡು ಮಕ್ಕಳು ಹೆಚ್ಚಿದ್ದಾರೆ.

ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ಸಿ.ಸಿ.ಟಿ.ವಿ ಅಳವಡಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಇಬ್ಬರು ಸ್ಥಾನಿಕ ಜಾಗೃತ ದಳ ಸಿಬ್ಬಂದಿ ಹಾಗೂ ಅನ್ಯ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ.ತಾಲೂಕು ಹಂತದಲ್ಲಿ ತಹಸೀಲ್ದಾರರು, ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಧಿಕಾರಿಗಳ ನೇ

ತೃತ್ವದಲ್ಲಿ ವಿಚಕ್ಷಣಾ ದಳವನ್ನು ರಚಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀ ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಘೋಷಿಸಲಾಗಿದೆ. ಹಾಗೂ ಈ ವ್ಯಾಪ್ತಿಯಲ್ಲಿ ಬರುವ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಕ್ಕೂ ಭದ್ರತೆಗಾಗಿ ಆರಕ್ಷಕ ಸಿಬ್ಬಂಧಿ ಹಾಗೂ ಮಕ್ಕಳ ಆರೋಗ್ಯ ಕಾಳಜಿಗಾಗಿ ಶುಶ್ರೂಷಕರನ್ನು ನಿಯೋಜಿಸಲಾಗಿದೆ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಡಿಜಿಟಲ್/ಸ್ಮಾರ್ಟ್ ಕೈಗಡಿಯಾರಗಳನ್ನು ಧರಿಸುವಂತಿಲ್ಲ.

ತಾಲೂಕಿನ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ವಿದ್ಯಾರ್ಥಿಗಳಿಗೆ ಸೂಕ್ತ ಪೀಠೋಪಕರಣದ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಸೇರಿದಂತೆ ಎಲ್ಲಾ ಗೆಯ ಮೂಲಭೂತ ಸೌಲಭ್ಯವನ್ನು ಕಲ್ಪಿಸಲಾಗಿದ್ದು ವಿದ್ಯಾರ್ಥಿಗಳು ಗೋಡೆಗೆ ಅಭಿಮುಖವಾಗಿ ಕುಳಿತುಕೊಂಡು ಪರೀಕ್ಷೆ ಬರೆಯುವಂತೆ ವ್ಯವಸ್ಥೆ ಮಡಲಾಗಿದೆ. ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಯಾವುದೇ ಆತಂಕ ಪಡದೆ ಧೈರ್ಯದಿಂದ ಪರೀಕ್ಷೆಗಳನ್ನು ಬರೆದು ಯಶಸ್ವಿಯಾಗಲಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ.ತಿಮ್ಮೇಗೌಡ ಹಾರೈಸಿದ್ದಾರು.

# ಅವಳಿ ತಾಲೂಕಿನ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ

**ಕೆ.ಆರ್.ನಗರ:** ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ, ಇದರಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ತಾಲೂಕು ಯುವ ರೈತ ವೇದಿಕೆಯ ಅಧ್ಯಕ್ಷ ಅರ್ಜುನಹಳ್ಳಿ ರಾಮ್ ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.



ಪಟ್ಟಣದ ತಾಲೂಕು ಆಡಳಿತ ಸೌದದ ಎದುರು ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿರುವ ಪೊ?ಟೋ ಇಟ್ಟುಕೊಂಡು ಛಾಪೆ ಹಾಸಿ ಕೊಂಡು, ಬೆಡ್ ಸೀಟ್ ಹೊದಿಸಿ ಕೊಂಡು ನಿದ್ದೆಮಾಡುವ ಮೂಲಕ ವಿನೂತನವಾಗಿ ಪ್ರತಿಭಟಿಸಿದ ರಾಮಪ್ರಸಾದ್ ನಿದ್ದೆಯಲ್ಲಿರುವ ಸರ್ಕಾರವನ್ನು ಎಚ್ಚರಿಸಲು ಈ ಪ್ರತಿಭಟನೆ ಮಾಡುತ್ತಿರುವುದಾಗಿ ತಿಳಿಸಿದರು.

ಈ ವೇಳೆ ಮಾತನಾಡಿದ ಅರ್ಜುನಹಳ್ಳಿ ರಾಮ್ ಪ್ರಸಾದ್ ಸರ್ಕಾರ ರೈತರಿಂದ ಭತ್ತ ಖರೀದಿ ಮಾಡಲಾಗಿದ್ದು ಬೆಂಬಲ ಬೆಲೆಯ ಹಣವನ್ನು ಈವರೆವಿಗೂ ರೈತರ ಖಾತೆಗೆ ಜಮಾ ಮಾಡಿಲ್ಲ, ರಾಗಿ ಖರೀದಿಯಲ್ಲಿ 1ಕ್ವಿಂಟಾಲ್‌ಗೆ 5ಕೆ.ಜಿ. ಕಳೆಯುವ ಮೂಲಕ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಿದರು.

ಸಾಲಿಗ್ರಾಮ ತಾಲೂಕು ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದ್ದು ರೈತರು ಜಮೀನಿನ ದಾಖಲೆಯನ್ನು ಪಡೆಯಲು, ಖಾತೆ ,ಪೊ?ಡಿ ಸೇರಿದಂತೆ ಜನನ, ಮರಣ ಪ್ರಮಾಣ ಪತ್ರ ಪಡೆಯಲು ವರ್ಷಾನುಗಟ್ಟಲೆ ಅಲೆಯಬೇಕಾ, ಇಂತಹ ಅಸಡ್ಡೆಯ ಅಧಿಕಾರಿಗಳ ಧೋರಣೆಯಿಂದಾಗಿ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾರೆ ಎಂದು ಗಂಬೀರ ಆರೋಪ ಮಾಡಿದರು.

ತವರು ಜಿಲ್ಲೆಯವರಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ರೈತರಿಗೆ ಅನ್ಯಾಯ ಎಸಗಿದ್ದಾರೆ. ಈ ಸರ್ಕಾರ ನಿದ್ದೆ ಮಾಡುವ ಸರ್ಕಾರ ಆಗಿದೆ ಹಾಗಾಗಿ ನಿದ್ದೆ ಮಾಡುವ ಮೂಲಕ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡುತ್ತಿರುವುದಾಗಿ ಹೇಳಿದ ರಾಮ್ ಪ್ರಸಾದ್ ಇದೇ ಸಿದ್ದರಾಮಯ್ಯನವರರು 2013 ರಲ್ಲಿ ಶ್ರೀರಾಮ ಸಕ್ಕರೆ ಕಾರ್ಖಾನೆಗೆ ಹಣ ನೀಡಿದೆ ಬಾಗಿಲು ಹಾಕಿಸಿದರು, ಮತ್ತೆ ಮುಖ್ಯಮಂತ್ರಿಗಳಾಗಿ ಮೂರು ವರ್ಷಗಳು ಕಳೆಯುತ್ತಾ ಬಂದಿದೆ ಇದುವರೆವಿಗೂ ಶ್ರೀರಾಮ ಸಕ್ಕರೆ ಕಾರ್ಖಾನೆ ಪುನಾರಂಭದ ಬಗ್ಗೆ ಚಕಾರವೆತ್ತಿಲ್ಲ ಹಾಗೂ ಈ ಬಜೆಟ್ ನಲ್ಲಿ ಒಂದು ನಯಾಪೈಸಾ ಬಿಡುಗಡೆ ಮಾಡಿಲ್ಲ ಎಂದು ದೂರಿದರು.

ಬೆಳಿಗ್ಗೆ ಯಿಂದ ಸಂಜೆಯವರೆಗೆ ರೈತರ ಪಂಪ್‌ಸೆಟ್‌ಗಳಿಗೆ ನಿರಂತರವಾಗಿ 3ಪೇಸ್ ವಿದ್ಯುತ್ ಸಂಪರ್ಕ ನೀಡಬೇಕು ಕನಿಷ್ಟ 3 ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ರೈತರ ಸಭೆ ನಡೆಸಿ ಕುಂದು–ಕೊರತೆ ಆಲಿಸಬೇಕೆಂದು ಒತ್ತಾಯಿಸಿದದ ಅವರು ಇದೇ ಜಿಲ್ಲಾಧಿಕಾರಿಗಳು ಕೆ.ಆರ್.ನಗರ ಕ್ಷೇತ್ರದಲ್ಲಿ ಶಾಸಕರೊಟ್ಟಿಗೆ ಜನಸಂಪರ್ಕ ಸಭೆ ನಡೆಸಿ ವರ್ಷ ಆಗಿದೆ ಆದರೆ ಅರ್ಜಿ ಕೊಟ್ಟವರ ಸಮಸ್ಯೆಗಳನ್ನು ಇನ್ನೂ ಸರಿ ಸರಿಪಡಿಸಲು ಸಾದ್ಯವಾಗಿಲ್ಲ ಎಂದು ತಿಳಿಸಿದರು.

ಸುಮಾರು 1 ಗಂಟೆಗೂ ಹೆಚ್ಚು ಕಾಲ ತಾಲೂಕು ಕಛೇರಿ ಎದುರು ನಿದ್ದೆಚಳುವಳಿ ಮಾಡುತ್ತಿದ್ದ ಯುವ ರೈತ ವೇದಿಕೆ ಅಧ್ಯಕ್ಷ ಅರ್ಜುನಹಳ್ಳಿ ರಾಮಪ್ರಸಾದ್ ರವರನ್ನು ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ ಮತ್ತು ಪೊಲೀಸ್ ಇನ್‌ಸೆಕ್ಟರ್ ಶಿವಪ್ರಕಾಶ್ ಪ್ರತಿಭಟನೆ ಕೈಬಿಟ್ಟು ಮನವಿ ಸಲ್ಲಿಸುವಂತೆ ಮನವಿ ಸಲ್ಲಿಸುವಂತೆ ತಿಳಿಹೇಳಿ ಮನವೊಲಿಸುವಲ್ಲಿ ಯಶಸ್ವಿಯಾದರು.

# ಬೀದಿ ಬದಿ ವ್ಯಾಪಾರಸ್ಥರಿಗೆ ಪರವಾನಗಿ ನೋಂದಣಿ ಕಡ್ಡಾಯ: ಡಾ.ಬಿ.ಸಿ.ಶಿವಾನಂದಮೂರ್ತಿ




**ಮಂಡ್ಯ:** ಜಿಲ್ಲೆಯಲ್ಲಿ ಆಹಾರ ಪದಾರ್ಥಗಳ ತಯಾರಿಕೆ, ವಿತರಣೆ, ಶೇಖರಣೆ ಮಾಡುವ ಎಲ್ಲಾ ಆಹಾರ ವ್ಯಾಪಾರಸ್ಥರು (Food Business Operator) ಆಹಾರ ಸುರಕ್ಷತೆ ಮತ್ತು ಗುಣಮಟ್ಟತೆ (FSS Act –2006 ಸೆಕ್ಷನ್–31) ಕಾಯ್ದೆಯಡಿಯಲ್ಲಿ ಕಡ್ಡಾಯವಾಗಿ ಪರವಾನಗಿ, ನೋಂದಣಿಯನ್ನು ಪಡೆಯಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಬಿ.ಸಿ.ಶಿವಾನಂದಮೂರ್ತಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006, ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ನ್ಯಾಯಬೆಲೆ ಅಂಗಡಿ, ಅಕ್ಷರ ದಾಸೋಹ ಕಾರ್ಯಕ್ರಮದಡಿ ಕಾರ್ಯನಿರ್ವಹಿಸುವ ಎಲ್ಲಾ ಶಾಲೆಗಳು, ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳು, ಎಲ್ಲಾ ಸರ್ಕಾರಿ ಅಥವಾ ಖಾಸಗಿ ಉಗ್ರಾಣಗಳು, ಹಣ್ಣಿನ ವಿತರಕರು, ಮಾರಾಟಗಾರರು ಹಾಗೂ ವ್ಯಾಪಾರಿಗಳು, ರಸ್ತೆ ಬದಿ ವ್ಯಾಪಾರಿಗಳು, ಮಾಂಸ ಮಾರಾಟಗಾರರು, ಹೋಟೆಲ್‌ಗಳು, ರೆಸ್ಟೋರೆಂಟ್, ಕ್ಯಾಟರಿಂಗ್ ಮಾಡುವವರು ಹಾಗೂ ಕ್ಯಾಂಟಿನ್‌ಗಳು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006ರ ಕಾಯ್ದೆಯಡಿ ಕಡ್ಡಾಯವಾಗಿ ಪರವಾನಗಿ ನೋಂದಣಿ ಪಡೆಯಬೇಕು ಎಂದು ಸೂಚಿಸಿದರು. ಜಿಲ್ಲೆಯಲ್ಲಿ 1500 ಡಿಷ್ಟು ಅಲೆಮನೆಗಳಿದ್ದು, ಆಹಾರ ಸುರಕ್ಷತಾಧಿಕಾರಿಗಳು ತಮ್ಮ ತಾಲ್ಲೂಕು ವ್ಯಾಪ್ತಿಯಲ್ಲಿ ನಿರಂತರವಾಗಿ ಆಲೆಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು ಎಂದು ತಿಳಿಸಿದರು. ತಾಲ್ಲೂಕು ಕಾರ್ಯನಿರ್ವಾಹಕಾಧಿರಿಗಳು ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳು ತಮ್ಮ ಕಛೇರಿಯಿಂದ ಆಹಾರ ಉದ್ದಿಮೆಗಳಿಗೆ ಹಾಗೂ ಆಹಾರ ನಾಗರೀಕ ಸರಬರಾಜು ಇಲಾಖೆಯು ನ್ಯಾಯ ಬೆಲೆ ಅಂಗಡಿಗಳು ಮತ್ತು ಗೋದಾಮುಗಳಿಗೆ, ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳು ಕಡ್ಡಾಯವಾಗಿ ಎಫ್‌ಎಸ್‌ಎಸ್‌ಎಐ ಪರವಾನಗಿ ನೋಂದಣಿ ಕಡ್ಡಾಯಗೊಳಿಸಬೇಕು ಮತ್ತು ಅಡುಗೆ ಕೋಣೆ, ದಾಸ್ತಾನು ಕೊಠಡಿ ಅಡುಗೆಯವರು ಮತ್ತು ಸಿಬ್ಬಂದಿಗಳ ವಯಕ್ತಿಕ ಶುಚಿತ್ವ ಮತ್ತು ಆರೋಗ್ಯ ತಪಾಸಣೆ ಮಾಡಬೇಕು ಎಂದು ಹೇಳಿದರು. ಅನಧಿಕೃತ ಆಹಾರ ಘಟಕಗಳಿಗೆ ಅಂಕಿತ ಅಧಿಕಾರಿಗಳು ಮತ್ತು ಅವರ ತಂಡ ರೇಡ್‌ಗೆ ಹೋದಾಗ ಪೊಲೀಸ್ ಇಲಾಖೆಯ ಸಿಬ್ಬಂದಿ ಮತ್ತು ಅವರ ಸಿಬ್ಬಂದಿಗಳ ಸಹಕಾರ ಮತ್ತು ರಕ್ಷಣೆ ನೀಡಬೇಕು ಎಂದು ಹೇಳಿದರು.

ಪ್ರತಿ ಆಹಾರ ಸುರಕ್ಷತಾಧಿಕಾರಿಗಳು ಪ್ರತಿ ಮಾಹೆ 10 ಕಾನೂನಾತ್ಮಕ ಆಹಾರ ಮಾದರಿಗಳು ಹಾಗೂ 15 ಸರ್ವೇ ಸ್ಯಾಂಪಲ್ ಆಹಾರ ಮಾದರಿಗಳನ್ನು ತೆಗೆದು ನೊಂದಾಯಿತ ಆಹಾರ ಪ್ರಯೋಗ ಶಾಲೆಗೆ ಕಳುಹಿಸಲು ತಿಳಿಸಬೇಕು. ಅದರಂತೆ ಧಾನ್ಯಗಳು, ಮಸಾಲ ಪದಾರ್ಥಗಳು, ಅಡುಗೆ ಎಣ್ಣೆ, ಕೊಬ್ಬಿನಾಂಶ ಪದಾರ್ಥಗಳು, ಬೇಕರಿ ಉತ್ಪನ್ನಗಳು, ಮತ್ತು ಚಾಕೋಲೇಟ್ಸ್, ಮೊಟ್ಟೆ, ನ್ಯೂಟ್ರಾಸಿಟಿಕಲ್ಸ್ ಉತ್ಪನ್ನಗಳು, ಆಹಾರ ಪದಾರ್ಥಗಳು, ಹಾಲು, ಹಾಲಿನ ಉತ್ಪನ್ನಗಳು, ಬೆಲ್ಲ ನೀರಿನ ಉತ್ಪನ್ನಗಳು ಹಾಗೂ ಕಾಫಿ, ಟೀ ಆಹಾರ ಪದಾರ್ಥಗಳನ್ನು ವಿಶ್ಲೇಷಣೆಗೆ ಕಳುಹಿಸಬೇಕು ಎಂದು ಸೂಚಿಸಿದರು. ಪ್ರಸ್ತುತ 2025–26ನೇ ಸಾಲಿನಲ್ಲಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಒಟ್ಟು 19 ಪ್ರಕರಣ ದಾಖಲು ಮಾಡಲಾಗಿದೆ. ಮತ್ತು ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಒಟ್ಟು 34 ಪ್ರಕರಣ ದಾಖಲು ಮಾಡಿದ್ದು 9 ಪ್ರಕರಣಗಳು ಇತ್ಯರ್ಥಗೊಂಡಿರುತ್ತದೆ ಎಂದು ತಿಳಿಸಿದರು.

ರಸ್ತೆ ಬೀದಿ ಬದಿ ವ್ಯಾಪಾರಿಗಳ ಸಂಖ್ಯೆ ಹೆಚಾಗಿದ್ದು, ಅವರಿಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ಪರವಾನಗಿ, ನೋಂದಣಿ, ಆರೋಗ್ಯ ತಪಾಸಣೆ, ಸ್ವಚ್ಛತೆ ಮತ್ತು ಗುಣಮಟ್ಟ ಬಳಸದಿದ್ದಲ್ಲಿ ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಶ್ರೀನಿವಾಸ್, ನಗರಾಭಿವೃದ್ಧಿ ಆಯುಕ್ತರು ಪಂಪ ಶ್ರೀ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕರು ಪ್ರತೀಕ್ ಹೆಗಡೆ ರವರು ಉಪಸ್ಥಿತರಿದ್ದರು.

## ಕುಡಿಯುವ ನೀರಿನ ಯೋಜನೆಗೆ ರೂ. 490 ಕೋಟಿ ಅನುದಾನ: ಸಚಿವ ಎಂ.ಸಿ.ಸುಧಾಕರ್

# ಅಂತರ್ಜಲ ಮಟ್ಟ ಅಭಿವೃದ್ಧಿಗೆ ಆದ್ಯತೆ

**ಬೆಂಗಳೂರು:** ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಹಾಗೂ ಕುಡಿಯುವ ನೀರಿನ ಯೋಜನೆಗೆ ಸಣ್ಣ ನೀರಾವರಿ ಇಲಾಖೆಯಿಂದ 490 ಕೋಟಿ ಅನುದಾನವನ್ನು ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಮೀಸಲಿಟ್ಟಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು ತಿಳಿಸಿದರು.

ಇಂದು ವಿಧಾನಸಭೆಯ ಅಧಿವೇಶನದ ಪ್ರಶ್ನೋತ್ತರ ಕಲಾಪದ ವೇಳೆ ವಿಧಾನಸಭಾ ಸದಸ್ಯ ಮಂಜುನಾಥ್ ಎಂ.ಆರ್. ಅವರು ಹನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಡಿ ಅಂತರ್ಜಲ ಹೆಚ್ಚಿಸಲಿಕ್ಕೆ ರೂಪುರೇಷೆಗಳನ್ನು ರಚಿಸಲು ಹಾಗೂ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರಶ್ನಿಸಿದರು.




ಈ ಸಮಯದಲ್ಲಿ ಸದಸ್ಯರ ಪ್ರಶ್ನೆಗೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಪರವಾಗಿ ಉತ್ತರಿಸಿದ ಸಚಿವ ಡಾ. ಎಂ.ಸಿ.ಸುಧಾಕರ್ ಅವರು ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನೀರಾವರಿ ಕೆರೆಗಳು, ಪಿಕಪ್ ಚೆಕ್ ಡ್ಯಾಂ ನಿರ್ಮಾಣ, ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆ ಹಾಗೂ ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಲಾಗಿರುತ್ತದೆ.

ಕಳೆದ 4 ವರ್ಷಗಳಲ್ಲಿ 9 ಕೋಟಿಗಿಂತ ಹೆಚ್ಚು ಅನುದಾನವನ್ನು ಹನೂರು ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿದೆ, ಅಲ್ಲದೇ ಪ್ರಸ್ತುತ ಬಜೆಟ್ ನಲ್ಲಿ 490 ಕೋಟಿ ಅನುದಾನವನ್ನು ಮೀಸಲಿರಿಸಿದೆ ಎಂದು ತಿಳಿಸಿದರು.

# ಮಾನವೀಯ ಮೌಲ್ಯಗಳ ಪ್ರೀತಿಯ ಜೊತೆಗೆ ಒಂದಷ್ಟು ದಿನ ಬದುಕಿಬಿಡೋಣ



| ಪುಷ್ಪ ಪ್ರಸಾದ್



ಬದುಕೆಂಬ ಪಯಣದಲ್ಲಿ ಸಾವಿರಾರು ಜನರ ಪರಿಚಯ ಒಡನಾಟ ನಮಗಾಗುವುದು ಸಹಜ. ಈ ಸಹಜತೆಯಲ್ಲಿ ಎದುರಾಗುವ ಘಟನೆಗಳು ಹಲವಾರು. ಈ ಘಟನೆಗಳು ಮಹತ್ವ ಪಡೆಯುವುದು ಆಳವಾಗಿ ಮನಸ್ಸಿಗೆ ತಾಕಿದಾಗ ಮಾತ್ರ ಸಾಧ್ಯ. ಅದಿಲ್ಲವಾದರೆ ಅದಲ್ಲಿಗೆ ಮರೆತು ಹೋಗುತ್ತದೆ. ಹಾಗಾದರೆ ಈ ಘಟನೆಗಳ ಹಿಂದೆ ಇರುವ ವಿಷಗಳಿಗೆಗೆ ಕಾರಣರಾದವರ ಮೇಲಿನ ನಂಬಿಕೆ ಎಲ್ಲರ ಬಗ್ಗೆ ಯಾಕೆ ಉಂಟಾಗುವುದಿಲ್ಲ? ಕೇವಲ ಕೆಲವು ಮನುಷ್ಯರ ಬಗ್ಗೆ ಮಾತ್ರ ಏಕೆ ನಂಬಿಕೆ ಉಂಟಾಗುತ್ತದೆ? ಕಾರಣ ಏನು? ಏಕೆ ಹೀಗೆ? ಆ ಭಾವನೆ ಯಾವ ಹಂತದಲ್ಲಿ ಮನಸ್ಸನ್ನು ಕಾಡುತ್ತದೆ? ಉತ್ತರ ಹುಡುಕುವುದು ಸ್ವಲ್ಪ ಕಷ್ಟ. ಏಕೆಂದರೆ ಮನಸ್ಸನ್ನು ಹೊಕ್ಕಿ ಕೆದಕಿದಷ್ಟೂ ಅದು ನಿಗೂಢವಾಗುತ್ತ ಹೋಗುತ್ತದೆ. ಒಬ್ಬೊಬ್ಬರ ವಿಚಾರ ಒಂದೊಂದು ರೀತಿ. ಆದರೂ ಎಲ್ಲದಕ್ಕೂ ಮನುಷ್ಯ ಮುಂದುವರಿಯುವುದು, ಬದುಕುತ್ತಿರುವುದು ಈ ನಂಬಿಕೆಯೆಂಬ ಬುನಾದಿಯ ಮೇಲೆ. ಈ ನಂಬಿಕೆಯೆಂಬುದು ಮೊದಲು ನಮ್ಮ ಮೇಲೆ ನಮಗಿದ್ದರೆ ಮಾತ್ರ ನಾವು ಇನ್ನೊಬ್ಬರ ನಂಬಿಕೆಗೆ ಅರ್ಹರಾಗಲು ಸಾಧ್ಯ. ನಮ್ಮ ನಂಬಿಕೆ ಅರ್ಥಪೂರ್ಣವಾಗಿ ಇರಬೇಕೆಂದರೆ ಯಾರನ್ನಾದರೂ ನಂಬುವ ಮೊದಲು ಅವರನ್ನು ಅರ್ಥ ಮಾಡಿಕೊಳ್ಳಬೇಕು.

ಇನ್ನೊಬ್ಬರ ಸಂತೋಷದಲ್ಲಿ ಪಾಲ್ಗೊಳ್ಳುವುದು ಸರಿ. ಅದಕ್ಕೆ ಕಾರಣ ನಾವೇ ಆಗಿದ್ದರೆ ಇನ್ನೂ ಖುಷಿ. ಯಾರಿಗೂ ನಮ್ಮಿಂದ ದುಃಖವಾಗದಿರಲಿ. ನಿಧಾನವಾಗಿಯಾದರೂ ಸರಿ ಮುಂದೆ ನಡೆಯಬೇಕು. ಹಿಂದೆ ಸಾಗಿ ಹೊರಟಲ್ಲಿಗೇ ತಲುಪುವುದರಿಂದ ಸಮಯ–ಶಕ್ತಿ ಎರಡೂ ವ್ಯರ್ಥ. ನಾನು ಏನು? ನನ್ನ ಸಾಮರ್ಥ್ಯ ಏನು? ನನಗೆ ಯಾವುದರಲ್ಲಿ ಆಸಕ್ತಿ ಇದೆ? ಹೀಗೆ ಹಲವಾರು ವಿಷಯವಾಗಿ ನಮ್ಮನ್ನೇ ನಾವು ಒರೆಗೆ ಹಚ್ಚಿ ಮನಸ್ಸಿನಲ್ಲಿ ಧೃಡತೆ ತಂದುಕೊಳ್ಳಬೇಕು. ನಮ್ಮನ್ನು ನಾವು ಆದಷ್ಟು ಮೌನಕ್ಕೆ ಶರಣಾಗಿಸಿ ನಮ್ಮೊಳಗಿನ ನಂಬಿಕೆ ಬಡಿದೆಬ್ಬಿಸಬೇಕು. ಮನಸ್ಸಿನಲ್ಲಿ ಉಂಟಾಗುವ ಛಲ, ಅದೇ ನಮ್ಮ ಮೇಲಿನ ನಂಬಿಕೆ ಬಲ ಪಡಿಸುತ್ತದೆ. ನಂಬಿಕೆ ಇದ್ದರೆ ಇಡೀ ಜಗತ್ತನ್ನೇ ಗೆಲ್ಲಬಹುದು. ಬದುಕು ಬದಲಾಗಬೇಕಾದರೆ ನಮ್ಮ ಚಿಂತನೆಗಳು, ಭಾವನೆಗಳು ಬದಲಾಗಬೇಕು. ಅವು ಬದಲಾಗಬೇಕಾದರೆ, ನಮ್ಮ ನಂಬಿಕೆಗಳು ಬದಲಾಗಬೇಕು. ನಂಬಿಕೆ ಬದಲಾದರೆ ಮಾತ್ರ ಬದುಕು ಬದಲಾಗುತ್ತದೆ. ನಂಬಿಕೆಯ ಮೇಲೆ ನಂಬಿಕೆಯಿಡಬೇಕು.


ಅತಿಯಾದರೆ ಅಮೃತವೂ ವಿಷ ಅನ್ನುವ ಮಾತಿನಂತೆ ಅತಿಯಾದ ನಂಬಿಕೆ ಮನಸ್ಸನ್ನು ಘಾಸಿಗೊಳಿಸುವ ಸಾಧ್ಯತೆಗಳಿದೆ. ಅತಿಯಾಗಿ ನಂಬಿದಾಗ ನೀವು ಆ ವಿಷಯದ/ವ್ಯಕ್ತಿಯ ಬೇರೆ ಆಯಾಮಗಳನ್ನು ಪರೀಕ್ಷಿಸಲು ಹೋಗುವುದಿಲ್ಲ. ಕೆಲವೊಮ್ಮೆ ನಮ್ಮ ನಂಬಿಕೆಗಳು ನಮ್ಮನ್ನು ಹೊಸ ಆಲೋಚನೆಗಳನ್ನು ಮಾಡಲು ಬಿಡುವುದಿಲ್ಲ. ಹಳೆಯ ನಂಬಿಕೆಗಳು ಪೂರ್ವಾಗ್ರಹವಾಗಿ ಬದಲಾಗುವ ಸಾಧ್ಯತೆಗಳಿವೆ. ನಂಬಿಕೆ ಇರಲಿ ಅದು ಜೀವನದ ಅಗತ್ಯತೆ. ಆದರೆ ಅದು ಅತಿಯಾಗದಿರಲಿ. ನಮ್ಮ ವಿವೇಕವನ್ನು ಉಪಯೋಗಿಸಿ ನಂತರ ನಂಬೋಣ.

ಡಿ.ವಿ.ಜಿ.ಅವರು ಕಗ್ಗದಲ್ಲಿ ಹೇಳಿದಂತೆ–

**ನಂಬದಿರ್ದನು ತಂದೆ, ನಂಬಿದನು ಪ್ರಹ್ಲಾದ?**
**ನಂಬಿಯುಂ ನಂಬದಿರುವಿಬ್ಬಂದಿ ನೀನು ??**
**ಕಂಬದಿನೋ ಬಿಂಬದಿನೋ ಮೋಕ್ಷವವರಿಂಗಾಯ್ತು ?**
**ಸಿಂಬಳದಿ ನೊಣ ನೀನು ? ಮಂಕುತಿಮ್ಮ ??**

ಅತಿಯಾದ ನಂಬಿಕೆ ಅಥವಾ ವಿಶ್ವಾಸವನ್ನು ಯಾರ ಮೇಲಾದರೂ ಇಟ್ಟಾಗ, ನಾವು ಅವರಿಗೆ ಯಾವತ್ತೂ ತಪ್ಪು ಮಾಡೋದಕ್ಕೆ ಅವಕಾಶ ಕೊಡದೇ, ಅವರನ್ನು ಪರಿಪೂರ್ಣವೆಂದು ಕಲ್ಪಿಸುತ್ತೇವೆ. ಆದರೆ ವಾಸ್ತವದಲ್ಲಿ ಯಾರೂ ಪರಿಪೂರ್ಣರಲ್ಲ. ಪ್ರತಿಯೊಬ್ಬರೂ ತಪ್ಪು ಮಾಡುವ ಮಾನವರೇ. ನಾವು ಯಾರನ್ನಾದರೂ ಅಗಾಧವಾಗಿ ವಿಶ್ವಾಸಪಡಿದರೆ, ಅವರ ಎಲ್ಲಾ ಕ್ರಿಯೆಗಳನ್ನು ಪ್ರಶ್ನಿಸದೆ ಒಪ್ಪಿಕೊಳ್ಳುತ್ತೇವೆ. ಅವರು ಮಾಡಿದ ತಪ್ಪುಗಳು ಕಂಡರೂ ನೋಡದೆ ಹೋಗುತ್ತೇವೆ. ಇದರಿಂದಲೇ ಸುಲಭವಾಗಿ ನಮ್ಮ ಭಾವನೆಗಳನ್ನು ನೋಯಿಸಬಹುದಾದ ಸ್ಥಿತಿಗೆ ಬರುತ್ತೇವೆ. ನಮ್ಮ ಮೇಲಿನ ನಂಬಿಕೆಯ ಹಾದಿಯಲ್ಲಿ ನಡೆಯುವಾಗ ಅನೇಕ ಅಡೆತಡೆಗಳು, ಬೇರೆಯವರಿಂದ ಕೀಳರಿಮೆಗಳ ಪ್ರಹಾರ, ಟೀಕೆ ಟಿಪ್ಪಣಿ ಎದುರಾಗುವುದು ಸಾಮಾನ್ಯ. ಆದರೆ ಅದರ ಕುರಿತು ತಲೆ ಕೆಡಿಸಿಕೊಳ್ಳದೆ ಮುನ್ನಡೆದಾಗ ಮಾತ್ರ ಬದುಕಲ್ಲಿ ಎದುರಾಗುವ ಕೆಲವರಿಂದಲಾದರೂ ಬೆನ್ನು ತಟ್ಟಿ ಹುರಿದುಂಬಿಸುವ ಗಳಿಗೆಗಳು ನಮ್ಮದಾಗುವುದರಲ್ಲಿ ಅನುಮಾನವಿಲ್ಲ. ಆತ್ಮವಿಶ್ವಾಸ ಬೆಳೆಯಲು ಪ್ರಾರಂಭವಾಗುತ್ತದೆ. ನಂಬಿಕೆ ಬದುಕಿನ ಆಧಾರ ಬದುಕಿನ ಉನ್ನತೀಕರಣದಲ್ಲಿ ನಂಬಿಕೆ ತನ್ನ ಮೌಲ್ಯ ಕಳೆದುಕೊಳ್ಳದಿರಲಿ, ಮೌಢ್ಯದ ಪರಮಾವಧಿಯೂ ಆಗದಿರಲಿ ಎಂಬ ಆಶಯದೊಂದಿಗೆ, ಮಾನವೀಯ ಮೌಲ್ಯಗಳ ಪ್ರೀತಿಯ ಜೊತೆಗೆ ಒಂದಷ್ಟು ದಿನ ಬದುಕಿಬಿಡೋಣ.

# ವೈರುಧ್ಯಗಳ ನಡುವೆ ಹೆಣ್ಣಿನ ಬದುಕು



| ವೀಣಾ ಹೇಮಂತ್‌ಗೌಡ ಪಾಟೀಲ್



ಬಹುಶಹ ತನ್ನ ಜೀವಮಾನದಲ್ಲಿ ಓರ್ವ ಹೆಣ್ಣು ಅನುಭವಿಸುವ ನೋವು ಹತಾಶೆ ಸಂಕಟಗಳು ಒಂದೆಡೆಯಾದರೆ ತನ್ನ ವಿರುದ್ಧ ಇಡೀ ಸಮಾಜ ಹರಿಸುವ ಟೀಕಾ ಪ್ರಹಾರಗಳು ಮತ್ತೊಂದೆಡೆ. ಈ ಎಲ್ಲದರ ಮಧ್ಯದಲ್ಲಿ ಇಂದಿಗೂ ಕೂಡ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಹೋರಾಡುವ ಹೆಣ್ಣು ಮಕ್ಕಳದು ಅಕ್ಷರಶಃ ವೈರುಧ್ಯಗಳ ನಡುವಿನ ಬದುಕು.

ಸಾಮಾಜಿಕ ವ್ಯವಸ್ಥೆಯ ದಿಕ್ಕಿಗೆ ನಡೆಯದೆ ಹೋದರೆ ಬದುಕನ್ನೇ ದುರ್ಬರವಾಗಿಸುವ, ಆಕೆಯ ಅಸ್ತಿತ್ವವನ್ನೇ ಪ್ರಶ್ನಿಸುವ ಆಕೆಯ ವೈಚಾರಿಕತೆಯ ಕುರಿತು ಕೆಟ್ಟದಾಗಿ ಮಾತನಾಡಿಕೊಳ್ಳುವ ಸಮಾಜ ಹೆಣ್ಣು ಮಕ್ಕಳಿಗಾಗಿ ತನ್ನದೇ ಆದ ಮಾನದಂಡಗಳನ್ನು ರೂಪಿಸಿದೆ.

ಬಹುತೇಕ ಬಾರಿ ಈ ಮಾನದಂಡಗಳು ಹೆಣ್ಣು ಮಕ್ಕಳ ಸುರಕ್ಷತೆಗೆಂದು ಮಾಡಲ್ಪಟ್ಟಿದ್ದರೂ ಅವುಗಳ ಹಿಂದಿನ ಹುನ್ನಾರ ಆಕೆಯನ್ನು ಆಕ್ರಮಣಕಾರಿಯಾಗದಂತೆ, ಸೊಲ್ಲೆತ್ತದಂತೆ ತನ್ನ ಮೇಲಾಗುವ ಮಾನಸಿಕ, ದೈಹಿಕ ಅತ್ಯಾಚಾರ ಅನಾಚಾರಗಳನ್ನು ಮೌನವಾಗಿ ಸಹಿಸಿಕೊಳ್ಳುವಂತೆ ಮಾಡಿವೆ ಎಂಬುದು ಸರ್ವವಿದಿತ.

ನಮ್ಮ ಸಮಾಜದಲ್ಲಿ ತಾಯಿ, ಸಹೋದರಿ, ಸ್ನೇಹಿತೆ, ಪತ್ನಿ, ಮಗಳು ಹೀಗೆ ಎಲ್ಲ ರೀತಿಯಿಂದಲೂ ಪುರುಷನೊಂದಿಗೆ ಆತನ ಬದುಕಿನ ಅವಿಭಾಜ್ಯ ಅಂಗವಾಗಿ ಇರುವ ಹೆಣ್ಣು ಮಕ್ಕಳು ಆತನ ದೈನಂದಿನ ಬದುಕು ನಡೆಸಲು ಅಗತ್ಯವಾದ ಅನುಕೂಲತೆಗಳನ್ನು ಒದಗಿಸಿ ಕೊಡುವವರೆಗೆ ಮಾತ್ರ ಆತ ಅವರೊಂದಿಗೆ ಉತ್ತಮ ಸಂಬಂಧವನ್ನು ಕಾಯ್ದುಕೊಳ್ಳಬಲ್ಲ.

ಒಂದೊಮ್ಮೆ ಆತನಿಗೆ ಎಲ್ಲ ರೀತಿಯಲ್ಲಿಯೂ ಸಹಾಯ ಸಹಕಾರ ಮಾಡುವ ಹೆಣ್ಣು ಮಕ್ಕಳು ಮುನಿಸಿಕೊಂಡು ಆ ಕೆಲಸದಲ್ಲಿ ಹಿಂಜರಿದರೆ, ಮಾಡದೆ ಹೋದರೆ ಸ್ವತಹ ಆತನೇ ಅವರನ್ನು ತನ್ನ ಮಾತಿನ ಬಾಣಗಳ ಮೂಲಕ, ಕೊಂಚ ಅನಾಗರಿಕನಾದರೆ ಕೈ ಎತ್ತುವ ಮೂಲಕ, ತಿಳುವಳಿಕೆಯೇ ಇಲ್ಲದವನಾದರೆ ದುಶ್ಚಟಗಳ ದಾಸನಾಗಿ ಅದಕ್ಕೂ ಕೂಡ ಹೆಣ್ಣು ಮಕ್ಕಳನ್ನೇ ಹೊಣೆಯಾಗಿಸುವ ಸಮಾಜದ ಪ್ರಬಲ ವರ್ಗಕ್ಕೆ ಸೇರಿದ್ದಾನೆ.

ಪಿತೃ ಸತ್ತಾತ್ಮಕ ಅಥವಾ ಪುರುಷ ಸ್ವಾಮ್ಯದ ನಮ್ಮ ಭಾರತೀಯ ಸಮಾಜದಲ್ಲಿ ಸ್ತ್ರೀಯನ್ನು ಸದಾ ಪುರುಷನಿಗೆ ಅನುಯಾಯಿಯಾಗಿ, ಹಿಂಬಾಲಕಳಾಗಿ ಇರಲು ಒತ್ತಾಯಿಸಲಾಗುತ್ತದೆಯೇ ಹೊರತು ಅವರಿಬ್ಬರೂ ಪರಸ್ಪರರಿಗೆ ಪೂರಕವಾಗಿರಲು ಅಲ್ಲ.

ಹೊರಗಿನಿಂದ ದುಡಿದು ತಂದು ಹಾಕುವುದು ತನ್ನ ಕರ್ತವ್ಯ ಎಂದು ಭಾವಿಸುವ ಗಂಡಸರು ಮನೆವಾರ್ತೆಯನ್ನು ನಿರ್ವಹಿಸುವುದು ತನ್ನ ಪತ್ನಿಯ ಕರ್ತವ್ಯ ಎಂದೇ ತಿಳಿಯುತ್ತಾರೆ. ಇದರಲ್ಲಿ ತಪ್ಪಿಲ್ಲ.

ಹೆಣ್ಣು ಮಕ್ಕಳು ಗಂಡ, ಮನೆ,ಮಕ್ಕಳು,ಅತ್ತೆ–ಮಾವ ಕುಟುಂಬದ ಎಲ್ಲ ಆಗುಹೋಗುಗಳನ್ನು ನೋಡಿಕೊಳ್ಳುವುದರ ಜೊತೆಗೆ ಕಾಲಕಾಲಕ್ಕೆ ಮನೆಯ ಎಲ್ಲಾ ಸದಸ್ಯರಿಗೆ ಅವರ ಅವಶ್ಯಕತೆಗಳನ್ನು ಪೂರೈಸುವ ಕಾರ್ಯನಿರ್ವಹಿಸುವುದರಲ್ಲಿ ಖಂಡಿತವಾಗಿಯೂ ಯಾವುದೇ ತಪ್ಪಿಲ್ಲ. ಇದೆಲ್ಲವೂ ಆಕೆಯ ಕರ್ತವ್ಯದ ಪರಿಧಿಯಲ್ಲಿ ಬರುತ್ತದೆ ಅಲ್ಲವೇ ?

ಆದರೆ ಕರ್ತವ್ಯದ ಜೊತೆ ಜೊತೆಗೆ ನಾಣ್ಯದ ಇನ್ನೊಂದು ಮುಖವಾದ ಹಕ್ಕುಗಳು ಕೂಡ ಪರಿಪಾಲಿಸಲ್ಪಡಬೇಕು ಅಲ್ಲವೇ? ಹೆಣ್ಣು ಮಕ್ಕಳು ಕೂಡ ತನ್ನದೇ ಆದ ಅಸ್ಮಿತೆಯನ್ನು ಬೆಳೆಸಿಕೊಳ್ಳಲು ಇಚ್ಚಿಸುವುದು ಹಾಗೂ ಅದಕ್ಕೆ ಪೂರಕವಾಗಿ ತನ್ನ ಬದುಕನ್ನು ರೂಪಿಸಿಕೊಳ್ಳುವುದು ಕೂಡ ಆಕೆಯ ಹಕ್ಕಲ್ಲವೇ?

ತನ್ನ ಬದುಕಿನ ತೀರ್ಮಾನಗಳನ್ನು ತಾನೇ ತೆಗೆದುಕೊಳ್ಳುವ ಹಕ್ಕು ಆಕೆಗೆ ಖಂಡಿತವಾಗಿಯೂ ಇದೆ ಅಲ್ಲವೇ? ಹಾಗೊಂದು ವೇಳೆ ಆಕೆ ತನ್ನ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಬಾಹ್ಯ ಜಗತ್ತಿನ ಭಾಗವಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಇಚ್ಚಿಸುವುದಾದರೆ ಆಕೆಯ ಈ ಇಚ್ಛೆಗಳಿಗೆ ಅಡ್ಡಿಯಾಗಬಾರದು ಎಂಬುದನ್ನು ಅರಿತು ಅದಕ್ಕೆ ಪೂರಕವಾಗಿ ನಡೆದುಕೊಳ್ಳುವುದು ಕೂಡ ಪುರುಷರ ಕರ್ತವ್ಯ ಅಲ್ಲವೇ ?

ವೈರುಧ್ಯಗಳ ಮಧ್ಯದಲ್ಲಿ ಹೆಣ್ಣು ಮಕ್ಕಳ ಬದುಕು ಸಾಗುತ್ತದೆ ಎಂದು ಹೇಳಲು ಕಾರಣ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಂಶವನ್ನು ಮುನ್ನಡೆಸುವ ಗುರುತರ ಜವಾಬ್ದಾರಿಯನ್ನು ಮನೆಯ ಮಗ ನಿರ್ವಹಿಸುತ್ತಾನೆ ಮನೆಯ ಮಗನಿಂದಲೇ ತಂದೆ ತಾಯಿಗಳ ಲೌಕಿಕ ಹಾಗೂ ಪಾರಮಾರ್ಥಿಕ ಬದುಕಿನ ಮುಕ್ತಿ ಎಂಬ ಸನಾತನ ಭಾವ. ಬಹುಶಹ ಇದರಲ್ಲಿ ತಪ್ಪಿಲ್ಲದೆ ಇರಬಹುದು. ತಂದೆ ತಾಯಿಗಳ ಪ್ರೀತಿಯ ಮುದ್ದು ಮಗಳಾಗಿ ಹುಟ್ಟುವ ಹೆಣ್ಣು ಮಕ್ಕಳು ಚಿಕ್ಕಂದಿನಿಂದಲೂ ಅಡುಗೆ, ಹಾಡು, ಹಸೆ, ಮನೆವಾರ್ತೆಯ ಕೆಲಸಗಳಲ್ಲಿ ಮಾತ್ರ ಪರಿಣಿತರಾಗಲು ನಮ್ಮ ಸಮಾಜದಲ್ಲಿ ಉತ್ತೇಜನ ದೊರೆಯುತ್ತದೆಯೇ ಹೊರತು ಶೈಕ್ಷಣಿಕವಾಗಿ ಅಲ್ಲ.

ಹೆತ್ತವರು ಉಟ್ಟು ತೊಟ್ಟು ಸಿಂಗರಿಸಿ ನಕ್ಕು ನಲಿವ ತಮ್ಮ ಹೆಣ್ಣು ಮಕ್ಕಳನ್ನು ಯೋಗ್ಯ ವರನಿಗೆ ಕೊಟ್ಟು ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಪೂರೈಸಿ ಕೃತಾರ್ಥರಾದವು ಎಂಬ ಭಾವದಲ್ಲಿ ಇರುತ್ತಾರೆ. ಯಾವಾಗ ಹೆಣ್ಣು ಮಕ್ಕಳು ಅವರಿಗೆ ಜವಾಬ್ದಾರಿಯಾಗಿ ತೋರುತ್ತಾರೆಯೋ ಆಗ ಅವರನ್ನು ಮತ್ತೊಂದು ಮನೆಗೆ ಹೊತ್ತು ಹಾಕುವ, ಸಾಗಿಸುವ ಹುನ್ನಾರ ನಡೆಯುತ್ತದೆ. ಇದರಲ್ಲಿ ಖಂಡಿತವಾಗಿಯೂ ತಪ್ಪಿಲ್ಲ, ನಿಜ... ಅದರೆ ಒಂದೊಮ್ಮೆ ಬದುಕಿನ ಆಕಸ್ಮಿಕ ತಿರುವುಗಳಲ್ಲಿ ಬಾಣ ಗುರಿ ತಪ್ಪಿ ಮರಳಿ ಬರುವಂತೆ ಹೆಣ್ಣು ಮಕ್ಕಳ ಬದುಕು ಹಳಿ ತಪ್ಪಿ ಆಕೆ ಪಾಲಕರ ಆಸರೆ ಪಡೆಯಬೇಕಾದ ಸಂದರ್ಭ ಬಂದಾಗ ಅದನ್ನು ನಿಭಾಯಿಸುವ ಶಕ್ತಿ ಅವರಿಗೆ ಇರುತ್ತದೆಯೇ ? ಎಲ್ಲಿಯವರೆಗೆ ಆಕೆ ಪಾಲಕರ ಅನುಕಂಪ, ಕರುಣೆ, ಒಡಹುಟ್ಟಿದವರ ಅಸಹನೆಗೆ ಕಾರಣವಾಗುತ್ತಾ ತನ್ನ ಬದುಕು ಹೀಗಾಗಲು ಕಾರಣವಾದ ವಿಧಿಯನ್ನು ಹಳಿಯುತ್ತಾ ತನ್ನ ಅಸಹಾಯಕತೆಗೆ ನೊಂದು ನಿಟ್ಟುಸಿರುಡುತ್ತಾ ಬದುಕಬೇಕು..... ಆಕೆಗೆ ಬದುಕಿನಲ್ಲಿ ಸೆಕೆಂಡ್ ಆಪ್ಷನ್ ಇಲ್ವೇ ?

ಕೇವಲ ಹತ್ತು ನಿಮಿಷಗಳ ಜಾಲಿ ರೈಡ್ ಎಂದು ನಾವು ಹತ್ತುವ ಎಲ್ಲ ರೀತಿಯಲ್ಲಿಯೂ ಸುಸಜ್ಜಿತವಾದ ಬೋಟ ನಲ್ಲಿ ಎಲ್ಲ ಸುರಕ್ಷತಾ ಕ್ರಮಗಳನ್ನು ಕೈಗೊಂಡರೂ ಕೂಡ ಪ್ರತಿಯೊಬ್ಬ ಪ್ರಯಾಣಿಕರಿಗೂ ಲೈಫ್ ಜಾಕೆಟ್ ಗಳನ್ನು ಕಡ್ಡಾಯವಾಗಿ ಹಾಕಿಕೊಳ್ಳಲು ಒತ್ತಾಯಿಸುತ್ತಾರೆ. ಅಂತದ್ದರಲ್ಲಿ ತಮ್ಮ ಇಡೀ ಬದುಕನ್ನೇ ತಾವು ನಡೆಸಲು ಅತ್ಯವಶ್ಯಕವಾದ ಶಿಕ್ಷಣ ಎಂಬ ಲೈಫ್ ಜಾಕೆಟ್ ಅನ್ನು ತಮ್ಮ ಮಕ್ಕಳಿಗೆ ತೊಡಿಸಲು ಮುಜುಗರವೇಕೆ? ಉದ್ಯೋಗ ಎಂಬ ಸುರಕ್ಷಿತ ಆರ್ಥಿಕ ವ್ಯವಸ್ಥೆಯನ್ನು ಆಕೆ ಹೊಂದಲು ಅನುಕೂಲ ಮಾಡಿಕೊಡಲು ತಪ್ಪಿತಸ್ಥ ಭಾವನೆ ಏಕೆ ?

ಅದೆಷ್ಟೇ ಶೂರಾದಿ ಶೂರ, ವೀರಾಧಿವೀರ ವ್ಯಕ್ತಿಯೇ ಇರಲಿ ಯುದ್ಧಕ್ಕೆ ಹೊರಡುವಾಗ ತನ್ನ ದೇಹದ ಸುತ್ತಲೂ ಉಕ್ಕಿನ ರಕ್ಷಾ ಕವಚಗಳನ್ನು, ತಲೆಗೆ ಉಕ್ಕಿನ ಶಿರಸ್ತ್ರಾಣವನ್ನು ಧರಿಸಲು ಕಾರಣ ಆತನಿಗೆ ತನ್ನ ಮೇಲೆ ನಂಬಿಕೆ ಇಲ್ಲವೆಂದಲ್ಲ ಬದಲಾಗಿ ಅಷ್ಟ ದಿಕ್ಕುಗಳಿಂದ ಅನಿರೀಕ್ಷಿತವಾಗಿ ತನಗೆ ಬಂದೆರಗಬಹುದಾದ ತೊಂದರೆಗಳಿಂದ ತಪ್ಪಿಸಿಕೊಳ್ಳಲು.

ಅಂತೆಯೇ ಬದುಕಿನ ಯುದ್ಧದಲ್ಲಿ ಅನಿರೀಕ್ಷಿತವಾಗಿ ಬಂದೆರಗುವ ನೂರೆಂಟು ವಿಘ್ನಗಳಿಂದ ತಮ್ಮ ಹೆಣ್ಣು ಮಕ್ಕಳನ್ನು ಪಾರುಗಾಣಿಸಲು, ಅವರಿಗೆ ಶೈಕ್ಷಣಿಕ ಅರ್ಹತೆ,ಉದ್ಯೋಗ, ಕೌಟುಂಬಿಕ ಹಾಗೂ ಸಾಮಾಜಿಕ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಲು ಸಜ್ಜಾಗಿಸುವುದು ಸೂಕ್ತ ಅಲ್ಲವೇ ?

ಬದುಕಿನ ಎಲ್ಲಾ ಹಂತದಲ್ಲಿಯೂ ಎಲ್ಲ ಸಮಯದಲ್ಲಿಯೂ ಹೆಣ್ಣು ಮಕ್ಕಳಿಗೆ ಒಬ್ಬ ಮನೋ ದೈಹಿಕ ಬಾಡಿಗಾರ್ಡ್ ಅವಶ್ಯಕತೆ ಇಲ್ಲ. ಆಕೆ ಖುದ್ದು ಓರ್ವ ವೀರ ಯೋಧಳು. ಮನೆಯ ನೂರೆಂಟು ಸಮಸ್ಯೆಗಳನ್ನು ಬಗೆಹರಿಸುವ ದೈನಂದಿನ ಬದುಕಿನ ಹತ್ತು ಹಲವು ಸವಾಲುಗಳನ್ನು ಎದುರಿಸುತ್ತಾ ಪುರುಷನಿಗೆಂತಲೂ ಹೆಚ್ಚು ಮಾನಸಿಕವಾಗಿ ಗಟ್ಟಿಯಾಗಿರುವ ಹೆಣ್ಣು ಮಕ್ಕಳು ತಮಗೆ ತಾವೇ ರಕ್ಷಾ ಕವಚವಾಗಿ ಪರಿಣಮಿಸಬಲ್ಲರು.

ಅರೆ ! ನಮ್ಮ ಹೆಣ್ಣುಮಕ್ಕಳಿಗೆ ನಾವು ಒಳ್ಳೆಯ ಮನೆತನಕ್ಕೆ ಮದುವೆ ಮಾಡಿಕೊಟ್ಟಿದ್ದೇವೆ ಆ ಕುಟುಂಬದವರು ಆಕೆಯನ್ನು ಎಲ್ಲ ರೀತಿಯಿಂದಲೂ ನೋಡಿಕೊಳ್ಳಲು ಸಮರ್ಥರು. ಒಂದು ವೇಳೆ ಅವಘಡಗಳು ಸಂಭವಿಸಿದರೆ ನೋಡಿಕೊಳ್ಳಲು ನಾವಿದ್ದೇವಲ್ಲ ಎಂಬ ಭಾವ ಖಂಡಿತವಾಗಿಯೂ ಬೇಡ.... ಆಕೆ ನಿಮ್ಮಿಂದ ಅಕ್ಕರೆ, ಪ್ರೀತಿ, ವಿಶ್ವಾಸ, ನಂಬಿಕೆಗಳನ್ನು ಬಯಸುತ್ತಾಳೆಯೇ ಹೊರತು ಕರುಣೆ, ಅನುಕಂಪಗಳನ್ನಲ್ಲ. ಬದುಕಿನುದ್ದಕ್ಕೂ ಆಕೆ ಅಸಹನೆಗೆ ಈಡಾಗುವಂತೆ, ಮತ್ತೊಬ್ಬರ ಕರುಣೆಗೆ ಪಾತ್ರ ವಾಗುವಂತೆ, ಮಾನಸಿಕವಾಗಿ ವ್ಯಥೆಪಡುವಂತೆ ಬದುಕುವುದು ಬೇಡ.

ಆಕೆ ಸ್ವಾವಲಂಬಿಯಾಗಿ ತನ್ನ ಬದುಕಿನ ಚುಕ್ಕಾಣಿಯನ್ನು ತಾನೇ ಹಿಡಿಯಲಿ.

ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಬೇಕಾಗಿರುವುದು ಅವರ ಆತ್ಮ ಗೌರವಕ್ಕೆ ಚ್ಯುತಿ ಬರದೇ ಇರುವಂತೆ

ಅವರೊಂದಿಗೆ ವರ್ತಿಸುವ ಜನರು.

ಎಲ್ಲರನ್ನೂ ನೆಲೆಗಾಣಿಸುವ ಆಕೆಗೆ ಸ್ವಂತದೊಂದು ನೆಲೆ ಇಲ್ಲ ಎಂಬುದು ವಿಪರ್ಯಾಸ. ಸತ್ತ ಮನೆಯಲ್ಲಿ ಮುಂದಿನ ಎರಡು ದಶಕಗಳ ನಂತರ ಮದುವೆಯಾಗಿ ಹೋಗುವ ಆಕೆ ಹೊರಗಿನವಳು ಎಂದೂ.... ಅದಕ್ಕೆ ಪೂರಕವಾಗಿ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಮಾತುಗಳನ್ನು, ಏನನ್ನಾದರೂ ಮಾಡಲು ಇಚ್ಚಿಸಿ ಆ ಇಚ್ಛೆಯನ್ನು ವ್ಯಕ್ತಪಡಿಸಿದಾಗ ನಿನ್ನ ಗಂಡನ ಮನೆಯಲ್ಲಿ ಮಾಡಿಕೋ ಎಂಬ ಅತಿರೇಕಗಳನ್ನು ಕೇಳುತ್ತಲೇ ಹೆಣ್ಣು ಮಕ್ಕಳು ಬೆಳೆಯುತ್ತಾರೆ.

ಇನ್ನು ಗಂಡನ ಮನೆಯಲ್ಲಿ ಹೊರಗಿನಿಂದ ಬಂದವಳು, ಆಕೆಯ ಬದುಕಿನ ಸರ್ವ ಆಗುಹೋಗುಗಳು ತಮ್ಮ ಮರ್ಜಿಯ ಪ್ರಕಾರ ನಡೆಯಲೇಬೇಕು ಎಂಬ ಭಾವ ಮನೆಯವರಲ್ಲಿರುತ್ತದೆ. ಬಹಳ ಕಾಲದವರೆಗೆ.... ಕೆಲವೊಮ್ಮೆ ಆಕೆ ಕಾಲವಾಗುವವರೆಗೆ ಆಕೆಯನ್ನು ತಮ್ಮವಳು ಎಂದು ಒಪ್ಪಿಕೊಳ್ಳುವುದಿಲ್ಲ.

ಇದು ಬಹುತೇಕ ಹೆಣ್ಣು ಮಕ್ಕಳನ್ನು ಎಲ್ಲ ಕಡೆ ಎಲ್ಲವನ್ನು ಅನುಭವಿಸಿ ಒಪ್ಪಿ ಅಪ್ಪಿಕೊಂಡರೂ ಕೂಡ ಎಲ್ಲಿಯೂ ಸಲ್ಲದವರು ಎಂಬ ಅಭದ್ರತಾ ಭಾವನೆಯನ್ನು ಮನದಲ್ಲಿ ಹೊತ್ತು ಇರುವ ಅನಿವಾರ್ಯತೆಯನ್ನು ಸೃಷ್ಟಿಸುತ್ತದೆ.



ಇಂತಹ ಹತ್ತು ಹಲವು ವೈರುಧ್ಯತೆಗಳ ನಡುವೆ ಹೆಣ್ಣಿನ ಬದುಕು ಸಾಗುತ್ತದೆ. ಸೂಕ್ಷ್ಮ ಮನಸ್ಥಿತಿಯುಳ್ಳ ಹೆಣ್ಣು ಮಕ್ಕಳು ಅತಂತ್ರ ಭಾವದಿಂದ ಕೊರಗುತ್ತಾರೆ ಮರುಗುತ್ತಾರೆ. ಎಲ್ಲರನ್ನು ಎಲ್ಲವನ್ನು ಪೊರೆಯುವ ಅವರು ಖುದ್ದು ತಮ್ಮ ಮನಸ್ಥಿತಿಯನ್ನು ಸ್ಥಿರವಾಗಿ ಇಟ್ಟುಕೊಳ್ಳಲು ಸಾಧ್ಯವಾಗದ ಪರಿಸ್ಥಿತಿಯನ್ನು ತಲುಪುತ್ತಾರೆ.

ಇಂತಹ ವೈರುಧ್ಯಗಳ ನಡುವೆ ಬದುಕುವ ಲಕ್ಷಾಂತರ ಹೆಣ್ಣು ಮಕ್ಕಳ ಬದುಕು ಹಸನಾಗುವ ನಿಟ್ಟಿನಲ್ಲಿ ಒಂದು ಬೃಹತ್ ಆಂದೋಲನದ ಅವಶ್ಯಕತೆ ಇದೆ... ಅಂತಹ ಚಳುವಳಿ ಹಲವಾರು ವರ್ಷಗಳ ಕಾಲ ಜಾರಿಯಲ್ಲಿದ್ದು ಹೆಣ್ಣು ಮಕ್ಕಳ ಬದುಕಿನಲ್ಲಿ ನವ ಮನ್ವಂತರವನ್ನು ತರಲಿ ಎಂದು ಹಾರೈಸುವ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,